ಸಂಪುಟ: 04 ಸಂಚಿಕೆ: 210 ಪುಟಗಳು: 08 ಭಾನುವಾರ 13 ಅಕ್ಟೋಬರ್ 2023

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿಯವರಿಂದ ರಾವಣ ದಹನ

• ಉದಯವಾಹಿನಿ, ನವದೆಹಲಿ

ಶನಿವಾರ ದೇಶದಾದ್ಯಂತ ವಿಜಯದಶಮಿಯನ್ನು ಸಂಭ್ರಮ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಮಾಧವ್ ದಾಸ್ ಪಾರ್ಕ್‌ನಲ್ಲಿ ಶ್ರೀ ಧಾರ್ಮಿಕ ಲೀಲಾ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಕೈಯಲ್ಲಿ ಬಿಲ್ಲು ಬಾಣ ಹಿಡಿದು ರಾವಣ ದಹನ ಮಾಡಿದರು. ಇದಕ್ಕೂ ಮುನ್ನ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ಮೋದಿ ಅವರು ಉದ್ಯಾನವನದಲ್ಲಿ ಭಗವಾನ್ ರಾಮ, ಲಕ್ಷ್ಮಣನ ಪಾತ್ರಗಳನ್ನು ನಿರ್ವಹಿಸುವ ಕಲಾವಿದರ ಹಣೆಯ ಮೇಲೆ 'ತಿಲಕ'ವನ್ನು ಇಟ್ಟು ನಮಿಸಿದರು. ವಿಜಯದಶಮಿ, ಅಥವಾ ದಸರಾ, ಪ್ರತಿ ವರ್ಷ ನವರಾತ್ರಿಯ ಕೊನೆಯಲ್ಲಿ ಆಚರಿಸಲಾಗುವ ಪ್ರಮುಖ ಹಿಂದೂ ಹಬ್ಬವಾಗಿದೆ. ಹಿಂದೂ ಲೂನಿ-ಸೌರ ಕ್ಯಾಲೆಂಡರ್‌ನಲ್ಲಿ ಏಳನೆಯ ಅಶ್ವಿನ್ ತಿಂಗಳ ಹತ್ತನೇ ದಿನದಂದು ಇದನ್ನು ಆಚರಿಸಲಾಗುತ್ತದೆ.

## ಹುಬ್ಬಳ್ಳಿ ಗಲಭೆ: ಕೇಸ್ ಹಿಂಪಡೆದಿರುವುದು ದೊಡ್ಡ ದುರಂತ: ಶೆಟ್ಟರ್

• ಉದಯವಾಹಿನಿ, ಬೆಳಗಾವಿ

ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಮತ್ತು ಪೊಲೀಸ್ ಠಾಣೆಯ ಮೇಲಿನ ದಾಳಿಗೆ ಸಂಬಂಧಪಟ್ಟಂತೆ ಸರಕಾರ ಆರೋಪಿಗಳ ಮೇಲಿನ ಪ್ರಕರಣ ಹಿಂದಕ್ಕೆ ಪಡೆದಿರುವುದು ಬಹು ದೊಡ್ಡ ದುರಂತ ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಜಗದೀಶ ಶೆಟ್ಟರ್ ಶನಿವಾರ ರಾಜ್ಯ ಸರಕಾರದ ವಿರುದ್ಧ ಕಿಡಿ ಕಾರಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ ''ಅಲ್ಪಸಂಖ್ಯಾಕರ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ಸರಕಾರ ಈ ರೀತಿ ಕಾನೂನು ಬಾಹಿರವಾಗಿ ಸಚಿವ ಸಂಪುಟದ ಸಂವಿಧಾನ ಹಕ್ಕನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಸರಕಾರದ ಮಟ್ಟದಲ್ಲಿ ನಿರ್ಣಯ ಕೈಗೊಂಡು ಕೇಸ್‌ಗಳನ್ನು ಹಿಂದಕ್ಕೆ ಪಡೆಯುವಂತಹ ಪ್ರಕರಣ ಇದಲ್ಲ'' ಎಂದು ತೀವ್ರ ವಾಗ್ದಾಳಿ ನಡೆಸಿದರು. ಈ ಘಟನೆಗೆ ಸಂಬಂಧಪಟ್ಟಂತೆ ಬಹಳ ಗಂಭೀರವಾದ ಪ್ರಕರಣಗಳು ದಾಖಲಾಗಿವೆ. ಹೀಗಿರುವಾಗ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಕ್ಕೈಗೊಂಡು ಆರೋಪಿಗಳ ಮೇಲಿನ ಪ್ರಕರಣ ಕೈಬಿಡಲು ಬರುವದೇ ಇಲ್ಲ. ಸಚಿವ ಸಂಪುಟ ಸಭೆಯಲ್ಲಿ ಗೃಹ ಇಲಾಖೆ ಮೂಲಕ ಬಂದಿದ್ದ ಈ ವಿಷಯವನ್ನು ತೆಗೆದುಕೊಂಡು ಹೋಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಇಲಾಖೆ ಏನು ವರದಿ ನೀಡಿದೆ. ಇಲಾಖೆಯ ಹಿರಿಯ ಅಧಿಕಾರಿಗಳು ಏನು ವರದಿ ಕೊಟ್ಟಿದ್ದಾರೆ. ಕಾನೂನು ತಜ್ಞರು ಏನು ಸಲಹೆ ನೀಡಿದ್ದಾರೆ ಎಂಬುದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲಿ'' ಎಂದು ಸವಾಲು ಹಾಕಿದರು.

## ಸರಕಾರದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕೇಂದ್ರ ಕಾನೂನು ಸಚಿವರಿಗೆ ಪತ್ರ


• ಉದಯವಾಹಿನಿ, ಬೆಂಗಳೂರು

ರಾಜ್ಯದ ಕಾಂಗ್ರೆಸ್ ಸರಕಾರದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕೇಂದ್ರ ಸರಕಾರದ ಕಾನೂನು ಸಚಿವರಿಗೆ ಇವತ್ತೇ ಪತ್ರ ಬರೆಯುವುದಾಗಿ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪ್ರಕಟಿಸಿದರು. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರಕಾರವು ಈಚೆಗೆ ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಹಾಕಿದವರು, ಕಲ್ಲು ತೂರಿದವರು, ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಗಲಭೆ ಮಾಡಿದ 100-150 ಜನ ಕ್ರಿಮಿನಲ್‌ಗಳ ಮೇಲಿನ ಕೇಸುಗಳನ್ನು ಹಿಂಪಡೆದಿದೆ. ಈ ಮೂಲಕ ಒಂದು ಸಮುದಾಯವನ್ನು ಓಲೈಕೆ ಮಾಡಲು ತುಷ್ಟೀಕರಣ ರಾಜಕೀಯ ಮಾಡಿದೆ ಎಂದು ಖಂಡಿಸಿದರು.

## ರಾಜ್ಯೋತ್ಸವಕ್ಕೆ ಹೊಸ ರೂಲ್ಸ್ ಸಂಘಟನೆಗಳಿಂದ ಡೆಡ್ ಲೈನ್

• ಉದಯವಾಹಿನಿ, ಬೆಂಗಳೂರು

ನವೆಂಬರ್ 1 ಕನ್ನಡ ರಾಜ್ಯೋತ್ಸವ ಇದ್ದಿದ್ದು ಈ ಹಿನ್ನೆಲೆಯಲ್ಲಿ ರಾಜ್ಯೋತ್ಸವಕ್ಕೆ ಸರ್ಕಾರದ ಹೊಸ ರೂಲ್ಸ್ ಇತ್ತ ಸರ್ಕಾರಕ್ಕೆ ಕನ್ನಡ ಪರ ಸಂಘಟನೆಗಳಿಂದ ಡೆಡ್ಲೈನ್ ನೀಡಲಾಗಿದೆ. ಕನ್ನಡ ಕಲಿಯಲ್ಲ ಅನ್ನೋರು ಕನ್ನಡ ಕನ್ನಡ ಅನ್ಬೇಕು. ಸಿಟಿಯ ಐಟಿ ಬಿಟಿಗಳಲ್ಲಿ ಕನ್ನಡ ಬಾವುಟ ಹಾರ್ಸ್ಬೇಕು. ಮತ್ತೆ ಸರ್ಕಾರಕ್ಕೆ ಗಡುವು ನೀಡಿದ ಕನ್ನಡ ಪರ ಸಂಘಟನೆಗಳು ಕನ್ನಡ ನಾಮಫಲಕ ಕಡ್ಡಾಯವಾಗಿ ನಿಗದಿಪಡಿಸಿದಂತೆ ಅಳವಡಿಕೆ ಮಾಡ್ಬೇಕು. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು ಬಹುದಿನಗಳ ಸಮಸ್ಯೆ ಮಹಾದಾಯಿ ಯೋಜನೆ ವಿವಾದ ಇತ್ಯರ್ಥ ಮಾಡ್ಬೇಕು ನವೆಂಬರ್ ಒಂದರಿಂದ ಕಡ್ಡಾಯ ಕನ್ನಡ ನಾಮಫಲಕ ಅಳವಡಿಕೆ ಆಗ್ಬೇಕು. ಹಾಗೆ ಬರೀ ಮಾತಲ್ಲಿ ಹೇಳಿದ್ರೆ ಸಾಕಾಗೋಲ್ಲ ಆದೇಶವಾಗಿ ಅನುಷ್ಠಾನಗೊಳಿಸಬೇಕು ಸರ್ಕಾರ ಕನ್ನಡದ ಕುರಿತಾಗಿ ತೆಗೆದುಕೊಂಡು ನಿರ್ಧಾರ ಜಾರಿ ಬರ್ಬೇಕು ನವೆಂಬರ್ 1 ರ ಒಳಗೆ ಎಲ್ಲಾವೂ ಕಟ್ಟುನಿಟ್ಟಾಗಿ ಅನುಷ್ಠಾನ ಮಾಡ್ಬೇಕು. ಇಲ್ಲಾಂದ್ರೆ ರಾಜ್ಯವ್ಯಾಪಿ ಪ್ರತಿಭಟನೆ ಎಚ್ಚರಿಕೆ ಕೊಟ್ಟ ಕರವೇ ಪ್ರವೀಣ್ ಶೆಟ್ಟಿ



ಮೈಸೂರು ದಸರಾ ಎಲ್ಲೆಲ್ಲೂ ಸಿಂಗಾರ

## ಅಂಬಾರಿ ಮೇಲೆ ವಿರಾಜಮಾನಳಾದ
# ಚಾಮುಂಡೇಶ್ವರಿ ವೈಭವದ ಜಂಬೂಸವಾರಿ



● ಬನ್ನಿಮರಕ್ಕೆ ಪೂಜೆ ಸಲ್ಲಿಸಿದ ರಾಜವಂಶಸ್ಥ ಯದುವೀರ್ ● ಲಕ್ಷಾಂತರ ಜನ,ಕಳೆಗಟ್ಟಿದ ಮೈಸೂರು ದಸರಾ ● ವಿಶ್ವವಿಖ್ಯಾತ ಜಂಬೂ ಸವಾರಿಗೆ ಚಾಲನೆ; ಸಿಎಂ, ಡಿಸಿಎಂ ಭಾಗಿ ● ಬಣ್ಣ ಬಣ್ಣದ ಚಿತ್ತಾರಗಳಿಂದ ಕಂಗೊಳಿಸುತ್ತಿದೆ ಗಜ ಪಡೆ..!

• ಉದಯವಾಹಿನಿ, ಮೈಸೂರು

ಚಾಮುಂಡೇಶ್ವರಿ ತಾಯಿಗೆ ಸಿಎಂ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡುವ ವಿಶ್ವವಿಖ್ಯಾತ ಮೈಸೂರು ದಸರಾದ ಜಂಬೂ ಸವಾರಿಗೆ ಚಾಲನೆ ಶನಿವಾರ ನೀಡಿದ್ದಾರೆ. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ ಮಹದೇವಪ್ಪ, ಸಚಿವ ಶಿವರಾಜ್ ತಂಗಡಗಿ, ಮೈಸೂರು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಈ ವೇಳೆ ಉಪಸ್ಥಿತರಿದ್ದರು. 750 ಕೆ.ಜಿ.ತೂಕದ ಅಂಬಾರಿ ಒಳಗೆ ಪ್ರತಿಷ್ಠಾಪಿಸಲಾಗಿರುವ ಚಾಮುಂಡೇಶ್ವರಿ ತಾಯಿಯನ್ನು ಹೊತ್ತ ಗಜರಾಜ ಅಭಿಮನ್ಯು ಜೊತೆಗೆ ಗಜಪಡೆ ಅರಮನೆಯಿಂದ ಬನ್ನಿಮಂಟಪದವರೆಗೆ ಸುಮಾರು 5 ಕಿ.ಮೀಗೂ ಹೆಚ್ಚು ದೂರ ಸಾಗಲಿದೆ. ಈ ಐತಿಹಾಸಿಕ ಕ್ಷಣವನ್ನು ಕಣ್ತುಂಬಿಕೊಳ್ಳಲು ದೇಶ- ವಿದೇಶ ಮತ್ತು ನೆರೆಹೊರೆಯ ಜಿಲ್ಲೆಯ ಲಕ್ಷಾಂತರ ಮಂದಿ ರಾಜ ಬೀದಿಗಳಲ್ಲಿ ಕಿಕ್ಕಿರಿದು ಸೇರಿದ್ದಾರೆ. ಇದಕ್ಕೂ ಮುನ್ನ ನಾಡಿನ ಕಲೆ, ಸಂಸ್ಕೃತಿ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಬಿಂಬಿಸುವ ಸುಮಾರು 51 ಸ್ತಬ್ಧಚಿತ್ರಗಳು ಹಾಗೂ ಕಲಾ ತಂಡಗಳ ಮೆರವಣಿಗೆ ನಡೆಯಿತು.


ಬೆಳಗ್ಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸುವಿನೊಂದಿಗೆ ದೇವರನ್ನು ಅರಮನೆಗೆ ಕರೆತರಲಾಯಿತು. ಬೆಳಗ್ಗೆ 10.15ರ ಸುಮಾರಿಗೆ ಉತ್ತರ ಪೂಜೆಯ ಬಳಿಕ ಆನೆ ಬಾಗಿಲಿನ ಮುಂಭಾಗದಲ್ಲಿ ಜಟ್ಟಿ ಕಾಳಗ ಜರುಗಿತು. ಬಳಿಕ ವಿಜಯಯಾತ್ರೆ ಹೊರಡುವ ಕನ್ನಡಾಂಬೆ ದೇವಾಲಯದ ಒಳಭಾಗದಲ್ಲಿರುವ ಬನ್ನಿ ಮರಕ್ಕೆ ಯದುವೀರ್ ಪೂಜೆ ಸಲ್ಲಿಸಿದರು. ತದನಂತರ ರಾಜವಂಶಸ್ಥರು ಮನೆಗೆ ಮರಳುವ ಮೂಲಕ ನವರಾತ್ರಿಯ 10 ದಿನದ ಧಾರ್ಮಿಕ ಕಾರ್ಯಗಳು ಸಂಪನ್ನಗೊಂಡವು.

**ನಂದಿ ಧ್ವಜ ಸ್ತಂಭ :** ಮೈಸೂರಿನ ಮಹದೇವಪ್ಪ ಕುಟುಂಬದ ಐದು ತಲೆ ಮಾರುಗಳು ನಂದಿಧ್ವಜ ಸ್ತಂಭ ನಿರ್ವಹಣೆ ಮಾಡುತ್ತಿವೆ. 130 ಕೆಜಿ ತೂಕದ ನಂದಿಧ್ವಜ ಸ್ಥಂಭ ಒಟ್ಟು 33 ಅಡಿ ಇದೆ. ನಂದಿ ಧ್ವಜ ಸ್ತಂಭ ನಂದಿ ವಿಗ್ರಹ, ತಟ್ಟೆ, ಬಿರಡೆ, ಪಂಚ ಕಳಸ ಮತ್ತು ನಂದಿ ಧ್ವಜವನ್ನು ಒಳಗೊಂಡಿದೆ. ನಂದಿ ಧ್ವಜ ಸ್ತಂಭ ದಕ್ಷ ಬ್ರಹ್ಮನ ಕಥೆಯನ್ನು ಒಳಗೊಂಡಿದೆ. ಶಿವನ ಲಾಂಛನ ನಂದಿಗೆ ಪೂಜೆ ಮಾಡಲಾಗುತ್ತದೆ.

**750 ಕೆಜಿ ತೂಕದ ಚಿನ್ನದ ಅಂಬಾರಿ :** ಸುಮಾರು 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಅತ್ಯಂತ ಆಕರ್ಷಕವಾಗಿ ಕೆತ್ತಲಾಗಿದೆ. ಹಿಂದೆ ಅಂಬಾರಿಯಲ್ಲಿ ಮಹಾರಾಜರು ಕುಳಿತು ಸಾಗುತ್ತಿದ್ದರು. ಅಂಬಾರಿಯ ಒಳಗೆ ಇಬ್ಬರು ಕುಳಿತುಕೊಳ್ಳಲು ಅವಕಾಶವಿದೆ. ಅಂಬಾರಿಯಲ್ಲಿ ಕುಳಿತುಕೊಳ್ಳಲು ರತ್ನಗಂಬಳಿಯ ಮೆತ್ತನೆಯ ಹಾಸಿಗೆ ಇರುತ್ತದೆ. ಅಂಬಾರಿ ಮೇಲ್ಭಾಗದಲ್ಲಿ ಎರಡು ಪಂಚಕಳಸ, ಆಕರ್ಷಕ ಹೂವಿನ ಚಿತ್ತಾರವಿದೆ. ಅಂಬಾರಿ ಮೇಲೆ ಕೆಂಪು ಹಾಗೂ ಹಸಿರು ದೀಪ ಅಳವಡಿಸಲಾಗಿದೆ. ಅಂಬಾರಿಯಲ್ಲಿ ದರ್ಬಾರ್ ಹಾಲ್ ಮಾದರಿಯ 16 ಸ್ಥಂಭಗಳುಗಳಿವೆ.

ಕೆಳ ಭಾಗದಲ್ಲಿ ಸಿಂಹದ ಕಾಲು ಮತ್ತು ಮುಖ ಇದೆ. ರಾಜ ಆಳ್ವಿಕೆಯ ನಂತರ ಮೊದಲು ಅಂಬಾರಿಯಲ್ಲಿ ಕನ್ನಡಾಂಬೆ ಭುವನೇಶ್ವರಿ ಮೂರ್ತಿ ಮೆರವಣಿಗೆ ಮಾಡಲಾಯಿತು. ನಂತರ ನಾಡದೇವತೆ ತಾಯಿ ಚಾಮುಂಡೇಶ್ವರಿ ಮೂರ್ತಿ ಮೆರವಣಿಗೆ ಮಾಡಲಾಗುತ್ತಿದೆ.

### ಬನ್ನಿಮರಕ್ಕೆ ಯದುವೀರ್ ಪೂಜೆ



ವಜ್ರಮುಷ್ಠಿ ಕಾಳಗ ನಡೆದ ಬಳಿಕ ಪಲ್ಲಕ್ಕಿಯೊಂದಿಗೆ ವಿಜಯಯಾತ್ರೆಯಲ್ಲಿ ತೆರಳಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬನ್ನಿಮರಕ್ಕೆ ಪೂಜೆ ಸಲ್ಲಿಸಿದರು. ಸಾಂಪ್ರದಾಯಿಕ ಧಿರಿಸಿನೊಂದಿಗೆ ಯದುವೀರ್ ಒಡೆಯರ್ ಅವರು ಮೈಸೂರಿನ ಅರಮನೆ ಆವರಣದಲ್ಲಿರುವ ಬನ್ನಿ ಮರದ ಬಳಿ ಆಗಮಿಸಿ, ಅಲ್ಲಿ ವಿಜಯದಶಮಿ ಪೂಜಾ ವಿಧಿ ವಿಧಾನಗಳನ್ನು ಪೂರ್ಣಗೊಳಿಸಿದರು. ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ಬನ್ನಿಮರಕ್ಕೆ ಪೂಜೆ ಸಲ್ಲಿಸಿದ ಬಳಿಕ ಅರಮನೆಗೆ ತೆರಳಿ ಯದುವೀರ್ ಕಂಕಣ ವಿಸರ್ಜನೆ ಮಾಡಿದ್ದಾರೆ. ಅರಮನೆಯ ಉತ್ತರದ್ವಾರದಲ್ಲಿರುವ ಗಾಯತ್ರಿ ಅಮ್ಮನವರ ದೇಗುಲದ ಆವರಣದಲ್ಲಿ ಮೊದಲು ಬನ್ನಿಮರಕ್ಕೆ ವಿಶೇಷ ಪೂಜೆ ಸಲ್ಲಿಕೆ ಮಾಡಲಾಗಿದೆ. ಪೂಜೆ ನೆರವೇರಿದ ನಂತರ ಅರಮನೆಯತ್ತ ಹೊರಟ ವಿಜಯಯಾತ್ರೆ ನಡೆಸಲಾಯಿತು. ಪಟ್ಟದ ಆನೆ, ಪಟ್ಟದ ನಿಶಾನೆ ಆನೆ, ಪಟ್ಟದ ಕುದುರೆ, ಪಟ್ಟದ ಹಸು, ಅರಮನೆಯ ಆನೆಗಳು, ಪೊಲೀಸ್ ವಾದ್ಯವೃಂದ, ನಾದಸ್ವರವಾದನ ವಿಜಯಯಾತ್ರೆಯಲ್ಲಿ ಭಾಗಿಯಾಗಿದ್ದರು. ಅರಮನೆ ಆವರಣಕ್ಕೆ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರವೇಶ ಮಾಡಿದಾಗ, ನಾಡ ದೇವಿಯನ್ನು ಕಣ್ತುಂಬಿಕೊಂಡು ಭಕ್ತರು ಪುನೀತರಾದರು. ಮಂಗಳ ವಾದ್ಯಗಳೊಂದಿಗೆ ಬೆಳ್ಳಿ ರಥದಲ್ಲಿ ಆಗಮಿಸಿದ ಚಾಮುಂಡಿ ತಾಯಿಯ ಉತ್ಸವಮೂರ್ತಿ ಅರಮನೆಯಲ್ಲಿ ಪೂಜೆ ಸಲ್ಲಿಸಲಾಗಿತ್ತು. ಪೂಜೆ ಸಲ್ಲಿಸಿ ತಾಯಿ ಚಾಮುಂಡೇಶ್ವರಿ ಮೂರ್ತಿಯನ್ನು ಒಳಗೆ ಕೊಂಡೊಯ್ಯಲಾಗಿತ್ತು.

### ಚಾಮುಂಡಿ ಬೆಟ್ಟದಲ್ಲಿ ಭಕ್ತರ ದಂಡು

ದಸರಾ ಹಿನ್ನೆಲೆ ಚಾಮುಂಡಿ ಬೆಟ್ಟದಲ್ಲಿ ಬೆಳಿಗ್ಗೆಯೇ ಭಕ್ತರ ದಂಡು ಇತ್ತು. ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆಯಲು ಜನ ಜಮಾಯಿಸಿದ್ದರು. ಚಾಮುಂಡಿ ಬೆಟ್ಟದಿಂದ ಅರಮನೆಯತ್ತ ಉತ್ಸವಮೂರ್ತಿ ಹೊರಟುಬಂದಿದೆ. ತಾಯಿ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಬೆಟ್ಟದಿಂದ ಅರಮನೆಯವರೆಗೂ ಮೆರವಣಿಗೆ ಮೂಲಕ ಸಾಗಿಸಲಾಯಿತು. ಬಳಿಕ ಜಂಬೂ ಸವಾರಿಯಲ್ಲಿ ಚಿನ್ನದ ಅಂಬಾರಿಯೊಳಗೆ ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

### ಅರಮನೆಯಿಂದ ಬನ್ನಿಮಂಟಪದವರೆಗೆ

ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ವಿಜಯ ದಶಮಿಯ ಜಂಬೂಸವಾರಿ ಮೆರವಣಿಗೆಯಲ್ಲಿ ಅರಮನೆಯಿಂದ ಬನ್ನಿಮಂಟಪದವರೆಗೆ 31 ಜಿಲ್ಲೆಗಳ ಕಲೆ, ಸಾಹಿತ್ಯ, ಸಂಸ್ಕೃತಿ ವೈಶಿಷ್ಟ್ಯ, ಆಚಾರ-ವಿಚಾರ, ಭೌಗೋಳಿಕ ಹಿನ್ನೆಲೆ, ಇಲಾಖಾವಾರು, ನಿಗಮ ಮಂಡಳಿ , ಸರ್ಕಾರದ ಯೋಜನೆಗಳು, ಸಾಧನೆಗಳ ಕುರಿತ 51 ಸ್ತಬ್ಧಚಿತ್ರಗಳ ಪ್ರದರ್ಶನ ಮಾಡಲಾಯಿತು.



### ಅಜ್ಜಿ-ಮೊಮ್ಮಗನಿಂದ ಜಟ್ಟಿ ಕಾಳಗ ವೀಕ್ಷಣೆ




ಜಗತ್ಪ್ರಸಿದ್ಧ ಮೈಸೂರು ಅರಮನೆಯ ಸವಾರಿ ತೊಟ್ಟಿಯಲ್ಲಿ ನಡೆದ ಜಟ್ಟಿ ಕಾಳಗದ ಜಲಕ್ ನೋಡಲು ಅಜ್ಜಿ ಮೊಮ್ಮಗ ಬಂದಿದ್ದರು. ಪ್ರಮೋದಾದೇವಿ ಒಡೆಯರ್ , ಆದ್ಯವೀರ್ ನಿಂದ ವೀಕ್ಷಣೆ ಮಾಡಿದರು. ಕಲ್ಯಾಣ ಮಂಟಪದಲ್ಲಿ ಯದುವೀರ್ ಒಡೆಯರ್ ಆಯುಧಗಳಿಗೆ ಉತ್ತರ ಪೂಜೆ ಸಲ್ಲಿಸಿದರು. ಪುರೋಹಿತರು ಮಂತ್ರ ಪಟನೆ ಮಾಡಿದರು. ಪೂಜೆಯ ನಂತರ ಜಟ್ಟಿ ಕಾಳಗಕ್ಕೆ ಯದುವೀರ್ ಚಾಲನೆ ನೀಡಿದರು.

## ನಿರ್ವಹಣೆ ಮಾಡದೇ ಕೇಂದ್ರ ಹಣ ಕೊಡಲ್ಲ ಅಂದ್ರೆ ಹೇಗೆ

• ಉದಯವಾಹಿನಿ, ಬೆಂಗಳೂರು

ನೀವು ಸರಿಯಾಗಿ ಹಣಕಾಸು ನಿರ್ವಹಣೆ ಮಾಡದೇ ಈಗ ಕೇಂದ್ರ ಸರ್ಕಾರ ಸರಿಯಾಗಿ ಕೊಡುತ್ತಿಲ್ಲ ಎಂದು ದೂಷಿಸಿದರೆ ಹೇಗೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ರಾಜ್ಯ ಸರ್ಕಾರವನ್ನು ಪ್ರಶ್ನೆ ಮಾಡಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ತೆರಿಗೆ ಹಣ ಹಂಚಿಕೆ ಮಾಡಿದೆ. ಆದರೆ ಕರ್ನಾಟಕಕ್ಕೆ ತೆರಿಗೆ ಹಣ ಹಂಚಿಕೆ ಮಾಡುವಾಗ ತಾರತಮ್ಯ ಮಾಡಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ನಮ್ಮ ತೆರಿಗೆ ನಮ್ಮ ಹಕ್ಕು ಎಂದು ಮತ್ತೊಮ್ಮೆ ಹೋರಾಟ ಮಾಡಲು ಕಾಂಗ್ರೆಸ್ ಮುಂದಾಗಿದೆ. ಈ ಬಗ್ಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಹಿಂದಿನ ಯುಪಿಎ ಅವಧಿಗಿಂತಲೂ ಈಗಿನ ಎನ್ ಡಿಎ ಸರ್ಕಾರ ರಾಜ್ಯಕ್ಕೆ ತೆರಿಗೆ ಪಾಲು ಹೆಚ್ಚು ಕೊಟ್ಟಿದೆ. ಅಷ್ಟಕ್ಕೂ ಎಷ್ಟು ಹಣ ಕೊಡಬೇಕು ಎಂದು ನಿರ್ಧರಿಸುವುದು ಕೇಂದ್ರ ಸರ್ಕಾರವಲ್ಲ.



ಹಣಕಾಸು ಆಯೋಗ. ಹಣಕಾಸು ಆಯೋಗ ನಿಗದಿಪಡಿಸಿದಷ್ಟು ಕೇಂದ್ರ ಹಣ ಕೊಟ್ಟಿದೆ ಎಂದು ಜೋಶಿ ಹೇಳಿದ್ದಾರೆ. 2016-17 ರಲ್ಲಿ ಸಿದ್ದರಾಮಯ್ಯ ಇದ್ದಾಗಲೇ ಹಣಕಾಸು ಆಯೋಗ ಎಷ್ಟು ಹಣ ಕೊಡಬೇಕೆಂದು ನಿಗದಿಪಡಿಸಿದೆ. ಆಗಲೇ ಹಣಕಾಸು ಆಯೋಗದ ಮುಂದೆ ತಮ್ಮ ವಾದ ಮಂಡಿಸಬೇಕಿತ್ತು. ಆಗ ಸುಮ್ಮನಿದ್ದು ಈಗ ಮಾತನಾಡಿದರೆ ಪ್ರಯೋಜನವಾಗುತ್ತದೆಯೇ ಎಂದು ಜೋಶಿ ಪ್ರಶ್ನೆ ಮಾಡಿದ್ದಾರೆ.

### ತಮ್ಮ ವಾದ ಸರಿಯಾಗಿ ಮಂಡಿಸಿ


ಏನೇ ಕೆಟ್ಟದಾದರೂ ಅದು ಬಿಜೆಪಿಯಿಂದ ಎನ್ನುವ ಜಾಯಮಾನ ಕಾಂಗ್ರೆಸ್ ರೂಢಿಸಿಕೊಂಡಿದೆ. ಸರಿಯಾಗಿ ಹಣಕಾಸಿನ ಪರಿಸ್ಥಿತಿ ನಿಭಾಯಿಸಿದ್ರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇನ್ನಾದರೂ ಹಣಕಾಸು ಆಯೋಗದ ಮುಂದೆ ತಮ್ಮ ವಾದ ಸರಿಯಾಗಿ ಮಂಡಿಸಿ ಎಂದು ಜೋಶಿ ಸಲಹೆ ನೀಡಿದ್ದಾರೆ.

## ಕೇಂದ್ರದ ವಿರುದ್ಧ ಮತ್ತೆ ನಮ್ಮ ತೆರಿಗೆ ನಮ್ಮ ಹಕ್ಕು ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ತೆರಿಗೆ ಹಂಚಿಕೆಯಲ್ಲಿ ತಾರತಮ್ಯ ಮಾಡು ತ್ತಿದೆ ಎಂದು ಮತ್ತೊಮ್ಮೆ ನಮ್ಮ ತೆರಿಗೆ ನಮ್ಮ ಹಕ್ಕು ಪ್ರತಿಭಟನೆ ಮಾಡಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಈ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ತೆರಿಗೆ ಹಣ ಹಂಚಿಕೆ ಮಾಡಿದ್ದು, ಕರ್ನಾಟಕಕ್ಕೆ ನಿರೀಕ್ಷಿಸಿದಷ್ಟು ಹಣ ಕೊಟ್ಟಿಲ್ಲ ಎಂಬುದು ಕಾಂಗ್ರೆಸ್ ಆರೋಪವಾಗಿದೆ.

ಈ ಬಗ್ಗೆ ನಿನ್ನೆಯೇ ಮಾಜಿ ಸಂಸದ ಡಿಕೆ ಸುರೇಶ್ ಕಿಡಿ ಕಾರಿದ್ದರು. ನಾವೆಲ್ಲರೂ ಭಾರತಾಂಬೆಯ ಮಕ್ಕಳು. ಉತ್ತರ ಪ್ರದೇಶಕ್ಕೆ ಮಾತ್ರ ಹೆಚ್ಚು ಕೊಟ್ಟಿದ್ದೀರಿ. ಕರ್ನಾಟಕಕ್ಕೆ ಕಡಿಮೆ ಯಾಕೆ ಎಂದು ಪ್ರಶ್ನೆ ಮಾಡಿದ್ದರು. ಇದೀಗ ಡಿಸಿಎಂ ಡಿಕೆ ಶಿವಕುಮಾರ್, ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು



ಮತ್ತೊಮ್ಮೆ ನಮ್ಮ ತೆರಿಗೆ ನಮ್ಮ ಹಕ್ಕು ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅತಿ ಹೆಚ್ಚು ತೆರಿಗೆ ಪಾವತಿಸುವ ನಮಗೆ ತಾರತಮ್ಯ ಮಾಡುತ್ತಾರೆ. ಉತ್ತರ ಪ್ರದೇಶ, ಬಿಹಾರಕ್ಕೆ ಹೆಚ್ಚು ಹಣ ಕೊಡುತ್ತಾರೆ. ನಮಗೆ ಆಂಧ್ರಪ್ರದೇಶಕ್ಕಿಂತಲೂ ಕಡಿಮೆ ಕೊಡುತ್ತಾರೆ. ಹಾಗಿದ್ದರೆ ನಾವು ಅವರಿಗಿಂತಲೂ ಕೀಳಾ ಎಂದು ಪ್ರಶ್ನೆ ಮಾಡಿದ್ದಾರೆ.

ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ರಾಜ್ಯದಿಂದ ಐವರು ಕೇಂದ್ರ ಸಚಿವರಿದ್ದಾರೆ. ಆದರೆ ಯಾರೂ ರಾಜ್ಯದ ಪರವಾಗಿ ಧ್ವನಿಯೆತ್ತುವುದಿಲ್ಲ. ನಮ್ಮವರೇ ಇದ್ದರೂ ನಮಗೆ ಅನ್ಯಾಯವಾಗುತ್ತಿದೆ. ಇದರ ವಿರುದ್ಧ ಪ್ರತಿಭಟನೆ ಮಾಡಲಿದ್ದೇವೆ ಎಂದು ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

# ಚನ್ನಪಟ್ಟಣ ಉಪ ಚುನಾವಣೆ; ಬಿಜೆಪಿ ಜೊತೆ ಚರ್ಚಿಸಿ ಇನ್ನೊಂದು ವಾರದಲ್ಲಿ ಟಿಕೆಟ್ ಫೈನಲ್

■ ಬಿಡದಿ ಸಮೀಪದ ಕೇತಿಗಾನಹಳ್ಳಿಯ ತಮ್ಮ ತೋಟದಲ್ಲಿ ಕ್ಷೇತ್ರದ ಕಾರ್ಯಕರ್ತರು, ಮುಖಂಡರ ಸಭೆ ಕರೆದು ಸಮಾಲೋಚನೆ

• ಉದಯವಾಹಿನಿ, ರಾಮನಗರ

ಮುಂಬರುವ ಚನ್ನಪಟ್ಟಣ ವಿಧಾನಸಭೆ ಉಪ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸಚಿವರ ಹೆಚ್.ಡಿ.ಕುಮಾರಸ್ವಾಮಿ ಅವರು ಬಿಡದಿ ಸಮೀಪದ ಕೇತಿಗಾನಹಳ್ಳಿಯ ತಮ್ಮ ತೋಟದಲ್ಲಿ ಕ್ಷೇತ್ರದ ಕಾರ್ಯಕರ್ತರು, ಮುಖಂಡರ ಸಭೆ ಕರೆದು ಸಮಾಲೋಚನೆ ನಡೆಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಯುವ ಜನತಾದಳ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಜಯಮುತ್ತು ಸೇರಿದಂತೆ ಚನ್ನಪಟ್ಟಣ ಕ್ಷೇತ್ರದ ಎಲ್ಲಾ ಪ್ರಮುಖ ಮುಖಂಡರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು; ಈಗಾಗಲೇ 5 ಜಿಲ್ಲಾ ಪಂಚಾಯತಿ, ಕ್ಷೇತ್ರ ಹಾಗೂ ಪಟ್ಟಣ ಭಾಗದಲ್ಲಿ ಕಾರ್ಯಕರ್ತರ ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ ಹಳ್ಳಿ, ಹೋಬಳಿ, ಪಂಚಾಯಿತಿ ಮಟ್ಟದ ಮುಖಂಡರು ಬಂದಿದ್ದರು. ಚುನಾವಣೆಗೆ ಯಾವ ರೀತಿ ತಯಾರಿ ಮಾಡಿಕೊಳ್ಳಬೇಕು. ಅಭ್ಯರ್ಥಿ ಯಾರಾಗಬೇಕು ಎನ್ನುವುವ ಬಗ್ಗೆ ಸಮಾಲೋಚನೆ ನಡೆಸಿದ್ದೇನೆ. ಜೆಡಿಎಸ್- ಬಿಜೆಪಿ ಎರಡು ಪಕ್ಷಗಳು ಹೊಂದಾಣಿಕೆಯಿಂದ ಕೆಲಸ ಮಾಡಬೇಕು. ಮಿತ್ರಪಕ್ಷ ಬಿಜೆಪಿ ನಾಯಕರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಕೆಲಸ ಮಾಡಬೇಕು ಎಂದು ಮುಖಂಡರಿಗೆ ನಿರ್ದೇಶನ ನೀಡಿದ್ದೇನೆ ಎಂದು ತಿಳಿಸಿದರು.

ನವೆಂಬರ್ ಒಳಗೆ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನಸಭೆ ಚುನಾವಣೆ ನಡೆಯಬೇಕಿದೆ. ಅದೇ ಸಮಯದಲ್ಲಿ ಚನ್ನಪಟ್ಟಣ ಉಪ ಚುನಾವಣೆ ನಡೆಯಬಹುದು. ಇನ್ನು ಒಂದು ವಾರದಲ್ಲಿ ಚುನಾವಣೆ ಘೋಷಣೆಯಾಗಬಹುದು. ಅಂತಿಮವಾಗಿ ದೆಹಲಿ ಮಟ್ಟದಲ್ಲಿ ಬಿಜೆಪಿಯ ಹೈಕಮಾಂಡ್ ಹಾಗೂ ನಾವು ಕೂತು ಚರ್ಚೆ ಮಾಡುತ್ತೇವೆ ಎಂದು ಕೇಂದ್ರ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟರು. ಚನ್ನಪಟ್ಟಣ ಜೆಡಿಎಸ್ ಕ್ಷೇತ್ರ. ಕಳೆದ ಎರಡು ಬಾರಿ ಜೆಡಿಎಸ್ ನಿಂದ ಗೆದ್ದಿದ್ದೇವೆ. ಈ ಹಿಂದಿನಿಂದಲೂ ಇದು ಜೆಡಿಎಸ್ ಭದ್ರಕೋಟೆ. ನಮ್ಮಲ್ಲಿನ ಸಂಘಟನೆಯಲ್ಲಿ ಕೆಲವೊಂದು ಲೋಪದೋಷಗಳಿಂದ ಹಿಂದೆ ಬಿದ್ದಿದ್ದೆವು. 2013ರಲ್ಲೂ ನಮಗೆ ಹೆಚ್ಚಿನ ಮತಗಳು ಬಂದಿದ್ದವು. ಚನ್ನಪಟ್ಟಣದಲ್ಲಿ ಕಾರ್ಯಕರ್ತರೇ ನನ್ನ ಚುನಾವಣೆ ನಡೆಸಿದ್ದಾರೆ. ನಮ್ಮ ಸಂಘಟನೆ ದೃಷ್ಟಿಯಿಂದ ಕೂತು ಚರ್ಚೆ ಮಾಡಿದ್ದೇವೆ. ಯಾವುದೇ ಸಮಸ್ಯೆ ಆಗದ ರೀತಿ ಚುನಾವಣೆ ನಡೆಸುತ್ತೇವೆ ಎಂದು ಸಚಿವರು ಹೇಳಿದರು. ನಿಖಿಲ್ ಕುಮಾರಸ್ವಾಮಿ ಅವರು ಉಪ ಚುನಾವಣೆಯ ಅಭ್ಯರ್ಥಿ ಆಗಬೇಕು ಎಂಬ ಬಗ್ಗೆ ಕಾರ್ಯಕರ್ತರಿಂದ ಒತ್ತಡ ಇದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು; ಒತ್ತಡ, ಒತ್ತಾಯ ಇರುವುದು ನಿಜ. ನಿಖಿಲ್ ಕುಮಾರಸ್ವಾಮಿ ನಿಲ್ಲಬೇಕು ಅಂತ 95% ನಾಯಕರು, ಮುಖಂಡರ ಅಭಿಪ್ರಾಯವಿದೆ. ಆದರೆ, ನಾವು ಈಗ ಇರುವ ಸನ್ನಿವೇಶ ನೋಡಿಕೊಂಡು ನಿರ್ಧಾರ ಕೈಗೊಳ್ಳಬೇಕು. ಏನೇನು ಬೆಳವಣಿಗೆಗಳು ಇವೆ ಅಂತ ನೋಡಬೇಕು. ನಿಖಿಲ್ ಮಂಡ್ಯದಲ್ಲಿ ನಿಲ್ಲಿಸಿದಾಗ ಎಲ್ಲಾ ಪಕ್ಷಗಳು ಒಂದಾಗಿ ಸೋಲಿಸಿದರು. ಸಂಘಟಿತ ಷಡ್ಯಂತ್ರ ಮಾಡಿ ಸೋಲಿಸಲಾಯಿತು. ನಾನು ಈಗ ಎನ್ ಡಿಎ ಭಾಗ. ಎನ್ ಡಿಎ ಅಭ್ಯರ್ಥಿ ಗೆಲ್ಲಬೇಕು. ಯಾರೇ ನಿಂತು ಗೆದ್ದರೂ ಅದು ಎನ್‌ಡಿಎ ಗೆಲುವು, ಆ ಮೂಲಕ ಕಾಂಗ್ರೆಸ್ ವಿರೋಧಿ ಹೋರಾಟಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಹೋರಾಟಕ್ಕೆ ನಾವೂ ಕೈಜೋಡಿಸಿದ ಹಾಗಾಗುತ್ತದೆ ಎಂದು ಅವರು ಹೇಳಿದರು.

ಈ ಹಿನ್ನಲೆಯಲ್ಲಿ ಬಿಜೆಪಿ ಹೈಕಮಾಂಡ್, ರಾಜ್ಯ ನಾಯಕರು, ಕಾರ್ಯಕರ್ತರು ಎಲ್ಲಾರು ಸೇರಿ ಎರಡು ಪಕ್ಷದ ಮುಖಂಡರು, ಕಾರ್ಯಕರ್ತರ ಅಭಿಪ್ರಾಯ ಪಡೆದು ಅಭ್ಯರ್ಥಿ ಅಂತಿಮ ಮಾಡುತ್ತೇವೆ ಎಂದು ಅವರು ಹೇಳಿದರು.

### ಯಾರೇ ಗೆದ್ದರೂ ಅದು ಎನ್‌ಡಿಎ ಗೆಲುವು



### ಈ ಕ್ಷೇತ್ರಕ್ಕೆ ಕೊಟ್ಟ ಕಾಣಿಕೆ ಏನೆಂದು ಜನರಿಗೆ ಗೊತ್ತಿದೆ

ಇನ್ನೊಂದು ವಾರದಲ್ಲಿ ಟಿಕೆಟ್ ಫೈನಲ್ ಆಗುತ್ತದೆ. ಚುನಾವಣೆ ದಿನಾಂಕ 4-5 ದಿನಗಳಲ್ಲಿ ಯಾವಾಗ ಬೇಕಾದರೂ ಘೋಷಣೆ ಆಗಬಹುದು. ಕೂಡಲೇ ಬಿಜೆಪಿ ಹೈಕಮಾಂಡ್, ರಾಜ್ಯ ನಾಯಕರ ಜತೆ ಚರ್ಚೆ ಮಾಡಿ ಅಭ್ಯರ್ಥಿ ಫೈನಲ್ ಮಾಡುತ್ತೇವೆ ಎಂದು ಕುಮಾರಸ್ವಾಮಿ ಅವರು ಹೇಳಿದರು. ಚನ್ನಪಟ್ಟಣಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪದೇ ಪದೆ ಭೇಟಿ ನೀಡುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು; ಅವರು ಎಷ್ಟು ಸಲ ಭೇಟಿ ಕೊಟ್ಟರೂ ಉಪಯೋಗ ಇಲ್ಲ. ಅವರು ಈ ಕ್ಷೇತ್ರಕ್ಕೆ ಕೊಟ್ಟ ಕಾಣಿಕೆ ಏನೆಂದು ಜನರಿಗೆ ಗೊತ್ತಿದೆ. ಚುನಾವಣೆ ಬಂದಿದೆ, ಅದಕ್ಕೆ ಪದೇ ಪದೆ ಬರುತ್ತಿದ್ದಾರೆ ಅಷ್ಟೇ. ಚುನಾವಣೆ ಮುಗಿದ ಮೇಲೆ ಈ ಕಡೆ ತಲೆ ಹಾಕುವುದಿಲ್ಲ ಅವರು ಎಂದು ಸಚಿವರು ಹೇಳಿದರು.

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,664/Gram24ct ₹7,025/Gram22ct | ಬೆಳ್ಳಿ: ₹94.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ಸ್ತ್ರೀ ಪುರುಷರ ಸೃಷ್ಟಿ

ಮನುಸ್ಮೃತಿಯ ಪ್ರಥಮಾಧ್ಯಾಯದ ಮೂವತ್ತೆರಡನೆಯ ಶ್ಲೋಕ ಸ್ತ್ರೀ ಪುರುಷರ ಸೃಷ್ಟಿಯನ್ನು ಹೀಗೆ ವಿವರಿಸಿದೆ:
ದ್ವಿಧಾ ಕೃತ್ವಾತ್ಮನೋ ದೇಹಮರ್ಧೇನ ಪುರುಷೋಭವತ್.
ಅರ್ಧೇನ ನಾರೀ ತಸ್ಯಾಂಸ ವಿರಾಜಮಸೃಜತ್ಪ್ರಭುಃ.
ಬ್ರಹ್ಮ ಪರಮಾತ್ಮನು ತನ್ನ ದೇಹವನ್ನು ಸಮನಾದ ಎರಡು ಭಾಗ ಮಾಡಿ ಒಂದು ಭಾಗದಿಂದ ಪುರುಷನನ್ನು ಸೃಷ್ಟಿಸಿದ, ಮತ್ತೊಂದು ಭಾಗದಿಂದ ಸ್ತ್ರೀಯನ್ನು ಸೃಷ್ಟಿಸಿದ. ಅವರಿಬ್ಬರ ಸಂಬಂಧದಿಂದಾಗಿ ಆ ಸ್ತ್ರೀಯಳಲ್ಲಿ ವಿರಾಟ್ ಪುರುಷನನ್ನು ಉತ್ಪಾದಿಸಿದ. ಆ ಕಾಲದಲ್ಲಿ ಸೃಷ್ಟಿಯ ಈ ಕಲ್ಪನೆ ಶ್ಲಾಘನೀಯ. ಪರಮಾತ್ಮನ ಒಂದು ಭಾಗ ಪುರುಷ ಮತ್ತೊಂದು ಭಾಗ ಸ್ತ್ರೀ. ಜೀವ ದೇವರ ಸೃಷ್ಟಿ, ದೇವರ ಸ್ವರೂಪ. ಎಂಥ ಅದ್ಭುತ ಕಲ್ಪನೆ! ಇದೇ ಅರ್ಧನಾರೀಶ್ವರ. ಎರಡೂ ಸೇರಿದರೆ ಮಾತ್ರ ಒಂದು ಪೂರ್ಣ. ಇಲ್ಲದಿರೆ ಅಪೂರ್ಣ. ಗಂಡು ಹೆಣ್ಣುಗಳಲ್ಲಿ ಯಾರೂ ಮೇಲಲ್ಲ ಕೀಳಲ್ಲ. ಪುರುಷ ಅರ್ಧಾಂಗ ಸ್ತ್ರೀ ಅರ್ಧಾಂಗಿಣಿ. ಜೀವ ಇರುವವರೆಗೂ ಈ ಭಾವ ಸ್ಥಿರ. ಎಂಥ ಬಿಗಿ ಬಂಧ ಈ ಜನುಮ ಜನುಮದ ಅನುಬಂಧನ! ಆದರಿಂದು ಈ ಭಾವಬಂಧ ಶಿಥಿಲಗೊಂಡಿದೆ. ದಾಂಪತ್ಯದ ಆದರ್ಶ ಕುಸಿದಿದೆ. ಇದರ ಪರಿಣಾಮವಾಗಿ ಸಂತತಿಗೆ ಆದರ್ಶ ಸಂಸ್ಕಾರ ಮರೆಯಾಗುತ್ತಿದೆ. ಇದರ ದುಷ್ಪರಿಣಾಮ ಸಮಾಜದ ಎಲ್ಲೆಡೆ ಎರಗುತ್ತಿದೆ.

## ವೆಂಕಟಗಿರಿ ಮತ್ತು ತೀರ್ಥಗಳ ಮಹಿಮೆ

• **ಉದಯವಾಹಿನಿ,ಬೆಂಗಳೂರು**



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಅಕ್ಟೋಬರ್ 13 ರಿಂದ 17ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ಚಂದ್ರಶೇಖರ ಆಚಾರ್ಯರಿಂದ ವೆಂಕಟಗಿರಿ ಮತ್ತು ತೀರ್ಥಗಳ ಮಹಿಮೆ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ ಸುಧೀಂದ್ರನಗರ, ಬೆಂಗಳೂರು-560003

## ನಾಯಿ ಉತ್ಸವ ಆಯೋಜಿಸಿದ ಬಿಬಿಎಂಪಿ

• **ಉದಯವಾಹಿನಿ,ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಕ್ಟೋಬರ್ 17 ರಂದು ನಾಯಿಗಳ ಉತ್ಸವ ಎಂದು ಕರೆಯಲ್ಪಡುವ ಕುಕರ್ ತಿಹಾರ್ ಹಬ್ಬವನ್ನು ಆಚರಿಸಲು ಮುಂದಾಗಿದೆನಗರದಲ್ಲಿ ನಾಯಿಗಳ ದಾಳಿಯಿಂದ ಜನರಿಗೆ ಅವುಗಳ ಮೇಲೆ ಕೇವಲ ನಕಾರಾತ್ಮಕ ಭಾವನೆಯು ಹೆಚ್ಚಾಗುತ್ತಿದೆ.ನಿಟ್ಟಿನಲ್ಲಿ ನಾಯಿಗಳು ಬಹಳ ನಿಷ್ಠಾವಂತ, ವಿಧೇಯ, ರಕ್ಷಣಾತ್ಮಕ ಹಾಗೂ ಭಾವನಾತ್ಮಕ ಬೆಂಬಲ ಕೂಡ ನೀಡುತ್ತದೆ ಎಂದು ತೋರಿಸಲು ಈ ಹಬ್ಬವನ್ನು ಆಚರಿಸಲಾಗುತ್ತದೆ.ಸಹವರ್ತಿನ್ ಅನಿಮಲ್ ವೆಲ್‌ಫೇರ್ ಟ್ರಸ್ಟ್ ಮತ್ತು ಇತರ ಘಟಕಗಳ ಸಹಭಾಗಿತ್ವದಲ್ಲಿ, ಬಿಬಿಎಂಪಿ ಯ ಪಶುಸಂಗೋಪನಾ ಇಲಾಖೆಯು #BITEFREELOCAL-ITY ಬ್ಯಾನರ್ ಅಡಿಯಲ್ಲಿ ವಿವಿಧ ಉಪಕ್ರಮಗಳನ್ನು ಆಯೋಜಿಸಲಾಗಿದೆ. ಇದೇ ಕಾರ್ಯಕ್ರಮದಲ್ಲಿ ಬಿಬಿಎಂಪಿಯ ಆಯಾ ವಾರ್ಡಿನ ರೆಸ್ಟೋರೆಂಟ್‌ಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಪ್ರತಿದಿನ ಉಳಿದ ಆಹಾರವನ್ನು ನಾಯಿಗಳಿಗೆ ಆಹಾರ ನೀಡುವುದಾಗಿ ತಿಳಿಸಿದ್ದಾರೆ.

## ಧ್ರುವ ನಟನೆಯ ಮಾರ್ಟಿನ್ ಸಿನಿಮಾ ಹಲವು ಥಿಯೇಟರ್‌ಗಳಲ್ಲಿ ರದ್ದು!

• **ಉದಯವಾಹಿನಿ,ಬೆಂಗಳೂರು**

ಧ್ರುವ ಸರ್ಜಾ ನಟನೆಯ ಕನ್ನಡ ಚಿತ್ರ 'ಮಾರ್ಟಿನ್' ಶುಕ್ರವಾರ ಬಿಡುಗಡೆಯಾಗಿತ್ತು. ಆದರೆ ಕರ್ನಾಟಕ ಮಾತ್ರವಲ್ಲದೇ ತೆಲುಗು ರಾಜ್ಯಗಳ ಕೆಲ ಥಿಯೇಟರ್‌ಗಳಲ್ಲಿ ಬೆಳಗ್ಗಿನ ಪ್ರದರ್ಶನಗಳು ರದ್ದಾಗಿತ್ತು. ಇದರಿಂದ ಅಭಿಮಾನಿಗಳು ನಿರಾಶೆ ವ್ಯಕ್ತಪಡಿಸಿದ್ದಾರೆ. ಹಲವು ಥಿಯೇಟರ್‌ಗಳಲ್ಲಿ ಸಿನಿಮಾ ರದ್ದಾಗಿರುವ ಕುರಿತಂತೆ ಅಭಿಮಾನಿಗಳು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ ದೂರುಗಳನ್ನು ವ್ಯಕ್ತಪಡಿಸಿದ್ದಾರೆ. ಶಿವಮೊಗ್ಗದಲ್ಲಿ ಬೆಳಗಿನ ಪ್ರದರ್ಶನಗಳಿಗಾಗಿ ತಮ್ಮ ಟಿಕೆಟ್‌ಗಳ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೊಂಡಿರುವ ಒಬ್ಬರು ಬಳಕೆದಾರರು, ಬೆಳಗ್ಗೆ 7 ಗಂಟೆ ಹಾಗೂ ಬೆಳಗ್ಗೆ 8:45 ರ ಎರಡೂ ಪ್ರದರ್ಶನಗಳನ್ನು ರದ್ದುಗೊಳಿಸಲಾಗಿದೆ ಎಂದು ಹತಾಶೆ ವ್ಯಕ್ತಪಡಿಸಿದ್ದಾರೆ. ಮೈಸೂರಿನ ಇನ್ನೊಬ್ಬ ಬಳಕೆದಾರರು ಡಿಆರ್‌ಸಿ ಗರುಡಾ ಮಾಲ್‌ನಲ್ಲಿ ಬೆಳಗ್ಗೆ 9 ಗಂಟೆಯ ಸ್ಕ್ರೀನಿಂಗ್ ಅನ್ನು ರದ್ದುಗೊಳಿಸಲಾಗಿದೆ ಎಂದು ದೂರಿದ್ದಾರೆ.

## ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯ, ಕೇಂದ್ರದ ವಿರುದ್ಧ ಕನ್ನಡಿಗರು ಧ್ವನಿ ಎತ್ತಿ

• **ಉದಯವಾಹಿನಿ,ಬೆಂಗಳೂರು**

ತೆರಿಗೆ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರ ಆರೋಪಿಸಿ ನಮ್ಮ ತೆರಿಗೆ ನಮ್ಮ ಹಕ್ಕು ಹೋರಾಟಕ್ಕೆ ಈಗಾಗಲೇ ಕರೆ ನೀಡಿದೆ. ಭಾಗವಾಗಿ ಸಿಎಂ ಸಿದ್ದರಾಮಯ್ಯ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, ರಾಜ್ಯಕ್ಕೆ ತೆರಿಗೆ ಪಾಲಿನಲ್ಲಿ ಆಗುತ್ತಿರುವ ಅನ್ಯಾಯದ ವಿರುದ್ಧದ ಹೋರಾಟಕ್ಕೆ ಕನ್ನಡಿಗರೆಲ್ಲರೂ ದನಿ ಎತ್ತಬೇಕಾಗಿದೆ ಎಂದು ಕರೆ ನೀಡಿದ್ದಾರೆ. ಕೇಂದ್ರದ ಎನ್‌ಡಿಎ ಸರ್ಕಾರ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಮಾಡುತ್ತಾ ಬಂದಿರುವ ಅನ್ಯಾಯಕ್ಕೆ ಇತ್ತೀಚಿನ ತೆರಿಗೆ ಪಾಲಿನ ಹಂಚಿಕೆಯ ವಿವರಗಳೇ ಸಾಕ್ಷಿ. 28 ರಾಜ್ಯಗಳಿಗೆ ಒಟ್ಟು 1,78,193 ಕೋಟಿ ರೂ. ಬಿಡುಗಡೆಗೊಳಿಸಿರುವ ಕೇಂದ್ರ ಸರ್ಕಾರ, ಕರ್ನಾಟಕಕ್ಕೆ ನೀಡಿರುವುದು ಕೇವಲ ರೂ.6,498 ಕೋಟಿ. ಈ ಅನ್ಯಾಯದ ವಿರುದ್ಧ ಜಾತಿ-ಧರ್ಮ, ಪಕ್ಷ-ಪಂಥದ ಭೇದವಿಲ್ಲದೆ ದನಿ ಎತ್ತುವ ಶಪಥವನ್ನು ಪ್ರತಿಯೊಬ್ಬ ಕನ್ನಡಿಗನು ಮಾಡಬೇಕಾಗಿದೆ. ಇಂತಹದ್ದೊಂದು ಪ್ರಮಾಣ ವಚನ ಸ್ವೀಕಾರಕ್ಕೆ ಅನ್ಯಾಯದ ವಿರುದ್ಧ ನ್ಯಾಯದ ಗೆಲುವಿನ ಸಂಕೇತವಾದ ವಿಜಯದಶಮಿಯ ಶುಭ ದಿನ ಸಾಕ್ಷಿಯಾಗಲಿ ಎಂದು ಸಿಎಂ ಅಭಿಪ್ರಾಯಪಟ್ಟಿದ್ದಾರೆ.

## ಮುಂದಿನ 6 ದಿನ ಭಾರೀ ಮಳೆ ಸಾಧ್ಯತೆ

• **ಉದಯವಾಹಿನಿ,ಬೆಂಗಳೂರು**

ಮುಂದಿನ 6 ದಿನಗಳಲ್ಲಿ ಉತ್ತರ ಒಳನಾಡು, ಕರಾವಳಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ರಾಜ್ಯದಲ್ಲಿ ಮಳೆಯಾಗಲಿದೆ ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಕರ್ನಾಟಕ, ಗೋವಾ, ಕರಾವಳಿ ಪ್ರದೇಶದಲ್ಲಿ ವಾಯುಭಾರ ಕುಸಿತ ಹಿನ್ನೆಲೆ ರಾಜ್ಯದಲ್ಲಿ ಮುಂದಿನ 6 ದಿನಗಳವರೆಗೆ ರಾಜ್ಯಾದ್ಯಂತ ಎಲ್ಲೆಡೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು,ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಾದ್ಯಂತ ವ್ಯಾಪಕ ಮಳೆಯಾಗಲಿದ್ದು, ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ. ಅ.11 ರಿಂದ 16 ರವರೆಗೆ ಮಳೆಯಾಗಲಿದೆ. ಕರ್ನಾಟಕದಲ್ಲಿ ಆಕ್ಟೊಬರ್ 11 ರಿಂದ 14 ರವರೆಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ, ಹಾವೇರಿ, ಗದಗ, ಚಿತ್ರದುರ್ಗ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಹಾವೇರಿ, ಗದಗ ದಾವಣಗೆರೆ, ಬಳ್ಳಾರಿ, ರಾಮನಗರದಲ್ಲಿ ಭಾರೀ ಮಳೆಯಾಗಲಿದೆ. ಇನ್ನು ದಕ್ಷಿಣ ಭಾಗದ ಕೆಲವು ಜಿಲ್ಲೆಗಳಲ್ಲಿ ಅಕ್ಟೊಬರ್ 12 ರಂದು ಭಾರೀ ಮಳೆ ಸಾಧ್ಯತೆಯಿದೆ

# ಗೃಹಲಕ್ಷ್ಮಿ ಪುರುಷರ ಕುಡಿತ, ಸ್ಮೋಕಿಂಗ್‌ಗೆ ವೆಚ್ಚ!

## ಅನ್ನಭಾಗ್ಯ ಯೋಜನೆಯ ನಗದು ವರ್ಗಾವಣೆ ಯೋಜನೆ-ಡಿಬಿಟಿ ಕುರಿತ ಇತ್ತೀಚಿನ ಅಧ್ಯಯನಗಳು ಕಳವಳಕಾರಿ

• **ಉದಯವಾಹಿನಿ,ಬೆಂಗಳೂರು**

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅನುಷ್ಠಾನಗೊಳಿಸಿರುವ ಅನ್ನಭಾಗ್ಯ ಯೋಜನೆಯ ನಗದು ವರ್ಗಾವಣೆ ಯೋಜನೆ-ಡಿಬಿಟಿ ಕುರಿತ ಇತ್ತೀಚಿನ ಅಧ್ಯಯ ನಗಳು ಕಳವಳಕಾರಿಯಾಗಿವೆ.

ಅನ್ನ ಭಾಗ್ಯ ಯೋಜನೆಯ ನಗದನ್ನು ಮನೆಯವರು ಶಿಕ್ಷಣ, ಆರೋಗ್ಯ ರಕ್ಷಣೆ, ಸಾಲ ಮರುಪಾವತಿ, ಗುಣ ಮಟ್ಟದ ಧಾನ್ಯ ಖರೀದಿ ಮತ್ತಿತರ ಅಗತ್ಯಗಳಿಗಾಗಿ ಬಳಸಿ ಕೊಂಡರೂ ನಗರ ಮತ್ತು ಗ್ರಾಮೀಣ ಪ್ರದೇಶದ ಪುರುಷರು ಸರಿ ಸುಮಾರು ಶೇ.20 ರಷ್ಟು ಹಣವನ್ನು ಹೆಂಡತಿಗೆ ತಿಳಿಯದಂತೆ ಕುಡಿತ, ಧೂಮಪಾನಕ್ಕಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬಂದಿದೆ.





**ಗುಣ ಮಟ್ಟದ ಧಾನ್ಯ ಖರೀದಿ**

ಯೋಜನೆಯಡಿ ಗ್ರಾಮೀಣ ಪ್ರದೇಶದ ಕುಟುಂಬಗಳು ತಿಂಗಳಿಗೆ ಸರಾಸರಿ 576 ರೂ. ಪಡೆಯುತ್ತಾರೆ, ಆದರೆ ನಗರ ಪ್ರದೇಶದ ಕುಟುಂಬ ಗಳು ರೂ. 583 ಪಡೆಯುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸರಿಸುಮಾರು ಶೇ. 77 ರಷ್ಟು ಮತ್ತು ನಗರ ಪ್ರದೇಶಗಳಲ್ಲಿ ಶೇ. 82 ರಷ್ಟು ಹಣವನ್ನು ಧಾನ್ಯ ಖರೀದಿಸಲು ಖರ್ಚು ಮಾಡಲಾಗಿದೆ. ಉಳಿದ ಹಣವನ್ನು ಕುಡಿತ, ಸ್ಮೋಕಿಂಗ್ ಮತ್ತಿತರ ಇತರ ಉದ್ದೇಶಗಳಿಗೆ ವೆಚ್ಚ ಮಾಡಲಾಗಿದೆ ಎಂದು ಹೇಳಲಾಗಿದೆ. ಜುಲೈ 2023ರಲ್ಲಿ ಭಾರತದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಖರೀದಿಸುವವರೆಗೆ ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ಕೆಜಿಗೆ 34 ರೂ.ರಂತೆ ಹಣ ವರ್ಗಾವಣೆ ಯೋಜನೆಯನ್ನು ಅನುಷ್ಠಾನಗೊಳಿಸಿತು.

ನ್ಯಾಷನಲ್ ಸ್ಯಾಂಪಲ್ ಸರ್ವೇ ಸಂಸ್ಥೆ ಪ್ರಕಾರ (2022-23) ಪ್ರಕಾರ ಭಾರತೀಯರು ತಿಂಗಳಿಗೆ ಸರಿಸುಮಾರು 9 ಕೆಜಿ ಧಾನ್ಯಗಳನ್ನು ಸೇವಿಸುತ್ತಾರೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಪ್ರತಿ ವ್ಯಕ್ತಿಗೆ 5 ಕೆಜಿ ಉಚಿತ ಆಹಾರ ಧಾನ್ಯಗಳನ್ನು ನೀಡುತ್ತಿದೆ. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಹೆಚ್ಚುವರಿಯಾಗಿ 4 ಕೆಜಿ ಅಕ್ಕಿ ನೀಡುವುದಾಗಿ ಭರವಸೆ ನೀಡಿತ್ತು.

ಆದರೆ, ಕಳೆದ ವರ್ಷ ಹೆಚ್ಚುವರಿ ಅಕ್ಕಿ ಸಂಗ್ರಹಿಸುವಲ್ಲಿನ ತೊಂದರೆಗಳ ಕಾರಣ, ಸರ್ಕಾರ ಬದಲಿಗೆ ನಗದು ವರ್ಗಾವಣೆಗೆ ನಿರ್ಧರಿಸಿತು. ಯೋಜನೆಯ ಮೌಲ್ಯಮಾಪನ ವೇಳೆ ರೈತರು ಸಾಮಾನ್ಯವಾಗಿ ನಗದು ಸ್ವೀಕರಿಸಲು ಆದ್ಯತೆ ನೀಡಿದರೆ, ಕಾರ್ಮಿಕರು, ನಗರ ಪ್ರದೇಶದ ಜನರು ಧಾನ್ಯ ಖರೀದಿಗೆ ಒಲವು ತೋರಿದ್ದಾರೆ. ಕೆಲವು ಕುಟುಂಬಗಳು ಹೆಚ್ಚಿನ ಅಥವಾ ಉತ್ತಮ-ಗುಣಮಟ್ಟದ ಧಾನ್ಯಗಳನ್ನು ಖರೀದಿಸಲು ಹಣ ಬಳಸಿದರೆ, ಇತರರು ಅದನ್ನು ಪೂರಕ ಆದಾಯವೆಂದು ಪರಿಗಣಿಸಿದ್ದು, ಶಿಕ್ಷಣ, ಆರೋಗ್ಯ ರಕ್ಷಣೆ ಅಥವಾ ಸಾಲ ಮರುಪಾವತಿಗೆ ಬಳಸಿದ್ದಾರೆ. ಈ ಯೋಜನೆಯಿಂದಾಗಿ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಗಣನೀಯ ಸಂಖ್ಯೆಯ ಕುಟುಂಬಗಳು ಮೊದಲ ಬಾರಿಗೆ ಬ್ಯಾಂಕ್ ಖಾತೆಗಳನ್ನು ತೆರೆದಿವೆ ಎಂದು ಅಧ್ಯಯನ ಎತ್ತಿ ತೋರಿಸಿದೆ. ಎಬಿಎಸ್ ಅಳವಡಿಸಿದ ನಂತರ ಸುಮಾರು ಶೇ. 43 ರಷ್ಟು ಗ್ರಾಮೀಣ ಪ್ರದೇಶದವರು ಮತ್ತು ಶೇ. 33 ರಷ್ಟು ನಗರವಾಸಿಗಳು ಮೊದಲ ಬಾರಿಗೆ ಬ್ಯಾಂಕ್ ಖಾತೆಗಳನ್ನು ತೆರೆದಿದ್ದಾರೆ.


> **ಆದಾಗ್ಯೂ, ಅಂತಹ ಯೋಜನೆಗಳ ಬೆಂಬಲಿಗರು ನಗದು ವರ್ಗಾವಣೆಯಿಂದ ಆಹಾರ, ಆರೋಗ್ಯ ಮತ್ತಿತರ ಅಗತ್ಯಗಳಿಗೆ ಅನುಗುಣವಾಗಿ ಹಣ ವೆಚ್ಚ ಮಾಡಲು ಅನುವು ಮಾಡಿಕೊಡುತ್ತದೆ. ಹೆಚ್ಚುವರಿಯಾಗಿ, ಈ ಯೋಜನೆಯು ಮನೆಯ ವೆಚ್ಚವನ್ನು ಹೆಚ್ಚಿಸುವ ಮೂಲಕ ಮತ್ತು ಸಣ್ಣ ವ್ಯವಹಾರಗಳನ್ನು ಬೆಂಬಲಿಸುವ ಮೂಲಕ ಸ್ಥಳೀಯ ಆರ್ಥಿಕತೆಯನ್ನು ಹೆಚ್ಚಿಸುತ್ತದೆ ಎಂದು ಅವರು ವಾದಿಸುತ್ತಾರೆ.**

### ನಗದು ವರ್ಗಾವಣೆ ಯೋಜನೆ

**ಮೇಲಿನ ಚರ್ಚೆ ವಿವಾದಾತ್ಮಕವಾಗಿಯೇ ಉಳಿದಿದೆ. ಹಣ ನೀಡುವುದರಿಂದ ಅದು ಅನಪೇಕ್ಷಿತ ಉದ್ದೇಶಗಳಿಗಾಗಿ ಖರ್ಚುಮಾಡಬಹುದು, ಹಸಿವು ಮತ್ತು ಅಪೌಷ್ಟಿಕತೆಯಂತಹ ಸಮಸ್ಯೆಗಳನ್ನು ಉಲ್ಬಣಗೊಳಿಸಬಹುದು ಎಂದು ವಿಮರ್ಶಕರು ವಾದಿಸುತ್ತಾರೆ. ಪ್ರಸ್ತುತ ಅಧ್ಯಯನ ಕೆಲವರು ಹಣವನ್ನು ನಿಜವಾಗಿಯೂ ಅನಿವಾರ್ಯವಲ್ಲದ ವೆಚ್ಚಗಳಿಗೆ ಬಳಸುತ್ತಿದ್ದಾರೆ ಎಂದು ಸೂಚಿಸುತ್ತದೆ.**

## ದೀಪಾಲಂಕಾರ 10-12 ದಿನಗಳ ಕಾಲ ವಿಸ್ತರಣೆ: ಡಿಸಿಎಂ

• **ಉದಯವಾಹಿನಿ,ಬೆಂಗಳೂರು**





**ಮೈಸೂರು ದಸರಾ ಮಹೋತ್ಸವ**

ಮೈಸೂರು ದಸರಾಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ವಿದ್ಯುತ್ ದೀಪಾಲಂಕಾರವನ್ನು 10-12 ದಿನಗಳವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ಮೈಸೂರು ದಸರಾ ಮಹೋತ್ಸವ, ಜಂಬೂಸವಾರಿ ಹಿನ್ನೆಲೆಯಲ್ಲಿ ಕೋಟ್ಯಂತರ ರೂ. ವೆಚ್ಚದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ನಾನು ಇಂಧನ ಸಚಿವನಾಗಿದ್ದಾಗ ಮಾಡಿದ್ದಕ್ಕಿಂತ ಈ ಬಾರಿ ಅತ್ಯುತ್ತಮವಾಗಿ ದೀಪಾಲಂಕಾರ ಮಾಡಲಾಗಿದೆ. ಅಲ್ಲದೆ ಒಂದೂವರೆ ಸಾವಿರ ಡ್ರೋನ್ ಗಳ ಶೋ ವ್ಯವಸ್ಥೆ ಮಾಡಲಾಗಿದೆ. ಸಾಂಸ್ಕೃತಿಕ ನಾಡಿನಲ್ಲಿ ನಮ್ಮ ಜನ ನಮ್ಮ ಸಂಸ್ಕೃತಿಯನ್ನು ಕಣ್ತುಂಬಿಕೊಂಡು ಆನಂದಿಸಲಿ ಎಂದು ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಕಳೆದ ಹತ್ತು ದಿನಗಳಲ್ಲಿ ಇಳಯರಾಜ, ಎ.ಆರ್ ರೆಹಮಾನ್ ಅವರ ಕಾರ್ಯಕ್ರಮಗಳಿಗೆ ಎರಡೂವರೆ ಲಕ್ಷ ಜನ ಸೇರಿದ್ದರು. ದಸರಾದ ಈ ಶುಭ ಸಂದರ್ಭದಲ್ಲಿ ನಾಡಿನ ಜನ ನೆಮ್ಮದಿ, ಶಾಂತಿಯಿಂದ ಬದುಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಎಲ್ಲರೂ ಸೇರಿ ದಸರಾ ಆಚರಣೆ ಮಾಡೋಣ. ಮೈಸೂರಿನಲ್ಲಿ ದೀಪಾಲಂಕಾರ ಇನ್ನೂ 10-12 ದಿನಗಳವರೆಗೆ ಇರಲಿದೆ ಎಂದರು. ಇದೇ ವೇಳೆ ನಾಡಿನ ವಿವಿಧ ಭಾಗಗಳಲ್ಲೂ ದಸರಾ ಕಾರ್ಯಕ್ರಮವನ್ನು ಬಹಳ ಸಂಭ್ರಮದಿಂದ ಆಚರಣೆ ಮಾಡಲಾಗುತ್ತಿದೆ. ಮಡಿಕೇರಿಯಲ್ಲಿ ಮೈಸೂರಿಗಿಂತಲೂ ಹೆಚ್ಚಿನ ಹಣ ವ್ಯಯ ಮಾಡಿ ಸ್ತಬ್ಧಚಿತ್ರಗಳನ್ನು ಮಾಡಿದ್ದಾರೆ. ಇದನ್ನು ನೋಡಿ ನನಗೆ ಅಚ್ಚರಿಯಾಯಿತು ಎಂದು ತಿಳಿಸಿದರು.

## 1 ವರ್ಷದ ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

• **ಉದಯವಾಹಿನಿ,ಬೆಂಗಳೂರು**





ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2024-25ನೇ ಸಾಲಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಪತ್ರಿಕೋದ್ಯಮ ಪದವೀಧರರು ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 12 ತಿಂಗಳ ಅಪ್ರೆಂಟಿಸ್ ತರಬೇತಿಯನ್ನು ಹಮ್ಮಿಕೊಂಡಿದ್ದು ಅರ್ಹ ಪತ್ರಿಕೋದ್ಯಮ ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಚೇರಿಯಲ್ಲಿ ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗಾಗಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಪರಿಶಿಷ್ಟ ಜಾತಿಗೆ ಸೇರಿದ, ಇಬ್ಬರು ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ಅಪ್ರೆಂಟಿಸ್ ಮಾಹೆಯಾನ ರೂ.15000/- ಗಳ ಸ್ಟೇಫಂಡ್ (ಗೌರವ ಸಂಭಾವನೆ) ನೀಡಲಾಗುವುದು.ರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 35 ವರ್ಷದೊಳಗಿರಬೇಕು. ಅರ್ಜಿಯೊಂದಿಗೆ ಆಧಾರ್, ಎಸ್. ಎಸ್. ಎಲ್.ಸಿ ಅಂಕಪಟ್ಟಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಪಾಸ್ ಪೋರ್ಟ್ ಅಳತೆಯ ಎರಡು ಭಾವಚಿತ್ರ ಹಾಗೂ ಇನ್ನಿತರ ಪೂರಕ ದಾಖಲೆಗಳನ್ನು ತ್ರಿ-ಪ್ರತಿಯಲ್ಲಿ 2024 ರ ಅಕ್ಟೋಬರ್ 28 ರೊಳಗಾಗಿ ಉಪನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಂ.17, ಭಗವಾನ್ ಮಾಹಾವೀರ ರಸ್ತೆ, ವಾರ್ತಾ ಸೌಧ, 2ನೇ ಮಹಡಿ, ಇನ್ಫೆಂಟ್ರಿ ರಸ್ತೆ, ಬೆಂಗಳೂರು-560001 ಗೆ ಸಲ್ಲಿಸುವುದು.

> **ಆಸಕ್ತರು ಅರ್ಹತೆಗಳು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿರುವ ಇಲಾಖೆ ಕಚೇರಿಯ ಇ-ಮೇಲ್ ruralinformation@gmail.comಅನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಸರ್ಕಾರಿ ನೌಕರರ ವಿರುದ್ಧ ದೂರು, ನೌಕರರಿಗೆ ಎರಡು ಅವಕಾಶಗಳು

• **ಉದಯವಾಹಿನಿ,ಬೆಂಗಳೂರು**

**ಉತ್ತರ ನೀಡಲು ಎರಡನೇ ಅವಕಾಶ**

ಕರ್ನಾಟಕದ ಸರ್ಕಾರಿ ನೌಕರರ ವಿರುದ್ಧ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ಸಲ್ಲಿಕೆಯಾಗುವ ದೂರುಗಳನ್ನು ಇತ್ಯರ್ಥಪಡಿಸಲು ಕಾಲಮಿತಿ ನಿಗದಿಗೊಳಿಸಲಾಗಿದೆ. ಅಲ್ಲದೇ ಸರ್ಕಾರಿ ಅಧಿಕಾರಿ/ ನೌಕರರಿಗೆ ಕಾರಣ ಕೇಳುವ ನೋಟಿಸ್ ನೀಡಿದಾಗ ಅದಕ್ಕೆ ಹೇಗೆ ಉತ್ತರ ನೀಡಬೇಕು, ಉತ್ತರ ನೀಡಲು ಎರಡನೇ ಅವಕಾಶ ನೀಡಬೇಕೆ ಕಾರಣ ಕೇಳುವ ನೋಟಿಸ್ ಜಾರಿ ಮಾಡುವುದು. ಸರ್ಕಾರಿ ನೌಕರನ ವಿರುದ್ಧ ದೂರು ಸಲ್ಲಿಕೆಯಾದಲ್ಲಿ ಅದನ್ನು ಇತ್ಯರ್ಥಪಡಿಸುವ 4ನೇ ಹಂತ ನೋಟಿಸ್ ನೀಡುವುದು. ಯಾವುದೇ ದೂರು ಬಂದಾಗ ಸಕ್ಷಮ ಪ್ರಾಧಿಕಾರಿಗಳು ಮಾನದಂಡಗಳನ್ವಯ ಕಾರಣ ಕೇಳುವ ನೋಟಿಸ್ ನೀಡುವಾಗ ಕೆಲವು ಅಂಶಗಳನ್ನು ಪಾಲಿಸಬೇಕು.



ದೂರು ಯಾವ ಮೂಲದಿಂದ (ಲಿಖಿತ/ ಪತ್ರಿಕಾ ಪ್ರಕಟಣೆ/ ವಾಟ್ಸಪ್/ ಇ-ಮೇಲ್/ ದೃಶ್ಯ ಮಾಧ್ಯಮ) ಬಂದಿದೆ ಎಂಬುದನ್ನು ಕಾರಣ ಕೇಳುವ ನೋಟಿಸ್‌ನಲ್ಲಿ ನಮೂದಿಸುವುದು. ಕಾರಣ ಕೇಳುವ ನೋಟಿಸ್‌ನಲ್ಲಿ ಉತ್ತರಿಸಲು ಕಡ್ಡಾಯವಾಗಿ ಎರಡು ವಾರ ಕಾಲಾವಕಾಶ ನೀಡತಕ್ಕದ್ದು, ತುರ್ತು ಅಥವಾ ಸೂಕ್ಷ್ಮ ವಿಷಯಗಳ ಕುರಿತು ದೂರುಗಳಿದ್ದಲ್ಲಿ, ವಿಷಯದ ಸೂಕ್ಷ್ಮತೆಯ ಅನುಗುಣವಾಗಿ ಶಿಸ್ತು ಪ್ರಾಧಿಕಾರಿಗಳ, ವಿವೇಚನೆಯಂತೆ ಎರಡು ವಾರಗಳಿಗಿಂತ ಕಡಿಮೆ ಕಾಲಾವಕಾಶ ನೀಡತಕ್ಕದ್ದು.

ದೂರು ಒಬ್ಬರಿಗಿಂತ ಹೆಚ್ಚು ಅಧಿಕಾರಿ/ ನೌಕರರ ಮೇಲೆ ಇದ್ದಲ್ಲಿ ಪ್ರತ್ಯೇಕವಾದ ಕಾರಣ ಕೇಳುವ ನೋಟಿಸ್ ನೀಡತಕ್ಕದ್ದು, ಯಾವುದೇ ಕಾರಣಕ್ಕಾಗಿಯೂ ಎಲ್ಲರನ್ನು ಸೇರಿಸಿ ಒಂದೇ ಕಾರಣ ಕೇಳುವ ನೋಟಿಸ್ ನೀಡತಕ್ಕದ್ದಲ್ಲ. ಈ ಕಾರಣ ಕೇಳುವ ನೋಟಿಸ್ ಅನ್ನು ವಾಟ್ಸಪ್ ಗ್ರೂಪ್‌ಗಳಲ್ಲಿ ಹಂಚಿಕೊಳ್ಳತಕ್ಕದ್ದಲ್ಲ.

## ಬಿಬಿಎಂಪಿ ಮುಖ್ಯ ಆಯುಕ್ತರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ: ಎಫ್‌ಐಆರ್ ದಾಖಲು

• **ಉದಯವಾಹಿನಿ,ಬೆಂಗಳೂರು**



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆಯಲಾಗಿದ್ದು, ಈ ಸಂಬಂಧ ಕೆಲವು ದೂರುಗಳನ್ನು ಸ್ವೀಕರಿಸಿದ ನಂತರ ಶುಕ್ರವಾರ ಸಿಇಎನ್ ಪೊಲೀಸ್ ಠಾಣೆಯಲ್ಲಿ (ಕೇಂದ್ರ ವಿಭಾಗ) ಎಫ್‌ಐಆರ್ ದಾಖಲಿಸಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಮುಖ್ಯ ಆಯುಕ್ತರ ಭಾವಚಿತ್ರ, ಹೆಸರು, ಹುದ್ದೆ ಮತ್ತು ಸಂಸ್ಥೆಯ ಹೆಸರನ್ನು ದುರ್ಬಳಕೆ ಮಾಡಿಕೊಂಡು ನಕಲಿ ಫೇಸ್ ಬುಕ್ ಖಾತೆ https://www.facebook.com/share/72zn-q6cB8NENELpo/ ತೆರೆಯಲಾಗಿದೆ.

ನಕಲಿ ಫೇಸ್‌ಬುಕ್ ಖಾತೆ ಮೂಲಕ ಪಾಲಿಕೆಯ ಅಧಿಕಾರಿಗಳು, ನೌಕರರು ಹಾಗೂ ಸಾರ್ವಜನಿಕರನ್ನು ವಂಚಿಸುವ ಸಾಧ್ಯತೆಯಿದ್ದು, ಸದರಿ ಫೇಸ್‌ಬುಕ್ ಖಾತೆಯನ್ನು ಡಿಲೀಟ್ ಮಾಡಿ, ಖಾತೆ ತೆರೆದಿರುವ ಅಪರಿಚಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ದೂರು ನೀಡಲಾಗುವುದು ಎಂದು ಪಾಲಿಕೆ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಎರಡು ವರ್ಷಗಳ ಹಿಂದೆ ಅಪರಿಚಿತರ ಸಂಖ್ಯೆಯ ವಾಟ್ಸಾಪ್ ಡಿಪಿಯಲ್ಲಿ ಗಿರಿನಾಥ್ ಅವರ ಚಿತ್ರವನ್ನು ಬಳಸಲಾಗಿತ್ತು. ಇ-ಕಾಮರ್ಸ್ ಕಂಪನಿಗಳಿಂದ ಉಡುಗೊರೆಗಳನ್ನು ಆರ್ಡರ್ ಮಾಡಿ ಅವರಿಗೆ ಕಳುಹಿಸಲು ಅಧಿಕಾರಿಗಳಿಗೆ ಕೇಳಲಾಗಿತ್ತು.

ಈ ವರ್ಷದ ಮೇ ನಲ್ಲಿ ಇಂಜಿನಿಯರ್‌ಗಳಿಗೆ ಗುಡ್ ಮಾರ್ನಿಂಗ್ ಎಂಬ ಶುಭಾಶಯ ಕಳುಹಿಸಿ ಎಲ್ಲಿದ್ದೀರಾ ಎಂದು ಅವರನ್ನು ಕೇಳಲಾಗಿತ್ತು. ಈ ಎರಡು ಘಟನೆಗಳಿಗೆ ಸಂಬಂಧಿಸಿದಂತೆ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

## ಕಾಂಗ್ರೆಸ್ ಶಾಸಕನಾಗಿದ್ದುಕೊಂಡು ಅಸಹಾಯಕತೆ ಪ್ರದರ್ಶಿಸಿದ ರಾಜು ಕಾಗೆ: ಬಿಜೆಪಿ ಟಾಂಗ್

• **ಉದಯವಾಹಿನಿ,ಬೆಂಗಳೂರು**





**ಸರ್ಕಾರ ವಿರುದ್ಧ ವಾಗ್ದಾಳಿ**

ಕಾಂಗ್ರೆಸ್ ಶಾಸಕನಾಗಿದ್ದುಕೊಂಡು ರೈತರಿಗೆ ಅನುದಾನ ಮಾಡಿಕೊಡಲಾಗುತ್ತಿಲ್ಲ ಎಂದು ಅಸಹಾಯಕತೆ ಪ್ರದರ್ಶಿಸಿದ ಕಾಂಗ್ರೆಸ್ ಶಾಸಕ ರಾಜು ಕಾಗೆ ವಿಡಿಯೋವೊಂದನ್ನು ಹಂಚಿಕೊಂಡಿರುವ ರಾಜ್ಯ ಬಿಜೆಪಿ ಘಟಕ ರಾಜ್ಯ ಸರ್ಕಾರ ದಿವಾಳಿಯಾಗಿದೆ ಎನ್ನುವುದಕ್ಕೆ ಇದೇ ಸಾಕ್ಷಿ ಎಂದಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ಗಳಿಗಾಗಿ ಶಾಸಕರಿಗೆ ಅನುದಾನ ನೀಡುತ್ತಿಲ್ಲ ಎಂಬ ಆರೋಪವಿದೆ.

ಅದಕ್ಕೆ ತಕ್ಕಂತೆ ಇದೀಗ ರಾಜು ಕಾಗೆ ಕೂಡಾ ಕಾರ್ಯಕ್ರಮವೊಂದರಲ್ಲಿ ಮಾತನಾಡುವಾಗ, ಆಡಳಿತ ಪಕ್ಷದ ಶಾಸಕನಾಗಿಯೇ ಹೀಗೆ ಹೇಳುತ್ತಿದ್ದೇನೆ. ನಮಗೆ ಅನ್ನ ಒದಗಿಸುವ ನಿಮಗೆ ಅನುಕೂಲ ಮಾಡಿಕೊಡದ ಮೇಲೆ ನಾವು ಬದುಕಿದ್ದು ಏನು ಪ್ರಯೋಜನ ಎಂದಿದ್ದಾರೆ.

ಇದರ ಬಗ್ಗೆ ಪ್ರತಿಕ್ರಿಯಿಸಿರುವ ಬಿಜೆಪಿ, ಆಡಳಿತ ಪಕ್ಷದ ಶಾಸಕನೇ ಆತ್ಮಹತ್ಯೆ ಬಗ್ಗೆ ಮಾತನಾಡುತ್ತಿರುವುದು ಇದೇ ಮೊದಲು. ಇದಕ್ಕೆ ಮೊದಲು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ವರದಿ ನೋಡುತ್ತಿದ್ದೆವು. ಈಗ ಸರ್ಕಾರದ ಶಾಸಕನೇ ಅಸಹಾಯಕತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಮಾತನಾಡುತ್ತಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾಗಿಲ್ಲ. ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳದೇ ಸರಣಿ ಭ್ರಷ್ಟಾಚಾರಗಳನ್ನು ಹೇಗೆ ನಡೆಸಬಹುದು ಎಂಬುದನ್ನು ಕಾಂಗ್ರೆಸ್ ಕರಗತ ಮಾಡಿಕೊಂಡಿದೆ. ಅನೈತಿಕ ಮತ್ತು ಅರಾಜಕತೆಯ ನಡುವೆ ರಾಜ್ಯ ಸರ್ಕಾರ ಸಿಲುಕಿಕೊಂಡಿದೆ ಎಂಬುದನ್ನು ತೋರಿಸುತ್ತದೆ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

# ಸರ್ಕಾರದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕಾನೂನು ಸಚಿವರಿಗೆ ಪತ್ರ

## ಛಲವಾದಿ ನಾರಾಯಣಸ್ವಾಮಿ ಎಚ್ಚರಿಕೆ, ಛಲವಾದಿ ನಾರಾಯಣಸ್ವಾಮಿ ಸುದ್ದಿಗೋಷ್ಠಿ

• **ಉದಯವಾಹಿನಿ,ಬೆಂಗಳೂರು**

**ತುಷ್ಟೀಕರಣ ರಾಜಕೀಯ ಖಂಡನೆ**

ರಾಜ್ಯದ ಕಾಂಗ್ರೆಸ್ ಸರಕಾರದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕೇಂದ್ರ ಸರಕಾರದ ಕಾನೂನು ಸಚಿವರಿಗೆ ಇವತ್ತೇ ಪತ್ರ ಬರೆಯುವುದಾಗಿ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪ್ರಕಟಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರಕಾರವು ಈಚೆಗೆ ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಹಾಕಿದವರು, ಕಲ್ಲು ತೂರಿದವರು, ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಗಲಭೆ ಮಾಡಿದ 100-150 ಜನ ಕ್ರಿಮಿನಲ್‌ಗಳ ಮೇಲಿನ ಕೇಸುಗಳನ್ನು ಹಿಂಪಡೆದಿದೆ. ಈ ಮೂಲಕ ಒಂದು ಸಮುದಾಯವನ್ನು ಓಲೈಕೆ ಮಾಡಲು ತುಷ್ಟೀಕರಣ ರಾಜಕೀಯ ಮಾಡಿದೆ ಎಂದು ಖಂಡಿಸಿದರು.

ಹುಬ್ಬಳ್ಳಿಯಲ್ಲಿ ಆದುದು ಗಂಭೀರ ಅಪರಾಧ. ಅಂಥ ಪ್ರಕರಣ ಹಿಂಪಡೆಯುವ ನಿರ್ಧಾರದ ಸಂಬಂಧ ಮಾನ್ಯ ರಾಷ್ಟ್ರಪತಿಗಳು, ಪ್ರಧಾನಿಯವರ ಹಾಗೂ ಕೇಂದ್ರದ ಗೃಹ ಸಚಿವರ ಗಮನ ಸೆಳೆಯುತ್ತೇನೆ. ಅವರಿಗೂ ಪತ್ರ ಬರೆಯುವೆ ಎಂದು ತಿಳಿಸಿದರು.

ಇದು ಸರಕಾರ ಮಾಡಿದ ಅಕ್ಷಮ್ಯ ಅಪರಾಧ. ಸಂಘಟಿತ ಅಪರಾಧ ಮಾಡಿದವರ ಕೇಸ್ ವಾಪಸ್ ಪಡೆಯುವ ಮೂಲಕ ಇನ್ನೊಂದು ಸಂಘಟಿತ ಅಪರಾಧವನ್ನು ರಾಜ್ಯದ ಸಚಿವಸಂಪುಟ ಮಾಡಿದೆ ಎಂದು ಟೀಕಿಸಿದರು. ಇದರ ಬಗ್ಗೆ 'ತುಷ್ಟೀಕರಣ ರಾಜಕೀಯ' ಎಂದು ಜನರ ಗಮನ ಸೆಳೆಯುತ್ತೇವೆ; ಕೇಸಿನ ವಾಪಸಾತಿಯ ಸಂಬಂಧ ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಲಿದ್ದೇವೆ. ಟ್ರಯಲ್ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದ್ದು, ಅಲ್ಲಿ ಕೂಡ ನಮ್ಮ ಪಕ್ಷದಿಂದ ಆಕ್ಷೇಪ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ನೀವು ಹಾಗಿದ್ದರೆ ಹುಬ್ಬಳ್ಳಿ, ಮಂಗಳೂರು, ಉಡುಪಿ, ಶಿವಮೊಗ್ಗ ಮೊದಲಾದ ಕಡೆಗಳಲ್ಲಿ ಹಿಂದೂ ಕಾರ್ಯಕರ್ತರ ಮೇಲಿನ ಕೇಸ್‌ಗಳನ್ನು ಯಾಕೆ ವಾಪಸ್ ಪಡೆದಿಲ್ಲ ಎಂದು ಅವರು ಸರಕಾರವನ್ನು ಪ್ರಶ್ನಿಸಿದರು. ಹಿಂದೂಗಳು ಮಾತ್ರ ಕ್ರಿಮಿನಲ್‌ಗಳು, ಇವರು ಕ್ರಿಮಿನಲ್‌ಗಳಲ್ಲವೇ ಎಂದು ಪ್ರಶ್ನೆಯನ್ನು ಮುಂದಿಟ್ಟರು. ಸರಕಾರದ ಉದ್ದೇಶ ಏನು? ಇದು ತುಷ್ಟೀಕರಣ ರಾಜಕೀಯವಲ್ಲವೇ? ಒಂದು ಸಮುದಾಯದ ಪರ ನಿಲ್ಲುವ ಸರಕಾರ ನಮಗೆ ಬೇಕೇ ಎಂದು ಕೇಳಿದರು.



> **ಪ್ರತಿಭಟನೆ ಸಂದರ್ಭದಲ್ಲಿ ಅನುಮತಿ ಪಡೆದಿಲ್ಲ ಎಂಬಂಥ ಕೇಸುಗಳನ್ನು ಕೈಬಿಟ್ಟರೆ ಅದು ಸಹಜ. ಆದರೆ, ಪೊಲೀಸ್ ಠಾಣೆಗೆ ಬೆಂಕಿ ಇಡುವುದು, ಪೊಲೀಸ್ ವಾಹನಕ್ಕೆ ಬೆಂಕಿ ಇಡುವುದು- ಇಂಥ ಕೇಸನ್ನು ಕೈಬಿಟ್ಟರೆ ಸಹಿಸಲಾಗದು ಎಂದು ಪ್ರಶ್ನೆಗೆ ಉತ್ತರವಾಗಿ ಎಚ್ಚರಿಸಿದರು.**
> -ಛಲವಾದಿ ನಾರಾಯಣಸ್ವಾಮಿ

ಸಿ.ಟಿ.ರವಿ ಅವರ ಕೇಸನ್ನೂ ವಾಪಸ್ ಪಡೆದುದಾಗಿ ಹೇಳಿದ್ದಾರೆ.

ಅದೇನು ಕ್ರಿಮಿನಲ್ ಕೇಸಾ ಎಂದು ಪ್ರಶ್ನಿಸಿದರು. ಸಿ.ಟಿ.ರವಿ ಅವರು ಶಾಸಕ, ಹಿಂದೆ ಸಚಿವರಾಗಿದ್ದು, ರಾಷ್ಟ್ರ ರಾಜಕಾರಣದಲ್ಲಿ ಒಳ್ಳೆಯ ಹೆಸರು ಪಡೆದವರು. ಅವರೇನು ಕ್ರಿಮಿನಲ್ಲಾ ಎಂದರು.

ಮುಡಾ ಹಗರಣ, ಎಸ್‌ಇಪಿ, ಟಿಎಸ್‌ಪಿ ಹಣ ದುರುಪಯೋಗ, ಕೆಕೆಆರ್‌ಡಿಪಿಯಲ್ಲಿ ಸಾವಿರಾರು ಕೋಟಿ ಹಣ ನುಂಗಿದ್ದು, ವಾಲ್ಮೀಕಿ ನಿಗಮದ ಹಣ ನುಂಗಿದ ಆಪಾದನೆಗಳಿಂದ ನುಣುಚಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಶ್ನೆಗೆ ಉತ್ತರ ನೀಡಿದ ಅವರು, ಈ ಸರಕಾರ ಹೋಗಲಿದೆ ಎಂದಿದ್ದೇನೆ; ಪಲ್ಲಟ ಆಗಲಿದೆ ಎಂದರೆ ನಮ್ಮ ಕಡೆ ಒಂದಷ್ಟು ಜನ ಬರುತ್ತಾರೆ, ನಾವು ಸರಕಾರ ಮಾಡುತ್ತೇವೆ ಎಂದು ಅರ್ಥ ಮಾಡಿಕೊಳ್ಳಬೇಕಿಲ್ಲ. ನಾವು ಯಾವುದೇ ಕಾರಣಕ್ಕೂ ಚುನಾವಣೆ ಎದುರಿಸಲು ಸಿದ್ಧವೇ ಹೊರತು ಇವರನ್ನು ಸೇರಿಸಿಕೊಂಡು ಸರಕಾರ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

> **ಕೇಸು ದಾಖಲಾಗುತ್ತಿದ್ದಂತೆ ಬಿಜೆಪಿ ಶಾಸಕ ಮುನಿರತ್ನ ಬಂಧನ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಬಂಧಿಸದೆ ಬಿಟ್ಟ ಕ್ರಮದ ಕುರಿತು ಪ್ರಶ್ನೆಗೆ ಉತ್ತರಿಸಿದ ಅವರು, ಅವರ ಶಾಸಕರನ್ನು ರಕ್ಷಣೆ ಮಾಡುವಲ್ಲಿ ಈ ಸರಕಾರ ನಿರತವಾಗಿದೆ. ನಮ್ಮ ಶಾಸಕರು ಮಾತ್ರ ತಪ್ಪಿತಸ್ಥರು; ಅವರೆಲ್ಲ ಹರಿಶ್ಚಂದ್ರರ ಮಕ್ಕಳು. ಅಷ್ಟು ಮಾತ್ರ ಯಾಕೆ? ಚನ್ನಾರೆಡ್ಡಿಯವರ ಮೇಲೆ ಎಫ್‌ಐಆರ್ ಆಗಿ ಮೂರು ತಿಂಗಳಾಗಿದೆ. ಜಾತಿ ನಿಂದನೆ ಕೇಸಿದ್ದರೂ ಅವರನ್ನು ಇವತ್ತಿಗೂ ರಕ್ಷಿಸುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಕ್ಲೀನ್ ಚಿಟ್ ಪಡೆಯಲು ಎಸ್‌ಐಟಿ, ಸಿಐಡಿ ಬಳಸಿಕೊಳ್ಳುತ್ತಾರೆ ಎಂದು ಟೀಕಿಸಿದರು.**

# ಅಂತರಾಳದಿಂದ.. EDITORIAL

## ಕೊರೋನ ಹಗರಣ: ನಾಡಿನ ಬೆನ್ನಿಗೆ ಚೂರಿ

ಬಿಜೆಪಿ ಅಧಿಕಾರಾವಧಿಯಲ್ಲಿ ನಡೆದಿರುವ ಕೋವಿಡ್ ಹಗರಣವನ್ನು ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಸಿಟ್) ರಚಿಸುವುದಕ್ಕೆ ಸಂಪುಟ ಸಭೆ ತೀರ್ಮಾನಿಸಿದೆ. ಕೋವಿಡ್ ಹಗರಣಕ್ಕೆ ಸಂಬಂಧಿಸಿ ನ್ಯಾ. ಮೈಕೆಲ್ ಡಿಕುನ್ಹಾ ಅವರ ವಿಚಾರಣಾ ಆಯೋಗ ಮಧ್ಯಂತರ ವರದಿಯನ್ನು ನೀಡಿದ ಬಳಿಕ ಸರಕಾರ ಹಗರಣದ ಮುಂದಿನ ಗತಿಯನ್ನು ನಿರ್ಧರಿಸುವ ನಿಟ್ಟಿನಲ್ಲಿ ಮಹತ್ತರ ತೀರ್ಮಾನವನ್ನು ತೆಗೆದುಕೊಂಡಿದೆ. ಈಗಾಗಲೇ ವಿಚಾರಣಾ ಆಯೋಗವು 11 ಸಂಪುಟಗಳಲ್ಲಿ ವರದಿ ನೀಡಿದ್ದು, 7,223.64 ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎನ್ನುವುದನ್ನು ವರದಿಯು ಉಲ್ಲೇಖಿಸಿದೆ. ವಿಚಾರಣಾ ಆಯೋಗದ ವರದಿ ಸಂಪೂರ್ಣವಾದರೆ ಹಲವು ಕಂಪೆನಿಗಳು ಕಪ್ಪು ಪಟ್ಟಿಗೆ ಸೇರಲಿವೆ ಮಾತ್ರವಲ್ಲ ಈ ಕಂಪೆನಿಗಳ ಮೂಲಕ ನಾಡಿನ ಜನತೆಗೆ ವಂಚಿಸಿದ ಅಂದಿನ ಸರಕಾರದ ಹಲವು ಅಧಿಕಾರಿಗಳು ಮತ್ತು ಸಚಿವರು ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ. ಬಿಜೆಪಿಯ ಹಲವು ನಾಯಕರು ಇಂದು ಮುಡಾ ಹಗರಣವನ್ನು ಗುಡ್ಡ ಮಾಡಿ, ಸಿದ್ದರಾಮಯ್ಯ ಅಧಿಕಾರದಿಂದ ಇಳಿಯಲೇಬೇಕು ಎಂದು ಒತ್ತಾಯಿಸುವುದರ ಹಿಂದೆ, ಈ ಕೋವಿಡ್ ಹಗರಣದ ತನಿಖೆಯ ಭಯವೂ ಇದೆ. ಮುಖ್ಯವಾಗಿ ಮುಡಾ ಹಗರಣವನ್ನು ಸಿದ್ದರಾಮಯ್ಯ ನೇತೃತ್ವದ ನೂತನ ಸರಕಾರದ ಹಗರಣವೆಂಬಂತೆ ಬಿಂಬಿಸಿ ಸಾರ್ವಜನಿಕವಾಗಿ ರಾಡಿ ಎಬ್ಬಿಸುವುದರ ಹಿಂದೆಯೇ ದುರುದ್ದೇಶ ಇದೆ. ಈ ಮೂಲಕ, ತಮ್ಮ ವಿರುದ್ಧದ ಹಗರಣಗಳ ಕರಾಳತೆಯನ್ನು ತಿಳಿಗೊಳಿಸುವುದು ಬಿಜೆಪಿ ನಾಯಕರ ಒಂದು ಉದ್ದೇಶ. ಜೊತೆ ಜೊತೆಗೇ ಕೊರೋನ ಹಗರಣದ ತನಿಖೆಗೆ ಇಳಿದಿರುವ ಸಿದ್ದರಾಮಯ್ಯ ಸರಕಾರದ ವಿಶ್ವಾಸಾರ್ಹತೆಯನ್ನು ಕುಗ್ಗಿಸಿ ಪರೋಕ್ಷವಾಗಿ ಸರಕಾರವನ್ನು ಬ್ಲಾಕ್‌ಮೇಲ್ ನಡೆಸಿ ಒತ್ತಡ ಹೇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಕೊರೋನದಿಂದ ರಾಜ್ಯಕ್ಕೆ ರಾಜ್ಯವೇ ತತ್ತರಿಸಿ ಕುಳಿತ ಹೊತ್ತಿನಲ್ಲಿ ಅದೇ ಕೊರೋನದ ಹೆಸರಿನಲ್ಲಿ ನಡೆದ ಕೋಟ್ಯಂತರ ರೂಪಾಯಿ ಹಗರಣಕ್ಕೆ ಸ್ವತಃ ಬಿಜೆಪಿಯ ಪರಿಷ್ಕರೇ ಕಂಗಾಲಾಗಿದ್ದರು. ಅಂದಿನ ಬಿಜೆಪಿ ಸರಕಾರ ಈ ಹಗರಣಗಳ ವೈಫಲ್ಯದಿಂದ ಮುಖ ಉಳಿಸಿಕೊಳ್ಳಲು ಕೊರೋನಾ ವಾರ್ ರೂಂನಲ್ಲಿರುವ ಸ್ವಯಂ ಸೇವಕರ ನಡುವೆ 'ಹಿಂದೂ–ಮುಸ್ಲಿಮ್ ಎಂದು ಭೇದವನ್ನು ಹುಟ್ಟಿಸುವ ಪ್ರಯತ್ನ ನಡೆಸಿತ್ತು ಬಿಬಿಎಂಪಿ ಆಸ್ಪತ್ರೆಗಳ ವಾರ್ ರೂಂಗೆ ನುಗ್ಗಿ ಬಿಜೆಪಿ ಮುಖಂಡ ತೇಜಸ್ವಿ ಸೂರ್ಯ ನಡೆಸಿದ ಅವಾಂತರವನ್ನು ಜನರು ಇನ್ನೂ ಮರೆತಿಲ್ಲ. ಕೊರೋನ ಹಗರಣದಲ್ಲಿ ಸಾವಿರಾರು ಕೋಟಿ ರೂ. ಹಗರಣಗಳು ನಡೆದಿವೆ ಎನ್ನುವ ಆರೋಪ ಬರಿ ಹಣಕ್ಕೆ ಸಂಬಂಧಿಸಿದ್ದಷ್ಟೇ ಅಲ್ಲ. ಆ ಸಂದರ್ಭದಲ್ಲಿ ನೂರಾರು ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು. ಆ ಸಾವು ನೋವುಗಳಲ್ಲಿ ಈ ಹಗರಣಗಳ ಪಾತ್ರ ಬಹುದೊಡ್ಡದಿದೆ. ಬೃಹತ್ ಕಂಪೆನಿಗಳ ಜೊತೆಗೆ ಒಳ ಒಪ್ಪಂದಗಳನ್ನು ಮಾಡಿಕೊಂಡು ಕೊರೋನ ಕಿಟ್ಗಳನ್ನು ಉಪಕರಣಗಳನ್ನು ದುಬಾರಿ ಬೆಲೆಯಲ್ಲಿ ಕೊಂಡು ಕೊಳ್ಳಲಾಯಿತು. ಹಲವು ಉಪಕರಣಗಳನ್ನು ಕೊಂಡು ಕೊಂಡಿರುವ ದಾಖಲೆಗಳು ಕಡತಗಳಲ್ಲಿ ಮಾತ್ರ ಇವೆ. ಅವುಗಳು ಆಸ್ಪತ್ರೆಗಳಿಗೆ ತಲುಪಲೇ ಇಲ್ಲ. ಕಂಪೆನಿಗಳಿಗೆ ಲಾಭ ಮಾಡಿಕೊಡುವುದಕ್ಕಾಗಿ ಆದೇಶಗಳನ್ನು ಮೀರಿ ಅನಗತ್ಯ ಉಪಕರಣಗಳನ್ನು ಕೊಂಡುಕೊಂಡಿರುವ ಬಗ್ಗೆಯೂ ವರದಿ ಹೇಳುತ್ತದೆ. ಕೊರೋನ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ವ್ಯಯ ಮಾಡಬೇಕಾಗಿರುವ ನೂರಾರು ಕೋಟಿ ಹಣವನ್ನು ಕಂಪೆನಿಗಳು, ಸರಕಾರಿ ಅಧಿಕಾರಿಗಳು ಮತ್ತು ಸಚಿವರು ಹಂಚಿಕೊಂಡರು ಸರಕಾರ ಕೋಟ್ಯಂತರ ರೂಪಾಯಿಯನ್ನು ಬಿಡುಗಡೆ ಮಾಡಿದರೂ ಅದು ಅಂತಿಮವಾಗಿ ಕೊರೋನ ಸಂತ್ರಸ್ತರ ಜೀವ ಉಳಿಸಲು ನೆರವಾಗಲಿಲ್ಲ. ಒಂದೆಡೆ ಸರಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳಿರಲಿಲ್ಲ. ಇನ್ನೊಂದೆಡೆ ಖಾಸಗಿ ಆಸ್ಪತ್ರೆಗಳು ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದವು. ಮಗದೊಂದೆಡೆ ಆಕ್ಸಿಜನ್ ಸಿಲಿಂಡರ್‌ಗಳ ಕೊರತೆಯಿಂದ ಆಸ್ಪತ್ರೆಗಳಲ್ಲಿ ಜನರು ಸಾಲು ಸಾಲಾಗಿ ಸಾಯತೊಡಗಿದ್ದರು. ಇಂತಹ ಹೊತ್ತಿನಲ್ಲಿ ಸರಕಾರದೊಳಗಿರುವ ಮುಖಂಡರು ಕೊರೋನ ಹಣವನ್ನು ಸದ್‌ಬಳಕೆ ಮಾಡುವ ಬದಲು, ಅದರಿಂದ ತಾನೆಷ್ಟು ಉಳಿಸಿಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕತೊಡಗಿದರು. ರಾಜಕಾರಣಿಗಳ ಈ ಅವ್ಯವಹಾರ ರಾಜ್ಯದಲ್ಲಿ ಕೊರೋನ, ಲಾಕ್ ದೌನ್‌ಗಳನ್ನು ಇನ್ನಷ್ಟು ಭೀಕರವಾಗಿಸಿತ್ತು. ಸರಕಾರದ ನೇತೃತ್ವದಲ್ಲೇ ರಾಜ್ಯದ ಜನತೆಯ ಮೇಲೇ ನಡೆದ ಈ ಅನ್ಯಾಯಗಳು ತನಿಖೆಗೊಳಗಾಗಿ ಸಂಬಂಧ ಪಟ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳು ಜೈಲು ಸೇರಲೇಬೇಕಾಗಿದೆ. ಈ ನಿಟ್ಟಿನಲ್ಲಿ ಸಿಟ್ ಹಗರಣಗಳ ಆಳಕ್ಕೆ ಇಳಿದು ಆರೋಪಿಗಳನ್ನು ಗುರುತಿಸುವ ಕೆಲಸವನ್ನು ಮಾಡಬೇಕು. ಕೊರೋನ ಹಗರಣಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕರು ಆರೋಪ ಮಾಡುವುದಕ್ಕೆ ಮೊದಲೇ, ಬಿಜೆಪಿಯ ನಾಯಕರು ಅದರ ವಿರುದ್ಧ ಧ್ವನಿಯೆತ್ತಿದ್ದರು.

> ಆಸ್ಪತ್ರೆಯ ಮಂಚಗಳನ್ನೇ ಲಕ್ಷಾಂತರ ರೂಪಾಯಿಗಳಿಗೆ ಗುಟ್ಟಾಗಿ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ಬಿಜೆಪಿ ನಾಯಕರು ಶಾಮೀಲಾಗಿರುವುದು ಮಾಧ್ಯಮಗಳಲ್ಲಿ ಬಹಿರಂಗವಾಗಿತ್ತು ಅಂತಿಮವಾಗಿ ಅಂದು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಸುವುದಕ್ಕಾಗಿ ಬಿಜೆಪಿ ನಾಯಕರೇ ಕೊರೋನ ಹಗರಣವನ್ನು ಅಸ್ತ್ರವಾಗಿ ಬಳಸಿಕೊಂಡರು. ಕೊರೋನ ಕಾಲದ ಎಲ್ಲಾ ವೈಫಲ್ಯಗಳನ್ನು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ತಲೆಗೆ ದಿಲ್ಲಿ ವರಿಷ್ಠರು ಕಟ್ಟಿದ್ದರು.

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರಕಾರದ ಅವಧಿಯಲ್ಲಿ ಕೋವಿಚ್ ಸಂಬಂಧಿತ ಖರೀದಿಯಲ್ಲಿ 40,000 ಕೋಟಿ ರೂಪಾಯಿಗಳ ಹಗರಣಗಳು ನಡೆದಿವೆ ಎಂದು ಆರೋಪಿಸಿರುವುದು ಯಾವುದೇ ಕಾಂಗ್ರೆಸ್ ನಾಯಕರಲ್ಲ. ಬಿಜೆಪಿಯ ಮುಖಂಡರೆಂದು ಗುರುತಿಸಿಕೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್, 45 ರೂಪಾಯಿಯ ಮುಖಗವಸನ್ನು ಈ ಸಂದರ್ಭದಲ್ಲಿ 485 ರೂಪಾಯಿಗಳಿಗೆ ಖರೀದಿಸಲಾಗಿತ್ತು ಎಂದು ಅವರು ಮಾಧ್ಯಮಗಳ ಮುಂದೆ ಆರೋಪಿಸಿದ್ದರು. ಹಾಸಿಗೆಗಳ ಖರೀದಿಯಲ್ಲೂ ನಡೆದಿರುವ ಬೃಹತ್ ಅವ್ಯವಹಾರವನ್ನು ಅವರು ಮಾಧ್ಯಮಗಳ ಮುಂದಿಟ್ಟಿದ್ದರು. ಯತ್ನಾಳ್ ಆರೋಪವನ್ನು ಸುಳ್ಳು ಎಂದು ಯಾವುದೇ ಬಿಜೆಪಿ ನಾಯಕರು ಈವರೆಗೆ ಹೇಳಿಲ್ಲ. ಅಷ್ಟೇ ಅಲ್ಲ ಯತ್ನಾಳ್ ಬಿಜೆಪಿ ಸರಕಾರದ ವಿರುದ್ಧವೇ ಇಂತಹದೊಂದು ಗಂಭೀರ ಆರೋಪ ಮಾಡಿದಾಗ ಬಿಜೆಪಿ ವರಿಷ್ಠರು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ.

---



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ
ಹಾಗೂ
ವಿಮರ್ಶಕರು



# ಭಾರತರತ್ನ, ರಾಷ್ಟ್ರದ ಧೀಮಂತ ನಾಯಕ ಡಾ:ರಾಮ್ ಮನೋಹರ್ ಲೋಹಿಯಾ 57ನೇ ವರ್ಷದ ಪುಣ್ಯಸ್ಮರಣೆಯ ದಿನ

■ ಉದಯವಾಹಿನಿ, ವಿಶೇಷ

ಡಾ:ರಾಮ್ ಮನೋಹರ್ ಲೋಹಿಯಾರವರು 1910 ಮಾರ್ಚ್ 23 ರಂದು ಅಯೋಧ್ಯೆಯಲ್ಲಿ ಜನಿಸಿದರು. ತಂದೆ ಹೀರಾಲಾಲ್,ತಾಯಿ ಚಂದನ.ಲೋಹಿಯಾ ಬಾಲ್ಯದಲ್ಲಿಯೇ ತಾಯಿ ಇಲ್ಲದ ತಬ್ಬಲಿಯಾದರು.
ಬಾಲ್ಯದಲ್ಲಿ ಉತ್ತಮ ಸಂಸ್ಕಾರದೊಂದಿಗೆ, ಗುಣಮಟ್ಟದ ಶಿಕ್ಷಣವು ಕಾಶಿ,ಕೊಲ್ಕತ್ತಾ,ಲಂಡನ್ ಹಾಗೂ ಜರ್ಮನಿಯಲ್ಲಿ ವ್ಯಾಸಂಗ ಮಾಡುವ ಅವಕಾಶ ದೊರಕಿತು.

ಗಾಂಧೀಜಿ,ನೆಹರು, ಸುಭಾಷ್ ಚಂದ್ರ ಬೋಸ್ ಮುಂತಾದ ನಾಯಕರುಗಳ ಜೊತೆ ಸಂಪರ್ಕ ಬೆಳೆಸಿಕೊಳ್ಳುವ ಅವಕಾಶ ದೊರೆಯಿತು. ಲೋಹಿಯಾ ಅವರ ತೀಕ್ಷ್ಣಮತಿ, ರಾಷ್ಟ್ರಪ್ರೇಮ,ವಾಗ್ಮಿತೆ ಇವುಗಳು ನೆಹರು ಅವರಿಗೆ ಪ್ರಿಯವಾಗಿ ಲೋಹಿಯಾ ನೆಹರು ಅವರಿಗೆ ಹತ್ತಿರವಾದರು. 1936 ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ಬ್ರಿಟಿಷ್ ಸರ್ಕಾರದ ವಿರುದ್ಧ ನಡೆಯುತ್ತಿದ್ದ ಚಳುವಳಿಗಳಲ್ಲಿ ಭಾಗವಹಿಸಿದ್ದ ಕಾರಣಕ್ಕಾಗಿ ಅನೇಕ ಸಲ ಸೆರೆಮನೆವಾಸ ಅನುಭವಿಸಿದರು. 1942 ರಲ್ಲಿ ನಡೆದ ಭಾರತ ಬಿಟ್ಟು ತೊಲಗಿರಿ ಎಂಬ ಚಳುವಳಿಯಲ್ಲಿ ಅಗ್ರಪಾತ್ರವಹಿಸಿದರು. ಜೆಪಿ ರವರೊಂದಿಗೆ ಸೇರಿ ಭೂಗತ ಚಳುವಳಿ ಸಂಘಟಿಸಿದರು. 1948 ರಲ್ಲಿ ಗಾಂಧೀಜಿಯವರ ಹತ್ಯೆ ನಡೆದ ನಂತರ ಕಾಂಗ್ರೆಸ್ ಪಕ್ಷ ತೊರೆದು ಸೋಶಿಯಲಿಸ್ಟ್ ಪಾರ್ಟಿಯ ಪ್ರಧಾನ ನಾಯಕರಲ್ಲಿ ಒಬ್ಬರಾಗಿ ಲೋಹಿಯಾ ದೇಶದ ಕಾರ್ಮಿಕರ,ರೈತರ ಹೋರಾಟಗಳ ಮುಖಂಡತ್ವ ವಹಿಸಿದರು. ಜಾತಿವಿನಾಶ,ಸ್ತ್ರೀ ವಿಮೋಚನೆ, ಸರ್ವಸಮಾನತೆ ಇವು ಲೋಹಿಯಾ ಪ್ರತಿಪಾದಿಸಿದ ವಿಚಾರಗಳಾಗಿದ್ದವು.

> ಭಾರತದಲ್ಲಿರುವ ಶೋಷಿತ ವರ್ಗಕ್ಕೆ, ದೀನದಲಿತರಿಗೆ, ಸಮಾಜದಲ್ಲಿ ಎಲ್ಲಾ ಹಕ್ಕುಗಳು,ಅವಕಾಶ, ಸೌಲಭ್ಯಗಳು ದೊರೆತು ಘನತೆ,ಗೌರವಗಳಿಂದ ಕೂಡಿ ಸರ್ವ ಸಮಾನತೆಯಿಂದ ಬದುಕಬೇಕೆಂಬುದು ಅವರ ಹಂಬಲವಾಗಿತ್ತು. ಇದಕ್ಕಾಗಿ ಲೋಹಿಯಾ ರವರು ತಮ್ಮ ಬದುಕಿನುದ್ದಕ್ಕೂ ಅವಿರತವಾಗಿ ಶ್ರಮಿಸಿದರು. ಭಾರತ ಸರ್ಕಾರ 2015 ರಂದು ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಲೋಹಿಯಾ ಅಧಿಕಾರದ ವಿಕೇಂದ್ರೀಕರಣವನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಲೋಹಿಯಾ ಸತ್ಯಾಗ್ರಹವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಏರಿಸಿದರು. ಅಮೇರಿಕಯಲ್ಲಿ ವರ್ಣದ್ವೇಷದ ವಿರುದ್ಧ ನಡೆದ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು. ಇವರು ತೀಕ್ಷ್ಣದೃಷ್ಟಿಯ ಹರಿತ ಬರಹಗಾರರಾಗಿದ್ದರು. ಅವರ ಅನೇಕ ಕೃತಿಗಳು ವಿಶ್ವದಾದ್ಯಂತ ವಿಚಾರ ಶೀಲರ ಗಮನಸೆಳೆದಿದೆ.

ಮಾರ್ಕ್ಸ್,ಗಾಂಧಿ ಮತ್ತು ಸಮಾಜವಾದ, ಭಾರತ ವಿಭಜನೆಯ ಅಪರಾಧಗಳು,ಇತಿಹಾಸ ಚಕ್ರ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಲೋಹಿಯಾ ಅವರಿಗೆ ದೇವರಲ್ಲಿ ನಂಬಿಕೆ ಇಲ್ಲದಿದ್ದರೂ ಗಾಂಧೀಜಿಯಂತೆ ಮಾನವತೆ,ಸತ್ಯ, ಸೌಂದರ್ಯಗಳಲ್ಲಿ ದೇವರ ಕಲ್ಪನೆಯನ್ನು ಕಂಡಿದ್ದರು.

ದೇಶದ ಏಕತೆ, ರಾಷ್ಟ್ರೀಯತೆ, ಭಾರತದ ಸಂಸ್ಕೃತಿ ಪ್ರಧಾನ ವಿಷಯಗಳಾಗಿದ್ದವು. ಅವರು ಈ ವಿಷಯಗಳಲ್ಲಿ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. 1963 ಮತ್ತು 1967 ರಲ್ಲಿ ಲೋಕಸಭೆಗೆ ಆಯ್ಕೆಯಾದರು. ಆದರೆ ಅದೇ ವರ್ಷ ಅಕ್ಟೋಬರ್ 12 ರಂದು ಹಠಾತ್ ನಿಧನರಾದರು.

> ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು

ರಾಷ್ಟ್ರ ಓರ್ವ ಮಹಾನ್ ಚಿಂತಕ,ರಾಜಕೀಯ ಮುತ್ಸದ್ದಿ, ವಿಚಾರಶೀಲ ಧೀಮಂತ ನಾಯಕರನ್ನು ರಾಷ್ಟ್ರ ಕಳೆದುಕೊಂಡಿತ್ತು. ಲೋಹಿಯಾ ಭೌತಿಕ ಶರೀರವನ್ನು ತೊರೆದಾಗ ಅವರ ಬಳಿ ಯಾವ ಆಸ್ತಿಯು ಇರಲಿಲ್ಲ. ಆದರೆ ನಾಡ ಜನತೆಗೆ ಅವರು ಅಮೂಲ್ಯ ಆದರ್ಶ ಸಿದ್ಧಾಂತಗಳನ್ನು ನೀಡಿದ್ದಾರೆ. ನನ್ನ ಬಳಿ ನನ್ನದೆಂಬುದು ಏನೂ ಇಲ್ಲ, ಭಾರತದ ಬಡವರು, ಶೋಷಿತ ವರ್ಗದವರು, ಶ್ರೀಸಾಮಾನ್ಯರು ನನ್ನನ್ನು ತಮ್ಮವರು ಅಂದುಕೊಂಡಿರುವ ಒಂದು ಭಾವನೆಯನ್ನ ಬಿಟ್ಟರೆ ನನ್ನ ಬಳಿ ಇನ್ನೇನೂ ಉಳಿದಿಲ್ಲ ಎಂದು ಸಾರಿದ್ದಾರೆ. ದಮನ ದಬ್ಬಾಳಿಕೆ ಗಳಿಂದ ಆಡಳಿತ ನಡೆಸುತ್ತಿದ್ದ ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಯಾವುದೇ ರೀತಿಯ ಅನುಕೂಲ,ಅವಕಾಶ, ಅಗತ್ಯಗಳನ್ನು ಪೂರೈಸದೆ ದೌರ್ಜನ್ಯ ದುರಾಡಳಿತವನ್ನು ಮುಂದುವರಿಸಿದಾಗ ಭಾರತೀಯರು ತಮ್ಮ ಮನೋದೌರ್ಬಲ್ಯದಿಂದಾಗಿ ತಟಸ್ಥರಾಗಿ ಅವುಗಳನ್ನು ಸಹಿಸಿಕೊಳ್ಳುವ ಸಂದರ್ಭ ಒದಗಿತ್ತು. ಆದರೆ ಕೆಲವು ಧೈರ್ಯಶಾಲಿ ದೇಶಪ್ರೇಮಿ ಯುವಕರು ತಮ್ಮ ಕ್ರಾಂತಿಕಾರಿ ಧೋರಣೆ ಚಟುವಟಿಕೆಗಳಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಎದುರಿಸಿದರು. ಅಂಥವರಲ್ಲಿ ಲೋಹಿಯಾ ಒಬ್ಬರಾಗಿದ್ದು ಇಂದಿಗೂ ಭಾರತದ ಜನತೆ ಅವರ ಧೀಮಂತ ವ್ಯಕ್ತಿತ್ವ, ದೇಶಭಕ್ತಿ, ಅರ್ಥಪೂರ್ಣ ಗಂಭೀರ ವಿಚಾರಗಳಿಗಾಗಿ ಆ ಮಹಾನ್ ಚಿಂತಕನನ್ನ ಇಂದಿಗೂ ನೆನೆಯುತ್ತಾರೆ. ಲೋಹಿಯಾ ರಾಜಕೀಯ ದಿಗಂತದಲ್ಲಿ ನಕ್ಷತ್ರವಾಗಿ ಬೆಳಗುತ್ತಿದ್ದಾರೆ.ಇಂಥಹ ಅನನ್ಯ ಚೇತನ ರಾಷ್ಟ್ರಪ್ರೇಮಿ ನಮ್ಮನ್ನಗಲಿ ಇಂದಿಗೆ 57 ವರ್ಷ ಮುಗಿಯಿತು. ಇಂದು ಅವರ 57 ನೇ ವರ್ಷದ ಪುಣ್ಯಸ್ಮರಣೆಯ ದಿನ ಭಾರತೀಯರಾದ ನಾವುಗಳು ಇಂತಹ ಮಹಾನ್ ಚೇತನರನ್ನ ಸ್ಮರಿಸಿ, ನೆನೆಯುತ್ತಾ ಅವರ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಪ್ರಾರ್ಥಿಸೋಣ...

---

# ಮಂಗಳ ಗೋಚರ: ಈ ರಾಶಿಗೆ ಟೆನ್ಷನ್ ಶುರು

• ಉದಯವಾಹಿನಿ,ಬೆಂಗಳೂರು



ಉದಯವಾಹಿನಿ ಚಿತ್ರ

ಗ್ರಹಗಳ ಅಧಿಪತಿಯಾದ ಮಂಗಳನು ವೃಶ್ಚಿಕ ಮತ್ತು ಮೇಷ ರಾಶಿಯ ಅಧಿಪತಿಯಾಗಿದೆ. 2024ರ ಮಂಗಳನ ಕೊನೆಯ ಸಾಗಣೆ ಶೀಘ್ರದಲ್ಲೇ ನಡೆಯಲಿದೆ. ಮಂಗಳ ಯಾವುದೇ ಒಂದು ರಾಶಿಯಲ್ಲಿ 45ರಿಂದ 50 ದಿನಗಳವರೆಗೆ ಇರುತ್ತದೆ. ಮಂಗಳವನ್ನು ವ್ಯಕ್ತಿಯ ಶೌರ್ಯ, ಧೈರ್ಯ, ಶಕ್ತಿಯ ಅಂಶವೆಂದು ಪರಿಗಣಿಸಲಾಗುತ್ತದೆ.

ಹಾಗಾದರೆ ಮಂಗಳ ಗ್ರಹ ಈ ವರ್ಷ ಯಾವ ದಿನಾಂಕದಂದು ರಾಶಿ ಬದಲಾವಣೆ ಮಾಡಲಿದೆ, ಇದರಿಂದಾಗುವ ಪರಿಣಾಮಗಳೇನು ಎಂದು ತಿಳಿಯೋಣ. ಮಂಗಳ ಗ್ರಹ ಶೀಘ್ರದಲ್ಲೇ ಮಿಥುನ ರಾಶಿಯಿಂದ ಹೊರಬರುತ್ತದೆ. ಭಾನುವಾರ, ಅಕ್ಟೋಬರ್ 20, 2024 ರಂದು ಕರ್ಕ ರಾಶಿಯನ್ನು ಪ್ರವೇಶಿಸುತ್ತದೆ. ಈ ಮಂಗಳ ಸಂಕ್ರಮಣ ಅಕ್ಟೋಬರ್ 20ರಂದು ಮಧ್ಯಾಹ್ನ 2.26ಕ್ಕೆ ನಡೆಯಲಿದೆ. ಮಂಗಳ ಗ್ರಹ ಕರ್ಕಾಟಕಕ್ಕೆ ಪ್ರವೇಶಿಸುವುದರಿಂದ ಈ ರಾಶಿಚಕ್ರದವರಿಗೆ ತೊಂದರೆಗಳು ಹೆಚ್ಚಾಗಲಿವೆ.

ಈ ಸಮಯದಲ್ಲಿ ಅದರ ನಕಾರಾತ್ಮಕ ಪರಿಣಾಮ ದೇಶ ಮತ್ತು ಪ್ರಪಂಚದ ಮೇಲೆ ಕಂಡುಬರುತ್ತದೆ. ಹಾಗಾದರೆ ಅಕ್ಟೋಬರ್ 20 ರಿಂದ ಹೆಚ್ಚು ಟೆನ್ಷನ್ ಮಾಡಿಕೊಳ್ಳುವ ರಾಶಿಗಳು ಯಾವುವು ಎಂದು ತಿಳಿಯೋಣ.

**ವೃಷಭ ರಾಶಿ:** ವೃಷಭ ರಾಶಿಯ ಜನರು ಈ ಸಮಯದಲ್ಲಿ ಜಾಗರೂಕರಾಗಿರಬೇಕು.

ಯಾಕೆಂದರೆ ನಿಮ್ಮ ಕೆಲಸ ಅಪಾಯದಲ್ಲಿದೆ. ನೀವು ಎಲ್ಲೋ ಬೇರೆಡೆ ಕೆಲಸ ಮಾಡಲು ಪ್ರಯತ್ನಿಸುತ್ತಿದ್ದರೆ, ಅದಕ್ಕಾಗಿ ನೀವು ಹೆಚ್ಚು ಸಮಯ ಕಾಯಬೇಕಾಗಬಹುದು. ಇದರಿಂದಾಗಿ ನೀವು ಚಿಂತಿತರಾಗಬಹುದು. ಕೆಲಸದಲ್ಲಿ ಸಹೋದ್ಯೋಗಿಗಳ ಸಹಕಾರ ಇರುವುದಿಲ್ಲ. ನಿಮ್ಮನ್ನು ಕೆಲಸದಲ್ಲಿ ಕೀಳಾಗಿ ಕಾಣಬಹುದು. ನಿಮ್ಮ ಶತ್ರುಗಳು ಹೆಚ್ಚಾಗುವ ಸಾಧ್ಯತೆ ಇದೆ. ನಿಮ್ಮಲ್ಲಿ ಮನಸ್ತಾಪಗಳಿಗೆ ಪ್ರಚೋದನೆ ಸಿಗಲಿದೆ. ಕೆಲಸಲದಲ್ಲಿ ನಿಧಾನವಾಗಲಿದೆ. ಕೆಲಸದ ಒತ್ತಡ ಹೆಚ್ಚಾಗಲಿದೆ. ನಿಮ್ಮ ಮಾತು ಅರ್ಥ ಮಾಡಿಕೊಳ್ಳುವವರು ಕಡಿಮೆ ಜನ. ಹೀಗಾಗಿ ನಿಮಗೆ ಟೆನ್ಷನ್ ಹೆಚ್ಚಾಗಬಹುದು. ಹೀಗಾಗಿ ಯಾವುದೇ ಸಮಯ ಬಂದರೂ ತಾಳ್ಮೆಯಿಂದಿರಿ.

**ಕರ್ಕಾಟಕ ರಾಶಿ:** ಕರ್ಕಾಟಕ ರಾಶಿಯ ಜನರು ಮಂಗಳ ಸಂಚಾರದ ನಂತರ ಜಾಗರೂಕರಾಗಿರಬೇಕು. ಈ ಸಮಯದಲ್ಲಿ ನಿಮ್ಮ ಪ್ರಗತಿ ನಿಲ್ಲಬಹುದು. ಹಣಕಾಸಿನ ಸಮಸ್ಯೆಗಳು ಉಂಟಾಗಬಹುದು. ಇದರಿಂದಾಗಿ ನೀವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನೀವು ಕುಟುಂಬದಲ್ಲಿ ತೊಂದರೆಗಳನ್ನು ಅನುಭವಿಸುವ ಸಮಯವಿದು. ಪ್ರೇಮ ಸಂಬಂಧಗಳು ಮುರಿಯಬಹುದು. ಅನಗತ್ಯ ಭಿನ್ನಾಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ. ಕರ್ಕಾಟಕ ರಾಶಿಯವರಿಗೆ ಈ ಸಮಯದಲ್ಲಿ ಆದಾಯ ಕುಂಠಿತವಾಗಲಿದೆ. ಅಂದುಕೊಂಡ ಕಾರ್ಯಗಳು ನಿಧಾನವಾಗಲಿವೆ. ಕೆಲಸದಲ್ಲಿ ನಿರುತ್ಸಾಹ ಕಂಡುಬರಲಿದೆ. ಕೋಪ ಹೆಚ್ಚಾಗಿ ಸಣ್ಣಪುಟ್ಟ ಕಾರಣಕ್ಕೂ ಜಗಳವಾಡಬಹುದು. ನಿಮ್ಮ ಮನೆಯಲ್ಲಿ ಸಂಬಂಧಿಕರ ನಡುವೆ ಮನಸ್ತಾಪಗಳು ಹೆಚ್ಚಾಗಬಹುದು. ಸಂಸಾರದಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತವೆ.

**ಧನು ರಾಶಿ**

ಧನು ರಾಶಿಯವರಿಗೆ ಮಂಗಳ ಗ್ರಹದ ಸಂಚಾರ ತೊಂದರೆಯನ್ನುಂಟು ಮಾಡುತ್ತದೆ. ವಿದ್ಯಾರ್ಥಿಗಳಿಗೆ ಈ ಸಮಯ ಕಷ್ಟಕರವಾಗಿರುತ್ತದೆ. ನೀವು ದೊಡ್ಡ ಪರೀಕ್ಷೆಯಲ್ಲಿ ವಿಫಲರಾಗಬಹುದು. ಆದರೆ ಕಷ್ಟಪಟ್ಟು ಕೆಲಸ ಮಾಡುತ್ತಿರಿ. ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗುತ್ತವೆ. ಯಶಸ್ಸು ಬೇಗನೆ ಕೈತಪ್ಪಿ ಹೋಗಬಹುದು. ವ್ಯಾಪಾರದಲ್ಲಿ ನಷ್ಟ ಉಂಟಾಗಬಹುದು. ಎಚ್ಚರಿಕೆಯಿಂದಿರಲು ಸೂಚಿಸ ಲಾಗುತ್ತದೆ. ಧನು ರಾಶಿಯವರಿಗೆ ಈ ಸಮಯ ಅತ್ಯಂತ ಅಶುಭವಾಗಿದೆ. ಹೀಗಾಗಿ ಪ್ರಯಾಣ ಮಾಡುವಾಗ ಜಾಗರೂಕರಾಗಿರಿ. ಯಾರೊಂದಿಗೆ ವಿನಾಕಾರಣ ವಾದವನ್ನು ತಪ್ಪಿಸಿ. ಮನೆಯಲ್ಲಿ ಶಾಂತಿ ನೆಲೆಸಲು ತಾಳ್ಮೆಯಿಂದಿರಿ.

> ಮನೆಯಲ್ಲಿ ಶಾಂತಿ ನೆಲೆಸಲು ತಾಳ್ಮೆಯಿಂದಿರಿ

---

# ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಕಳವಳ

• ಉದಯವಾಹಿನಿ,ಬೆಂಗಳೂರು

ಇಂದಿನ ವಿಶ್ವವಿದ್ಯಾಲಯಗಳು ಸರ್ಕಾರದ ಪ್ರಚಾರ ಸಾಧನಗಳಾಗಿ ರೂಪಾಂತರಗೊಳ್ಳುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ, ವೀರಪ್ಪ ಮೊಯ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.
ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ.ಪುರುಷೋತ್ತಮ ಬಿಳಿಮಲೆ ರಚನೆಯ 'ಹುಡುಕಾಟ' ಸಂಶೋಧನಾ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದರು. ಶಿಕ್ಷಣ ವ್ಯವಸ್ಥೆಯಲ್ಲಿ ಸಮಾನತೆ ನಿರೂಪಿಸುವ ಮೂಲಕವಷ್ಟೇ ನಿರೀಕ್ಷಿತ ಫಲಿತಾಂಶ ದೊರಕಲು ಸಾಧ್ಯ. ಬಹುತೇಕ ವಿವಿಗಳು ಪ್ರಚಾರ ಸಾಧನಗಳಾಗಿ ಬದಲಾಗುತ್ತಿವೆ. ಇದು ಸರಿಯಲ್ಲ. ಬಹುತ್ವದ ಸಂಸ್ಕೃತಿಯುಳ್ಳ ನಮ್ಮ ದೇಶ, ಇಂದು ಬೌದ್ಧಿಕವಾಗಿ ಮರುಭೂಮಿಯಾಗುತ್ತಿದೆ. ಪಾರಂಪಾರಿಕ ರಾಜಸ್ವ, ಧಾರ್ಮಿಕ ಜಡ್ಡುಗಳಿಂದ ನಮಗೆ ಬಿಡುಗಡೆ ನೀಡಿರುವ ಸಂವಿಧಾನವೇ ನಮ್ಮನ್ನು ಮುನ್ನಡೆಸಬಹುದಾದ ಏಕೈಕ ಭರವಸೆಯಾಗಿದೆ. ಈ ಹಿನ್ನೆಲೆ ಸಮರ್ಥ ಸಂಶೋಧನಾತ್ಮಕ ಚಟುವಟಿಕೆಗಳು ಮಾತ್ರ ಸಂವಿಧಾನದ ಆಶಯವನ್ನು ಬಲಪಡಿಸಬಲ್ಲವು ಎಂದರು.

> ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅನುಸರಿಸಲಾಗುತ್ತಿರುವ ಪರೀಕ್ಷಾ ಪ್ರಕ್ರಿಯೆಗಳು ವಿದ್ಯಾರ್ಥಿಗಳ ಸಂಶೋಧನಾ ಮನಸ್ಥಿತಿಯನ್ನು ಕಸಿದುಕೊಳ್ಳುತ್ತಿದೆ. ಬರವಣಿಗೆ, ಓದಿನ ಸಂಭ್ರಮವನ್ನು ಇಂದಿನ ವಿದ್ಯಾರ್ಥಿಗಳು ಕಂಡುಕೊಳ್ಳಬೇಕು. ಸಂಶೋಧನೆ ಎಂದರೆ ಸತ್ಯದ ಹುಡುಕಾಟ. ಆದರೆ, ಇಂದಿನ ಸಮಾಜಕ್ಕೆ ಸತ್ಯದ ಅವಶ್ಯಕತೆ ದೂರವಾಗುತ್ತಿದ್ದು, ಸಂಶೋಧಕರಿಗೆ ಆತಂಕದ ವಾತಾವರಣವಿದೆ. ಲೋಕದೃಷ್ಟಿ ಇಲ್ಲದ ದೇಶ, ಸಾಹಿತ್ಯಗಳಿಗೆ ಭವಿಷ್ಯವಿಲ್ಲ. ಹೊರ ಬರಬೇಕಾದರೆ ಸತ್ಯದ ಸಂಶೋಧನಾತ್ಮಕ ಕೆಲಸಗಳು ಮುಖ್ಯ. ಬಿಳಿಮಲೆ ಅವರ ಕೃತಿ ನಿರ್ಭೀತಿಯಿಂದ ಸತ್ಯವನ್ನು ಪ್ರತಿಪಾದಿಸುವುದು ಈ ದೃಷ್ಟಿಕೋನದಿಂದ ಅತ್ಯಂತ ಅಭಿನಂದನೀಯವಾದ ಸಂಗತಿ ಮಾಜಿ ಸಿಎಂ ವಿವರಿಸಿದರು.



ಉದಯವಾಹಿನಿ ಚಿತ್ರ

ಪ್ರಸ್ತುತ ಕಾಲಟ್ಟಕ್ಕೆ ಅನುಗುಣವಾಗಿ ರೂಪುಗೊಳ್ಳದಿದ್ದರೆ ಸಂಶೋಧನೆಯು ತನ್ನ ಭವಿಷ್ಯವನ್ನು ಕಳೆದುಕೊಳ್ಳುತ್ತದೆ. ಇಂದಿನ ಸಾಮಾಜಿಕ ಸ್ಥಿತ್ಯಂತರಗಳು ಇತಿಹಾಸವನ್ನು ನಾಶ ಮಾಡುವ ಸಾಮರ್ಥ್ಯ ಹೊಂದಿವೆ. ಸರ್ಕಾರವೇ ಆಂಗ್ಲ ಮಾಧ್ಯಮ ಶಾಲೆಗಳನ್ನು ಆರಂಭಿಸಲು ಉತ್ಸುಕವಾಗಿರುವ ಕಾರಣ ಸಂಶೋಧನೆಗೆ ಭರವಸೆಯೇ ಇಲ್ಲದ ವಾತಾವರಣ ಮೂಡಿದೆ.

ಸಂಶೋಧನೆಯ ಮೂಲಕ ನಮ್ಮ ಸಂಸ್ಕೃತಿಯನ್ನು ಮರುಕಟ್ಟಲು ವಿಫಲರಾದರೆ ಅದು ನಮ್ಮ ಕಾಲಟ್ಟದ ಅತಿದೊಡ್ಡ ದುರಂತ. ಪತ್ರಕರ್ತ ಚ.ಹ.ರುನಾಥ, ಹಿರಿ ಸಂಶೋಧಕ ಡಾ.ಹಂಪ ನಾಗರಾಜಯ್ಯ ಕೃತಿ ಕುರಿತು ಮಾತನಾಡಿದರು. ದೆಹಲಿ ಮಿತ್ರದ ವಸಂತ ಶೆಟ್ಟಿ ಬೆಳ್ಳಾರೆ, ಚಿರಂತನ ಪ್ರಕಾಶನದ ಎಚ್. ಪರಮೇಶ್ವರ್ ಮತ್ತಿತರರಿದ್ದರು.

---

# ರಾಮಾಯಣ



## ದೇವತೆಗಳು ವಾನರರನ್ನು ಸೃಷ್ಟಿಸಿದ್ದು

• ಹಿಂದಿನ ಸಂಚಿಕೆಯಿಂದ 11ನೆಯ ಅಧ್ಯಾಯ

ಇವರೆಲ್ಲರೂ ಗರುಡನಿಗೆ ಸಮಾನವಾದ ವೇಗವುಳ್ಳವರಾಗಿ ಯುದ್ಧದಲ್ಲಿ ಅತ್ಯಂತ ನಿಪುಣರಾಗಿ ಸಿಂಹ ವ್ಯಾಘ್ರ ಸರ್ಪಾದಿಗಳನ್ನೆಬ್ಬಿಸಿ ಬೆದರಿಸಿ ಕೊಲ್ಲುತ್ತ ವಿನೋದದಿಂದಿರಲು ಅತಿಪರಾಕ್ರಮಿಯಾದ ವಾಲಿಯು ತನ್ನ ಭುಜಬಲ ಪರಾಕ್ರಮದಿಂದ ಎಲ್ಲರನ್ನೂ ರಕ್ಷಿಸಿಕೊಂಡಿದ್ದನು. ಈ ಕಪಿಗಳಿಂದ ಪರ್ವತಗಳೂ ಕಾನನಗಳೂ ಸಮುದ್ರತೀರಗಳೂ ಭೂಮಂಡಲವೂ ಇಟ್ಟಣಿಸಿದ್ದುವು. ಈ ರೀತಿಯಲ್ಲಿ ನಾನಾಸ್ಥಾನಗಳಲ್ಲಿ ನಾನಾಸ್ವರೂಪದಿಂದ ಮಹಾಬಲಪರಾಕ್ರಮವುಳ್ಳವರಾಗಿ ಮೇಘಸಮೂಹಗಳಿಗೂ ಪರ್ವತದ ಕೋಡುಗಲ್ಲುಗಳಿಗೂ ಸಮಾನರಾಗಿ ಭಯಂಕರಾಕಾರರಾದ ಕಪಿಸೇನಾನಾಯಕರು ಶ್ರೀರಾಮನ ಸಹಾಯಾರ್ಥವಾಗಿ ಭೂಮಂಡಲದಲ್ಲೆಲ್ಲಿಯೂ ವ್ಯಾಪಿಸಿದ್ದರು.

### ರಾಮ ಲಕ್ಷ್ಮಣ ಭರತ ಶತ್ರುಘ್ನರು ಹುಟ್ಟಿ ಬೆಳೆದುದು

ಅಶ್ವಮೇಧಯಾಗವು ಸಮಾಪ್ತಿಯಾಗಿ ಆ ಯಾಗದಲ್ಲಿ ಹವಿರ್ಭಾಗವನ್ನು ತೆಗೆದುಕೊಂಡು ದೇವತೆಗಳು ತಮ್ಮ ಲೋಕಗಳಿಗೆ ಬಿಜಯಂಗೈಯಲು, ದಶರಥಮಹಾರಾಯನು ಯಾಗದೀಕ್ಷೆಯನ್ನು ಸಮಾಪ್ತಿ ಮಾಡಿ ಚತುರಂಗಬಲಸಮೇತನಾಗಿ ತನ್ನ ಪಟ್ಟಣಕ್ಕೆ ಹೋದನು. ಯಾಗಕ್ಕೆ ಬಂದಿದ್ದ ಸಮಸ್ತ ಅರಸರೂ ದಶರಥರಾಯನಿಂದ ಸತ್ಕಾರವನ್ನು ಪಡೆದು ಅತಿಹರ್ಷದಿಂದ ಋಷ್ಯಶೃಂಗ ಮುನೀಶ್ವರನಿಗೆ ನಮಸ್ಕಾರವನ್ನು ಮಾಡಿ ತಮ್ಮ ತಮ್ಮ ದೇಶಗಳಿಗೆ ಹೋದರು ಅವರ ಬಲಸಮೂಹಗಳು ಯಾಗದಲ್ಲಿ ಮೃಷ್ಟಾನ್ನ ಭೋಜನಗಳನ್ನು ಮಾಡಿ ಹೋಮಧೂಮವನ್ನು ಆಘ್ರಾಣಿಸಿದ್ದರಿಂದ ಪ್ರಕಾಶಮಾನವಾಗಿ ಅತಿಹರ್ಷದಿಂದ ಒಪ್ಪುತ್ತಿದ್ದುವು. ಸಮಸ್ತ ಅರಸರೂ ತಮ್ಮ ತಮ್ಮ ರಾಜ್ಯಗಳಿಗೆ ಹೋದ ಬಳಿಕ ದಶರಥರಾಜನು ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಅಯೋಧ್ಯಾಪಟ್ಟಣಕ್ಕೆ ಹಿಂತಿರುಗಿದನು ಆಗ ಋಷ್ಯಶೃಂಗನು ಶಾಂತಾದೇವಿಯೊಡನೆ ದಶರಥ ರಾಯನಿಂದ ಬೀಳ್ಕೊಂಡು ತನ್ನ ಸ್ಥಾನಕ್ಕೆ ತೆರಳಿದನು. ಈರೀತಿಯಲ್ಲಿ ಸಮಸ್ತರನ್ನೂ ಕಳುಹಿಸಿ ದಶರಥರಾಯನು ನಿಶ್ಚಿಂತನಾಗಿ ತನಗೆ ಯಾವಾಗ ಸಂತಾನಪ್ರಾಪ್ತಿ ಆಗುವುದೆಂದು ನಿರೀಕ್ಷಿಸುತ್ತಿದ್ದನು. ಅನಂತರ ಯಜ್ಞ ಸಮಾಪ್ತಿಯಾದ ಹನ್ನೆರಡನೆಯ ತಿಂಗಳಾದ ಚೈತ್ರಮಾಸದ ಶುಕ್ಲ ಪಕ್ಷದ ನದಮಿದಿವಸದಲ್ಲಿ ಪುನರ್ವಸು ನಕ್ಷತ್ರದಲ್ಲಿ ಐದು ಶುಭಗ್ರಹ ಗಳು ಉಚ್ಚಕ್ಷೇತ್ರದಲ್ಲಿಯೂ ಬೃಹಸ್ಪತಿಯು ಚಂದ್ರನೊಡನೆಯೂ ಕೂಡಿ ಇರುವಾಗ, ಕರ್ಕಾಟಕ ಲಗ್ನದಲ್ಲಿ ಸಮಸ್ತ ಲೋಕಗಳಿಂದಲೂ ನಮಸ್ಕರಿಸಲ್ಪಟ್ಟ ಪಾದಾರವಿಂದಗಳುಳ್ಳ ಪರಮಪುರುಷನು ರಾಮನಾಗಿ ಅವತರಿಸಿದನು ಕೌಸಲ್ಯಾದೇವಿಯು ಸರ್ವಲಕ್ಷಣಸಂಪನ್ನನಾದ ನಾರಾಯಣನ ಅರ್ಧಾಂಶನಾಗಿ ಇಕ್ಷ್ವಾಕುಕುಲವರ್ಧನನಾದ ರಾಮಚಂದ್ರನನ್ನು ಹಡೆದಳು ! ಕೆಂಪಾದ ಮುಖವುಳ್ಳ, ಭೇರಿಯ ಹಾಗೆ ಗಂಭೀರಧ್ವನಿಯುಳ್ಳ ಕೆಂಪಾದ ಕಣ್ಣುಗಳುಳ್ಳ ಕುಮಾರನನ್ನು ಪಡೆದು ಕೌಸಲ್ಯಾ ದೇವಿಯು ಅತ್ಯಂತ ಹರ್ಷವುಳ್ಳವಳಾಗಿ ದೇವೇಂದ್ರನನ್ನು ಪಡೆದ ಅದಿತಿಯ ಹಾಗೆ ಒಪ್ಪುತ್ತಿದ್ದಳು.

ಮುಂದುವರಿಯುವುದು...

---

## ಗುರಾನಿ

■ ಉದಯವಾಹಿನಿ, ವಿಶೇಷ



ದಸರೆ ದಶ ದೋಷವಾ ಹರೆ.....
ಬೆಳಗಲಿ ನಿಮ್ಮ ಮನೆಯಲಿ
ಬೆಳಕಿನ ದಸರಾ
ಪಸರಿಸಲಿ ಎಲ್ಲೆಡೆ
ಹೃದಯದ ಮಂಥನ
ಹಿರಿಯರು
ಮೆಲುಕು ಹಾಕುವ
ದಸರಾ,ಕಿರಿಯರು
ಸಂಭ್ರಮಿಸುವ
ದಸರಾ
ಮನೆಯಂಗಳದಲಿ ಬಂದು ನೆಲೆಸುವ
ಚಾಮುಂಡಿ ನವ ರೂಪದಲಿ ನಿಂತು,
ನಿಮ್ಮ ಕಷ್ಟಗಳ
ಸಂಹರಿಸುವಳು
ಬರಮಾಡಿಕೊಳ್ಳಿ
ಮನೆ,ಮನ ತುಂಬಿಕೊಳ್ಳಿ
ಧರಿಸಿ ಕಂಕಣವ
ಮುಡಿಯಿರಿ ಮಂಗಳದ
ಲಕ್ಷಣವ ,ನಡೆಯಿರಿ
ಪೂಜಿಸಿ ಶಮಿಯ
ಹಂಚಿರಿ ಬಂಗಾರದ
ಬನ್ನಿಯ
ದಸರೆ ,ದಸರೆ
ದಶ ದೋಷವ ಹರೆ
ದಸರೆ ನಿಮ್ಮ ಅಭಿಸ್ಟಗಳನು ಈಡೇರಿಸಲಿ

> ದಸರಾ, ಕಿರಿಯರು ಸಂಭ್ರಮ

---

# ಅಪರಾಜಿತಾ ಪೂಜೆಯ ಮಹತ್ವ

• ಉದಯವಾಹಿನಿ, ವಿಶೇಷ

ದಸರಾದಂದು ಅಪರಾಜಿತಾ ಪೂಜೆ ಮಾಡಲಾಗುತ್ತದೆ. 'ಅಪರಾಜಿತಾ' ಈ ದುರ್ಗಾದೇವಿಯ ಮಾರಕ ರೂಪವು ಪೃಥ್ವಿತತ್ತ್ವದ ಆಧಾರದ ಮೇಲೆ ಭೂಗರ್ಭದಿಂದ ಪ್ರಕಟವಾಗಿ ಪೃಥ್ವಿಯ ಮೇಲಿನ ಜೀವಗಳಿಗೆ ಕಾರ್ಯ ಮಾಡುತ್ತದೆ. ಅಷ್ಟದಳದ ಸಿಂಹಾಸನದ ಮೇಲೆ ಆರೂಢಳಾದ ಈ ತ್ರಿಶೂಲಧಾರಿ ರೂಪವು ಶಿವನ ಸಂಯೋಗದಿಂದ ದಿಕ್ಪಾಲ ಹಾಗೂ ಗ್ರಹದೇವತೆಯ ಸಹಾಯದಿಂದ ಅಸುರೀ ಶಕ್ತಿಗಳನ್ನು ನಾಶಮಾಡುತ್ತದೆ.

ಶಕ್ತಿತತ್ತ್ವದ ಭಕ್ತರ ಪ್ರಾರ್ಥನೆಯಂತೆ ಅಷ್ಟದಳದ ಮೇಲೆ ಆರೂಢಳಾದ ಅಪರಾಜಿತಾ, ಪೃಥ್ವಿಯ ಭೂಗರ್ಭ ಬಿಂದುವಿನಿಂದ ಉತ್ಪನ್ನಳಾದಾಗ ಅವಳ ಸ್ವಾಗತಕ್ಕಾಗಿ ಅಷ್ಟಪಾಲ ದೇವತೆಗಳ ಆಗಮನವಾಗುತ್ತದೆ. ಅಷ್ಟದಳದ ಅಗ್ರಬಿಂದುಗಳು ಅಷ್ಟಪಾಲ ದೇವತೆಗಳನ್ನು ಪ್ರತಿನಿಧಿಸುತ್ತವೆ. ಅಪರಾಜಿತಾ ದೇವಿಯ ಉತ್ಪತ್ತಿಯಿಂದ ಪ್ರಕ್ಷೇಪಿತವಾಗುವ ಮಾರಕ ಲಹರಿಗಳು, ಅಷ್ಟಪಾಲರ ಮಾಧ್ಯಮದಿಂದ ಅಷ್ಟದಿಕ್ಕುಗಳಿಗೆ ನಸುಗೆಂಪು ಬಣ್ಣದ ಪ್ರಕಾಶಲಹರಿಗಳ ಮಾಧ್ಯಮದಿಂದ ಪ್ರಕ್ಷೇಪಿತವಾಗಿ ಆಯಾ ಕೋನಗಳಲ್ಲಿ ಸಂಪುಟಿತವಾಗಿರುವ ರಜ-ತಮಾತ್ಮಕ ಶಕ್ತಿಯನ್ನು ನಾಶ ಮಾಡುತ್ತವೆ ಮತ್ತು ಪೃಥ್ವಿಯ ಮೇಲಿನ ಜೀವಗಳಿಗೆ ನಿರ್ವಿಘ್ನವಾಗಿ ಜೀವನ ನಡೆಸಲು ಅನುಕೂಲವಾಗುವಂತೆ ವಾಯುಮಂಡಲವನ್ನು ಶುದ್ಧೀಕರಿಸುತ್ತವೆ. ಬನ್ನಿ ಎಲೆಗಳಲ್ಲಿ ತೇಜವನ್ನು ವೃದ್ಧಿಸುವ ಗುಣವಿರುವುದರಿಂದ ಬನ್ನಿಗಿಡದ ಹತ್ತಿರ ಶ್ರೀದುರ್ಗಾದೇವಿಯನ್ನು ಅಪರಾಜಿತಾ ರೂಪದಲ್ಲಿ ಪೂಜಿಸುತ್ತಾರೆ. ಶಮಿಯ ಪೂಜೆಯನ್ನು ಮಾಡಲಾದ ಜಾಗದಲ್ಲಿಯೇ ನೆಲದ ಮೇಲೆ ಅಷ್ಟದಳಗಳನ್ನು ಬರೆದು ಅದರ ಮೇಲೆ ಅಪರಾಜಿತಾ ದೇವಿಯ ಮೂರ್ತಿಯನ್ನಿಟ್ಟು ಪೂಜೆ ಮಾಡಿ ಮುಂದಿನ ಮಂತ್ರ ದಿಂದ ಪ್ರಾರ್ಥನೆ ಮಾಡುತ್ತಾರೆ.





ಉದಯವಾಹಿನಿ ಚಿತ್ರ

ಹಾರೇಣ ತು ವಿಚಿತ್ರೇಣ ಭಾಸ್ವತ್ಕನ ಕಮೇಖಲಾ ।
ಅಪರಾಜಿತಾ ಭದ್ರರತಾ ಕರೋತು ವಿಜಯಂ ಮಮ ॥

**ಅರ್ಥ :** ಕೊರಳಿನಲ್ಲಿ ಚಿತ್ರವಿಚಿತ್ರ ಮಾಲೆ ಧರಿಸಿರುವ, ಸೊಂಟದಲ್ಲಿ ಹೊಳೆಯುವ ಸುವರ್ಣ ನಡುಪಟ್ಟಿ ಧರಿಸಿರುವ, ಸದಾಕಾಲ ಭಕ್ತರ ಕಲ್ಯಾಣ ಕಾರ್ಯದಲ್ಲಿ ನಿರತಳಾಗಿರುವ ಅಪರಾಜಿತಾ ದೇವಿಯು ನನ್ನನ್ನು ವಿಜಯಿಯನ್ನಾಗಿ ಮಾಡಲಿ. ಕೆಲವು ಕಡೆ ಸೀಮೋಲ್ಲಂಘನಕ್ಕೆ ಹೊರಡುವ ಮೊದಲೇ ಅಪರಾಜಿತಾ ಪೂಜೆ ಮಾಡುತ್ತಾರೆ. ಕೆಲವು ಕಡೆ ಸೀಮೋಲ್ಲಂಘನಕ್ಕೆ ಹೊರಡುವ ಮೊದಲೇ ಅಪರಾಜಿತಾ ದೇವಿಯ ಪೂಜೆ ಮಾಡುತ್ತಾರೆ. ಭೂಮಿಯ ಮೇಲೆ ಅಷ್ಟದಳವನ್ನು ಬಿಡಿಸಿ ಅದರ ಮೇಲೆ ಅಪರಾಜಿತೆಯ ಮೂರ್ತಿಯನ್ನು ಇಡುವುದು, ಇದು ಅಪರಾಜಿತಾ ಶಕ್ತಿತತ್ತ್ವದ ಎಂಟೂ ದಿಕ್ಕುಗಳ ಮೇಲೆ ವಿಜಯ ಪಡೆಯುವ ಕ್ಷಮತೆಯನ್ನು ದರ್ಶಿಸುತ್ತದೆ : 'ಅಪರಾಜಿತಾ ಈ ದುರ್ಗಾದೇವಿಯ ಮಾರಕ ರೂಪವು ಪೃಥ್ವಿತತ್ತ್ವದ ಆಧಾರದಲ್ಲಿ ಭೂಗರ್ಭದಿಂದ ಪ್ರಕಟವಾಗಿ ಪೃಥ್ವಿಯ ಮೇಲಿನ ಜೀವಗಳಿಗಾಗಿ ಕಾರ್ಯವನ್ನು ಮಾಡುತ್ತದೆ.

> ಶಕ್ತಿತತ್ತ್ವದ ಭಕ್ತರ ಪ್ರಾರ್ಥನೆ

ಅಷ್ಟದಳದ ಸಿಂಹಾಸನದ ಮೇಲೆ ಆರೂಢಳಾದ ಈ ತ್ರಿಶೂಲಧಾರಿ ರೂಪವು ಶಿವನ ಸಂಯೋಗದಿಂದ ದಿಕ್ಪಾಲ ಹಾಗೂ ಗ್ರಹ ದೇವತೆ ಇವರ ಸಹಾಯದಿಂದ ಅಸುರೀ ಶಕ್ತಿಗಳನ್ನು ನಾಶ ಮಾಡುತ್ತದೆ. ಶಕ್ತಿತತ್ತ್ವದ ಭಕ್ತರ ಪ್ರಾರ್ಥನೆಗನುಸಾರ ಯಾವಾಗ ಅಷ್ಟದಳದ ಮೇಲೆ ಆರೂಢಳಾಗಿರುವ ಅಪರಾಜಿತಾ ದೇವಿಯು ಪೃಥ್ವಿಯ ಭೂಗರ್ಭ ಬಿಂದುವಿನಿಂದ ಉತ್ಪನ್ನವಾಗುತ್ತಾಳೆಯೋ, ಆಗ ಅವಳ ಸ್ವಾಗತಕ್ಕಾಗಿ ಅಷ್ಟಪಾಲ ದೇವತೆಗಳ ಆಗಮನವಾಗುತ್ತದೆ. ಅಷ್ಟದಳಗಳ ಅಗ್ರ ಬಿಂದುಗಳು ಅಷ್ಟಪಾಲ ದೇವತೆಗಳನ್ನು ಪ್ರತಿನಿಧಿಸುತ್ತವೆ. ಅಪರಾಜಿತೆಯ ಉತ್ಪತ್ತಿಯಿಂದ ಪ್ರಕ್ಷೇಪಿತವಾಗುವ ಮಾರಕ ಲಹರಿಗಳು, ಅಷ್ಟಪಾಲರ ಮಾಧ್ಯಮದಿಂದ ಅಷ್ಟದಿಕ್ಕುಗಳಿಗೆ ನಸುಗೆಂಪು ಬಣ್ಣದ ಪ್ರಕಾಶ ಲಹರಿಗಳಿಂದ ಪ್ರಕ್ಷೇಪಿತವಾಗಿ ಆಯಾ ಕೋನಗಳಲ್ಲಿ ಸಂಪುಟಿತವಾಗಿರುವ ರಜ-ತಮಾತ್ಮಕ ಶಕ್ತಿಯನ್ನು ನಾಶ ಮಾಡುತ್ತವೆ ಮತ್ತು ಪೃಥ್ವಿಯ ಮೇಲಿನ ಜೀವಗಳಿಗೆ ನಿರ್ವಿಘ್ನವಾಗಿ ಜೀವನ ನಡೆಸಲು ಅನುಕೂಲವಾಗುವಂತೆ ವಾಯುಮಂಡಲದ ಶುದ್ಧಿಯನ್ನು ಮಾಡುತ್ತವೆ.

# ಇಂದು ಮೌಲ್ಯಾಧಾರಿತ ರಾಜಕೀಯ ಇಲ್ಲ; ಅಪ್ಪಾಜಿ ನಾಡಗೌಡ

## ದೀಪ ಬೆಳಗಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕರು, ಇಂದಿನ ರಾಜಕೀಯಕ್ಕೂ, ಅಂದಿನ ರಾಜಕೀಯಕ್ಕೂ ವ್ಯತ್ಯಾಸ

• ಉದಯವಾಹಿನಿ, ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಕೆಎಸ್ ಡಿ ನಿಗಮದ ಅಧ್ಯಕ್ಷ ಸಿ.ಎಸ್ ನಾಡಗೌಡ ಅಪ್ಪಾಜಿ ಅವರು ಶುಕ್ರವಾರ ತಮ್ಮ 67 ನೇ ಹುಟ್ಟು ಹಬ್ಬವನ್ನು ಪಟ್ಟಣದ ಹುಡ್ಕೊ ಬಡಾವಣೆಯ ಉದ್ಯಾನವನದ ಗವಿ ಸಿದ್ದೇಶ್ವರ ವೇದಿಕೆಯಲ್ಲಿ ದೀಪ ಬೆಳಗಿಸುವುದರ ಮೂಲಕ ಅವರ ಧರ್ಮಪತ್ನಿ ಸುವರ್ಣ ಮೊಮ್ಮಗಳಾದ ಆರಾಧ್ಯಳೊಂದಿಗೆ ತುಂಬಾ ಸರಳವಾಗಿ ಆಚರಿಸಿಕೊಂಡರು

**ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ನಾಯಕರೇ ದೊಡ್ಡವರು**

ಈ ವೇಳೆ ಮಾತನಾಡಿದ ಶಾಸಕ ಸಿ.ಎಸ್ ನಾ ಡಗೌಡ ಅಪ್ಪಾಜಿ ಇಂದು ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ನಾಯಕರೇ ದೊಡ್ಡವರಾಗಿದ್ದಾರೆ ಇಂದಿನ ರಾಜಕೀಯಕ್ಕೂ ಮತ್ತು ಅಂದಿನ ರಾಜಕೀಯಕ್ಕೂ ತುಂಬಾ ವ್ಯತ್ಯಾಸವಿದೆ ಇಂದು ಮೌಲ್ಯಾಧಾರಿತ ರಾಜಕೀಯ ರಾಜಕಾರಣವಿಲ್ಲವೆಂದು ತಮ್ಮನ್ನು ರಾಮಕೃಷ್ಣ ಹೆಗಡೆಯವರು ತಮ್ಮ ಪಕ್ಷಕ್ಕೆ ಬನ್ನಿ ಎಂದು ಹೇಳಿದ ಪ್ರಸಂಗ ವಿವರಿಸಿ ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಮಾಡಿಲಿಲ್ಲ ಆಮಿಷಕ್ಕೆ ಒಳಗಾಗಲಿಲ್ಲವೆಂದು ಅಂದು ಪಕ್ಷಾತೀತವಾಗಿ ಸಹಾಯ ಮಾಡುವ ಮನೋಭಾವ ಹೊಂದಿದ್ದ ರಾಜಕೀಯ ನಾಯಕರು ಮಂತ್ರಿಗಳು ಇದ್ದರೆಂದು ತಮ್ಮ ಅನುಭವ ಹಂಚಿಕೊಂಡರು.

ಚನ್ನ ಬಸವರಾಜ ಹೆಸರಿನ ತಮಗೆ ತಮ್ಮ ಅಜ್ಜ ಅಪ್ಪಾಜೀ ಎಂದು ಕರೆಯುತ್ತಿದ್ದ ಕಾರಣ ಅದೇ ಹೆಸರು ಪ್ರಚಲಿತವಾದ ಬಗೆ ರಾಜಕೀಯಕ್ಕಿಂತ ಕೃಷಿಯಲ್ಲಿ ಆಸಕ್ತರಾಗಿದ್ದ ತಮ್ಮನ್ನು ರಾಜಕೀಯ ಕ್ಷೇತ್ರಕ್ಕೆ ಕರೆತಂದವರು ಮತ್ತು ದೇಶಮುಖ ರ ವಿರುದ್ಧ ಚುನಾವಣೆ ನಿಲ್ಲಬೇಕಾದ ಪ್ರಸಂಗ ಸೇರಿದಂತೆ ತಮ್ಮ 40 ವರ್ಷದ ರಾಜಕೀಯದ ಅನೇಕ ವಿದ್ಯಮಾನಗಳ ಸ್ವಾರಸ್ಯಕರ ಪ್ರಸಂಗಗಳನ್ನು ವಿವರಿಸಿದರು.

> ನಿಮ್ಮ ಪ್ರೀತಿ ಅಭಿಮಾನಕ್ಕೆ ನಾನು ಏನು ನೀಡಲಿ ನಿಮ್ಮ ಋಣ ವನ್ನು ಹೇಗೆ ತೀರಿಸಲಿ ನಿಮ್ಮ ಋಣ ತೀರಿಸಲಾಗದು ನಿಮಗೆ ನನ್ನ ಕೋಟಿ ನಮನ ನನ್ನ ರಾಜಕೀಯ ಪ್ರಗತಿಗೆ ನಮ್ಮ ಮುದ್ದೇಬಿಹಾಳ ತಾಲ್ಲೂಕಿನ ಮತದಾರರು ಕಾರಣ
> –ಅಪ್ಪಾಜಿ ನಾಡಗೌಡ, ಶಾಸಕರು

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಇಂಗಳೇಶ್ವರ ಹೋರಿಮಟ್ಟ ಗುಡ್ಡದ ಶ್ರೀ ಚನ್ನಬಸವ ಮಹಾಸ್ವಾಮಿಗಳು, ಕುಂಟೋಜಿ ಭಾವೈಕ್ಯ ಮಠದ ಶ್ರೀ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

### ಉಚಿತ ನೇತ್ರ ತಪಾಸಣೆ

**ಶಾಸಕ ಕೆಎಸ್ ಡಿ ನಿಗಮದ ಅಧ್ಯಕ್ಷ ಸಿ.ಎಸ್ ನಾಡಗೌಡರ 67ನೇ ಹುಟ್ಟುಹಬ್ಬದ ಪ್ರಯುಕ್ತ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಫಲಹಾರ ನಿರ್ಗತಿಕರಿಗೆ ಹೊದಿಕೆ ವಿತರಣೆ ಮತ್ತು ರಕ್ತದಾನ ಉಚಿತ ನೇತ್ರ ತಪಾಸಣೆ ಹಮ್ಮಿಕೊಳ್ಳಲಾಗಿತ್ತು ಬೆಳಗ್ಗೆ ಹುಡ್ಕೊ ಗಾರ್ಡನ್‌ನಲ್ಲಿ ಶಾಸಕರು ಹುಟ್ಟುಹಬ್ಬದ ನಿಮಿತ್ತ ಹಸಿರು ತೋರಣ ಬಳಗದ ಗೆಳಯರಿಂದ ಸಸಿಗಳನ್ನು ನಡೆಸಲಾಯಿತು ಶಾಸಕರು ಸಸಿಗಳಿಗೆ ನಿರೇರದರು.**


ಕಾಂಗ್ರೆಸ್ ಪಕ್ಷದ ಮು ಖಂಡರಾದ ಎಂ.ಬಿ ನಾವದಗಿ, ಶಿವಶಂಕರಗೌಡ ಹಿರೇಗೌಡರ, ವೈ ಹೆಚ್ ವಿಜಯಕರ, ಅಬ್ದುಲ್ ಗಫೂರ ಮಕಾನದಾರ, ಎಸ್ ಎಸ್ ಹುಲ್ಲೂರ, ಸಿ.ಬಿ ಅಸ್ಕಿ, ಸತೀಶ್ ಓಸ್ವಾಲ್ ಮುಂತಾದವರು ಶಾಸ ಕರ ಸರಳತೆ ಪ್ರಾಮಾಣಿಕ ರಾಜಕೀಯ ಜೀವನದ ಒಡನಾಟದ ಕುರಿತು ಮಾತನಾಡಿದರು. ಶಾಸಕರ ಹುಟ್ಟುಹಬ್ಬಕ್ಕೆ ಕೇಕ್ ತಂದಿದ್ದರು ಅದನ್ನು ಕತ್ತರಿಸುವುದಿಲ್ಲವೆಂದು ದೀಪ ಬೆಳಗಿಸುವ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದು ಮಾದರಿಯಾಗಿತ್ತು

ಕಾರ್ಯಕ್ರಮದಲ್ಲಿ ಮುದ್ದೇಬಿಹಾಳ ತಾಳಿ ಕೋಟೆ, ನಾಲತವಾಡ ಪಟ್ಟಣ ಸೇರಿದಂತೆ ಮತಕ್ಷೇತ್ರದ ವಿವಿಧ ಗ್ರಾಮಗಳಿಂದ ಶಾಸಕರ ಅಭಿಮಾನಿಗಳು ಮುಖಂಡರು ಪಕ್ಷಾತೀತವಾಗಿ ಹುಟ್ಟುಹಬ್ಬದಲ್ಲಿ ಪಾಲ್ಗೊಂಡು ಶುಭ ಹಾರೈಸಿದರು. ಪುರಸಭೆ ಅಧ್ಯಕ್ಷ ಹಾಗೂ ಸದಸ್ಯರಿಂದ ನಾಗರಿಕ ಸನ್ಮಾನ ಸೇರಿದಂತೆ ಸಾವಿರಾರು ಜನರು ಶಾಸಕರಿಗೆ ಸನ್ಮಾನಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು ವಿಜಯಪುರ ವಿರೇಶ ವಾಲಿ ತಂಡದಿಂದ ಗಾನಸುಧೆ ಜನರ ಮನಸಳೆಯಿತು.

---

## ಆಕಾಶದತ್ತ ಚಿಗುರುತಲೇ ಬೇರು ಮುತ್ತಾಯಿತಲೇ ಪರಾಕ್ ಗೊರವಯ್ಯ ಕಾರ್ಣಿಕದ ನುಡಿ

• ಉದಯವಾಹಿನಿ, ಹಾವೇರಿ


ಉದಯವಾಹಿನಿ ಚಿತ್ರ

ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀ ಕ್ಷೇತ್ರ ದೇವರಗುಡ್ಡದ ಮಾಲತೇಶಸ್ವಾಮಿ ದೇವಸ್ಥಾನದಲ್ಲಿ ದಸರಾ ಹಬ್ಬದ ಪ್ರಯುಕ್ತ ನಡೆಯುವ ಕಾರ್ಣಿಕೋತ್ಸವದಲ್ಲಿ 'ಆಕಾಶದತ್ತ ಚಿಗರಿತಲೇ ಬೇರು ಮುತ್ತಾಯಿತಲೇ ಪರಾಕ್ ಎಂದು ಕಾರ್ಣಿಕ ನುಡಿದಿದ್ದಾರೆ. ಹಾವೇರಿ ಜಿಲ್ಲೆಯ ರಾಣೆಬೇನ್ನೂರು ತಾಲ್ಲೂಕಿನ ದೇವರಗುಡ್ಡದಲ್ಲಿ ಇರುವ ಐತಿಹಾಸಿಕ ಮಾಲತೇಶಸ್ವಾಮಿ ದೇವಸ್ಥಾನಲ್ಲಿ ಗೊರವಯ್ಯ ಈ ಕಾರ್ಣಿಕದ ನುಡಿ ನುಡಿದಿದ್ದಾನೆ. ಪ್ರತಿ ವರ್ಷ ನವರಾತ್ರಿ ವೇಳೆ ಭವಿಷ್ಯವಾಣಿ ನುಡಿಯುವ ಗೊರವಯ್ಯ 9 ದಿನ ಉಪವಾಸ ವಿದ್ದು ಸಾವಿರಾರು ಭಕ್ತರ ಸಮ್ಮುಖದಲ್ಲಿ 18 ಅಡಿ ಬಿಲ್ಲನ್ನೇರಿ ಕಾರ್ಣಿಕ ನುಡಿದಿದ್ದಾರೆ.

ಕಾರ್ಣಿಕ ನುಡಿ ಕುರಿತು ದೇವರಗುಡ್ಡದಲ್ಲಿ ಮಾಲತೇಶ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ್ ಭಟ್ ಗುರೂಜಿ ಹೇಳಿಕೆ ನೀಡಿದ್ದು.. ಆಕಾ ಶದತ್ತ ಚಿಗುರಿತಲೇ, ಬೇರೆಲ್ಲಾ ಮುತ್ತಾಯಿತಲೇ ಪರಾಕ್ ಆಕಾಶದತ್ತ ಚಿಗುರಿತಲೇ ಅಂದರೆ ಒಳ್ಳೆ ಮಳೆ ಆಗುತ್ತೆ, ಬೇರೆಲ್ಲಾ ಮುತ್ತಾಯಿತಲೇ ಅಂದರೆ ರೈತರಿಗೆ ಒಳ್ಳೆ ಬೆಳೆ ಬರುತ್ತೆ, ಅದನ್ನ ತೆಗೆದುಕೊಳ್ಳೋ ಫಲಾನುಭವಿಗಳಿಗೂ ಒಳ್ಳೆದಾಗುತ್ತೆ ಎಂದರ್ಥ. ರಾಜಕೀಯವಾಗಿ ಹೇಳುವುದಾದರೆ ಆಕಾಶದತ್ತ ಚಿಗುರೀತಲೇ, ಅಂದರೆ ಈಗಿರುವ ನಾಯಕತ್ವ ಆಕಾಶದತ್ತ ಚಿಗುರಿಬಿಟ್ಟಿದೆ ಬೇರೆಲ್ಲಾ ಮುತ್ತಾಯಿತಲೇ ಅಂದರೆ ಅವರಿಗೆಲ್ಲಾ ಬೆನ್ನೆಲುಬಾಗಿ ನಿಂತಿರೋದು ನೀವೆಲ್ಲಾ ನೋಡಿರಬಹುದು ಕಾನೂನು ವ್ಯವಸ್ಥೆಯಲ್ಲಿ ಏನು ಬದಲಾವಣೆ ಆದರೂ ಕೂಡಾ ಈಗಿರುವ ನಾಯಕತ್ವ ಹೇಳಿದಂಗೆ ಅವರು ಒಪ್ಪಿಕೊಳ್ತಾರೆ ಅಂತ ಬೇರುಗಳೆಲ್ಲಾ ಮುತ್ತಾಯಿತ್ಲೇ ಅಂದರೆ ಆಕಾಶತ್ತ ಚಿಗುರಿರೋ ಗಿಡ ಹೇಳಿದಂಗೆ ಬೇರುಗಳು ಒಪ್ಪಿಕೊಳ್ತಾವೆ ಅಂತ ಅರ್ಥ ಎಂದು ಕಾರ್ಣಿಕವನ್ನು ವ್ಯಾಖ್ಯಾನಿಸಿದರು.

---

## ರೈತರು ಆಧುನಿಕ ತಂತ್ರಜ್ಞಾನ ಬಳಸಿ ಪ್ರಗತಿ ಸಾಧಿಸಿ: ಸ್ವಾಮೀಜಿ

• ಉದಯವಾಹಿನಿ, ಶಿವಮೊಗ್ಗ



ಉದಯವಾಹಿನಿ ಚಿತ್ರ

ರೈತರು ಆಧುನಿಕ ತಂತ್ರಜ್ಞಾನದ ಸದುಪಯೋಗ ಪಡೆದುಕೊಂಡು ಕೃಷಿಯಲ್ಲಿ ಹೆಚ್ಚು ಪ್ರಗತಿ ಸಾಧಿಸಬೇಕು ಎಂದು ಬಸವ ಕೇಂದ್ರದ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮೀಜಿ ಹೇಳಿದರು.

ನಗರದ ನವುಲೆಯಲ್ಲಿರುವ ಕೃಷಿ ವಿಶ್ವವಿದ್ಯಾಲಯ ದಲ್ಲಿ ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವತಿಯಿಂದ ಆಯೋಜಿಸಿದ್ದ ರೋಟರಿ ಜಿಲ್ಲಾ ಕಾರ್ಯಕ್ರಮ, ಹಸಿರು, ನೀರು ಜಾ ಗೃ ತಿ ಉಪನ್ಯಾಸ, ಪ್ರಗತಿಪರ ರೈತರಿಗೆ ಸನ್ಮಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ, ರೋಟರಿ ಸಂಸ್ಥೆ ಯು ಸೇವಾ ಕಾರ್ಯದ ಜತೆಯಲ್ಲಿ ಪರಿಸರ ಜಾಗೃತಿ, ರೈತರಿಗೆ ಉಪಯುಕ್ತ ಕಾರ್ಯಕ್ರಮಗಳನ್ನು ಆಯೋ ಜಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

**ಹಸಿರನ್ನು ಕಾಪಾಡಿಕೊಳ್ಳಲು ಎಲ್ಲರೂ ಶ್ರಮಿಸಿ**

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ. ಆರ್.ಸಿ.ಜಗದೀಶ್, ರೈತರು ಸಮಗ್ರ ಕೃಷಿ ಪದ್ಧತಿ ತೊಡಗಿಸಿಕೊಂಡರೆ ಆರ್ಥಿಕವಾಗಿ ಸದೃಢರಾಗಲು ಸಾಧ್ಯವಿದೆ.

ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಿದೆ ಎಂದರು. ರೋಟರಿ ಜಿಲ್ಲಾ ಗವರ್ನರ್ ಸಿ.ಎ.ದೇವ್ ಆನಂದ್ ಮಾತನಾಡಿ, ಹಸಿರೇ ಉಸಿರು, ನಮಗೆ ಉಸಿರಾಡಲು ಗಿಡಮರಗಳು ಆಮ್ಲಜನಕ ಒದಗಿಸುತ್ತದೆ. ಹಸಿರನ್ನು ಕಾಪಾಡಿಕೊಳ್ಳುವಲ್ಲಿ ಎಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಹೆಚ್.ಆರ್.ಬಸವರಾಜಪ್ಪ ಮಾತನಾಡಿ, ಹಿಂದಿನ ಕಾಲದಲ್ಲಿ ರಾಸಾಯನಿಕ ಗೊಬ್ಬರ ಬಳಸದೆ ಬೆಳೆ ಬೆಳೆಯುತ್ತಿದ್ದರು. ರೈತರು ಸಾವಯವ ಕೃಷಿಯನ್ನು ಅವಲಂಬಿಸಬೇಕು ಎಂದು ಹೇಳಿದರು.

**ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ಅಧ್ಯಕ್ಷ ಜಿ.ಕಿರಣ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಲಯ11ರ ಸಹಾಯಕ ಗವರ್ನರ್ ಪ್ರೊ. ಹೆಚ್.ಎಂ.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಿಗೆ ಸನ್ಮಾನಿಸಲಾಯಿತು.**

---

## ವೈಭವದ ಶೋಭಾಯಾತ್ರೆಗೆ ಅಂತಿಮ ಸಿದ್ಧತೆ

• ಉದಯವಾಹಿನಿ, ಕಾಪು


ಉದಯವಾಹಿನಿ ಚಿತ್ರ

ಕರ್ನಾಟಕದ ಕೊಲ್ಲಾಪುರ ಖ್ಯಾತಿಯ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಜರಗುತ್ತಿರುವ ಉಡುಪಿ ಉಚ್ಚಿಲ ದಸರಾ ಉತ್ಸವ 2024ರ ಪ್ರಯುಕ್ತ ಪ್ರತಿಷ್ಠಾಪಿಸಲಾಗಿರುವ ನವದುರ್ಗೆಯರು, ಶಾರದಾ ಮಾತೆಯ ವಿಗ್ರಹಗಳ ಜಲ ಸ್ತಂಭನಾ ಶೋಭಾಯಾತ್ರೆಯು ಸಂಜೆ 3 ಗಂ ಟೆಗೆ ಆರಂಭಗೊಳ್ಳಲಿದ್ದು, ಶೋಭಾಯಾತ್ರೆ ಸಹಿತ ಜಲಸ್ತಂಭನ ಕಾರ್ಯಕ್ರಮಕ್ಕೆ ಅಂತಿಮ ಹಂತದ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಉಚ್ಚಿಲ ದಸರಾ ಸಂಭ್ರಮವನ್ನು ಕಣ್ತುಂಬಿಸಿಕೊಳ್ಳಲು ಉಚ್ಚಿಲದತ್ತ ಜನಸಾಗರ ಹರಿದು ಬರುತ್ತಿದ್ದು ಈಗಾಗಲೇ ಲಕ್ಷೋಪಲಕ್ಷ ಜನ ಕ್ಷೇತ್ರ ಮಾತೆ ಮಹಾಲಕ್ಷ್ಮೀ ದೇವಿ, ಶಾರದೆ ಮತ್ತು ನವದುರ್ಗೆಯರ ದರ್ಶನ ಪಡೆದಿದ್ದಾರೆ. ಶನಿವಾರ ಒಂದೇ ದಿನ ಮೂರು ಲಕ್ಷಕ್ಕೂ ಅಧಿಕ ಮಂದಿ ಕ್ಷೇತ್ರಕ್ಕೆ ಆಗಮಿಸುವ ನಿರೀಕ್ಷೆಯಿದ್ದು ಶೋಭಾಯಾತ್ರೆಯಲ್ಲಿ 1 ಲಕ್ಷಕ್ಕೂ ಮಿಕ್ಕಿದ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜಲಸ್ಥಂಭನದ ಸಂದರ್ಭದಲ್ಲೂ 30 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ವಿಸರ್ಜನಾ ಪೂಜೆ ನಡೆದು, 3 ಗಂಟೆಗೆ ಶೋಭಾ ಯಾತ್ರೆ ಪ್ರಾರಂಭಗೊಳ್ಳಲಿದೆ. ಮಹಾಲಕ್ಷ್ಮೀ ದ್ವಾರದ ಬಳಿ ಶಾರದಾ ಮಾತೆ ಮತ್ತು ನವದುರ್ಗೆಯರಿಗೆ ಪುಷ್ಪಾರ್ಚನೆಗೈದು ನಾಡೋಜ ಡಾ. ಜಿ. ಶಂಕರ್ ಸಹಿತ ಗಣ್ಯರು ಶೋಭಾಯಾತ್ರೆಗೆ ಚಾಲನೆ ನೀಡಲಿದ್ದಾರೆ. ಬಳಿಕ ರಾಷ್ಟ್ರೀಯ ಹೆದ್ದಾರಿ 66ರ ಉಚ್ಚಿಲದಿಂದ ಎರ್ಮಾಳ್–ಉಚ್ಚಿಲ– ಮೂಳೂರು–ಕೊಪ್ಪಲಂಗಡಿ ಮಾರ್ಗವಾಗಿ ಕಾಪು ಬೀಚ್‌ಗೆ ತಲುಪಲಿದೆ. ಈ ಸಂದರ್ಭ ಕಾಪು ಬೀಚ್‌ನಲ್ಲಿ ಮ್ಯೂಸಿಕಲ್ ನೈಟ್ ಆಯೋಜಿಸಲಾಗಿದೆ.

ಶಾರದೆ ಮತ್ತು ನವದುರ್ಗೆಯರ ವಿಗ್ರಹಗಳನ್ನೊಳಗೊಂಡ 10 ಟ್ಯಾಬ್ಲೋಗಳ ಸಹಿತವಾಗಿ, ಸಾಮಾಜಿಕ ಜಾಗೃತಿಯ ಸಂದೇಶ ಸಾರುವ ಟ್ಯಾಬ್ಲೋಗಳು, ಭಜನಾ ತಂಡಗಳು, ಥೈಯ್ಯಂ ಸಹಿತ ವಿವಿಧ ವೇಷ ಭೂಷಣಗಳು, ಹುಲಿ ವೇ ಷ, ಚೆಂಡೆ ಬಳಗ, ನಾದ ಸ್ವರ, ವಾದ್ಯ ಸಹಿತ ನಾಸಿಕ್ ಬ್ಯಾಂ ಡ್ ತಂಡಗಳು, 50ಕ್ಕೂ ಅಧಿಕ ಟ್ಯಾ ಬ್ಲೋಗಳನ್ನೊಳಗೊಂಡ ಶೋಭಾಯಾತ್ರೆಯು ಸ್ಮರಣೀಯ ಕಾರ್ಯಕ್ರಮವಾಗಿ ಮೂಡಿಬರಲಿದೆ.

ದ. ಕ. ಮೊಗವೀರ ಮಹಾಜನ ಸಂಘದ ನೇತೃತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಕ್ತಾದಿಗಳ ಸಹಯೋಗದೊಂದಿಗೆ ನಡೆಯುತ್ತಿರುವ ಉಡುಪಿ ಉಚ್ಚಿಲ ದಸರಾ ಉತ್ಸವದಲ್ಲಿನ ಅಚ್ಚುಕಟ್ಟುತನಕ್ಕೆ ಎಲ್ಲರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ದಸರಾ ರೂವಾ ರಿ ಡಾ. ಜಿ. ಶಂಕರ್, ಅಧ್ಯಕ್ಷ ಜಯ ಸಿ. ಕೋಟ್ಯಾನ್ ಬೆಳ್ಳಂಪಳ್ಳಿ, ಕ್ಷೇತ್ರಾಡಳಿತ ಸಮಿತಿ ಅಧ್ಯಕ್ಷ ಗಿರಿಧರ ಸುವರ್ಣ ಮತ್ತು ದಸರಾ ಸಮಿತಿ ಅಧ್ಯಕ್ಷ ವಿನಯ್ ಕರ್ಕೇರ ಹಾಗೂ ಸರ್ವ ಪದಾಧಿಕಾರಿಗಳ ಶ್ರಮದಿಂದಾಗಿ ವರ್ಷದಿಂದ ವರ್ಷಕ್ಕೆ ಇಲ್ಲಿನ ವಿಜ್ರಂಭಣೆ ಹೆಚ್ಚುತ್ತಿದೆ. ಮಧ್ಯಾಹ್ನ ಮಹಾಚಂಡಿಕಾಯಾಗ ಪೂರ್ಣಾಹುತಿಯೊಂದಿಗೆ ಮಹಾ ಅನ್ನಸಂತರ್ಪಣೆ ಪ್ರಾರಂಭಗೊಂಡಿದ್ದು ಸಾವಿರಾರು ಮಂದಿ ಅನ್ನಪ್ರಸಾದ ಸ್ವೀಕರಿಸುತ್ತಿದ್ದಾರೆ.

---

## ಗೊಂಡಬಾಳದಲ್ಲಿ 80ಕ್ಕೂ ಹೆಚ್ಚು ಮನೆಗಳು ಜಲಾವೃತ

• ಉದಯವಾಹಿನಿ, ಕೊಪ್ಪಳ


ಉದಯವಾಹಿನಿ ಚಿತ್ರ

ಹಿರೇಹಳ್ಳ ಜಲಾಶಯದಿಂದ ಹಳ್ಳದ ಪಾತ್ರಕ್ಕೆ ನೀರು ಹರಿಬಿಟ್ಟ ಹಿನ್ನೆಲೆಯಲ್ಲಿ ತಾಲ್ಲೂಕಿನ ಹಳೆ ಗೊಂಡಬಾಳ ಗ್ರಾಮದಲ್ಲಿ ಸುಮಾರು 80ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡ ಘಟನೆ ಶನಿವಾರ ನಡೆದಿದೆ.

ಪ್ರತಿ ವರ್ಷವೂ ಸಹಿತ ಹಿರೇಹಳ್ಳ ಜಲಾಶಯದಿಂದ ಹಳ್ಳಕ್ಕೆ ನೀರು ಹರಿಬಿಟ್ಟ ಸಂದರ್ಭದಲ್ಲಿ ಹಳೇ ಗೊಂಡಬಾಳ ಗ್ರಾಮದ ಬಸವೇಶ್ವರ ದೇವಸ್ಥಾನದ ಹಿಂಭಾಗದಲ್ಲಿನ ಸುಮಾರು 60 ರಿಂದ ನೂರಕ್ಕೂ ಹೆಚ್ಚು ಮನೆಗಳು ಜಲಾವೃತಗೊಳ್ಳುತ್ತವೆ. ಹಿರೇ ಹಳ್ಳ ಜಲಾಶಯದಿಂದ 15 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ಸ್ ನೀರು ಹಳ್ಳಕ್ಕೆ ಹರಿಬಿಟ್ಟ ವೇಳೆ ಈ ಗ್ರಾಮದಲ್ಲಿ ಹಲವಾರು ಮನೆಗಳು ಜಲಾವೃತವಾಗುತ್ತವೆ. ಕಳೆದ ಕೆಲವು ದಿನಗಳಿಂದ ಹಿರೇಹಳ್ಳ ಡ್ಯಾಂ ವ್ಯಾಪ್ತಿಯಲ್ಲಿ ಅಧಿಕ ಪ್ರಮಾಣದ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಿರೇಹಳ್ಳ ಜಲಾ ಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ.

ಜಲಾಶಯದ ನೀರು ಸಂಗ್ರಹಣ ಸಾಮರ್ಥ್ಯವು 1.67 ಟಿಎಂಸಿಯಷ್ಟಿದ್ದು ಶುಕ್ರವಾರ ಮಧ್ಯರಾತ್ರಿಯೇ ಜಲಾಶಯ ಭರ್ತಿಯಾಗಿದೆ. ಮಧ್ಯರಾತ್ರಿ ವೇಳೆಯೇ ಡ್ಯಾಮ್ ನಿಂದ 200 ಕ್ಯೂಸೆಕ್ ನೀರನ್ನು ಮೂರು ಗೇಟ್ ಗಳ ಮೂಲಕ ಹಳ್ಳಕ್ಕೆ ಹರಿಯ ಬಿಡಲಾಗಿದೆ.

**ಬೆಳಗಿನ ಜಾವ 6 ರಿಂದ 18884 ಕ್ಯೂಸೆಕ್ ನೀರನ್ನು ಡ್ಯಾಮ್ ನ ಮೂರು ಕ್ರಸ್ಟ್ ಗೇಟ್ ಗಳ ಮೂಲಕ ಹಳ್ಳದ ಪಾತ್ರಕ್ಕೆ ಬಿಡಲಾಗಿದೆ. ಇದರಿಂದ ಹಳ್ಳವು ಭರ್ತಿಯಾಗಿ ಹರಿಯುತ್ತಿದೆ. ಹಳ್ಳದ ಪಾತ್ರ ವ್ಯಾಪ್ತಿಯಲ್ಲಿನ ಹಳೇಗೊಂಡಬಾಳ ಗ್ರಾಮದ ಸುಮಾರು 100 ಮನೆಗಳ ಜನರು ಆತಂಕಗೊಂಡಿದ್ದು, ಮನೆಯಲ್ಲಿ ದವಸ ಧಾನ್ಯಗಳು ನೀರಿನಲ್ಲಿ ನೆನೆದು ಹಾನಿಯಾಗಿವೆ. ಅಲ್ಲದೆ ಜಾನುವಾರುಗಳಿಗೆ ಸಂಗ್ರಹಿಸಿಟ್ಟಿದ್ದ ಮೇವು ಸಹಿತ ನೀರಿನಲ್ಲಿ ಜಲಾವೃತಗೊಂಡಿದೆ. ಮಳೆರಾಯನ ಆರ್ಭಟದಿಂದ ರೈತರ ಬದುಕು ಸಂಕಷ್ಟ ಎದುರಿಸುವಂತಹ ಪರಿಸ್ಥಿತಿ ಬಂದಿದೆ**

---

## ದಸರಾ ಹಬ್ಬದ ಬೃಹತ್ ಶೋಭಾಯಾತ್ರೆ

• ಉದಯವಾಹಿನಿ, ದಾವಣಗೆರೆ


ಉದಯವಾಹಿನಿ ಚಿತ್ರ

ವಿಶ್ವ ಹಿಂದು ಪರಿಷದ್, ಸಾರ್ವಜನಿಕ ವಿಜಯ ದಶಮಿ ಮಹೋನ್ನತ ಸಮಿತಿ ಆಶ್ರಯದಲ್ಲಿ ದಸರಾ ಹ ಬ್ಬದ ಅಂಗವಾಗಿ ಶನಿವಾರ 43ನೇ ವರ್ಷದ ಬೃ ಹತ್ ಶೋಭಾ ಯಾತ್ರೆ ನಡೆಯಿತು. ಬೇತೂರು ರಸ್ತೆ ಯಲ್ಲಿರುವ ಶ್ರೀ ವೆಂಕಟೇಶ್ವರ ವೃತ್ತದಿಂದ ಪ್ರಾರಂಭ ವಾದ ಬೃಹತ್ ಶೋಭಾ ಯಾತ್ರೆಗೆ ವಿನೋಬ ನಗರದ ಜಡೇಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮಿ ಚಾಲನೆ ನೀಡಿದರು.

ಸಮಾಳ, ನಂದಿಕೋಲು, ವೀರಗಾಸೆ, ಡೊಳ್ಳು, ಕೋಲಾಟ, ಸಾಂಪ್ರದಾಯಿಕ ವಾದ್ಯ ಇತ್ಯಾದಿ ಕಲಾ ತಂಡಗಳು ಶೋಭಾಯಾತ್ರೆಯ ಮೆರಗು ಹೆಚ್ಚಿಸಿದವು. ರಾಷ್ಟ್ರಪಿತ ಮಹಾತ್ಮ ಗಾಂಧಿ, ಬಸವಣ್ಣ, ವಿವೇಕಾನಂದ, ಗೋಲಾವಲ್ಕರ್, ವಾಲ್ಮೀಕಿ ಮುಂತಾದ ಮಹನೀಯರು, ದಾರ್ಶನಿಕರ ಸ್ತಬ್ದ ಚಿತ್ರಗಳಿದ್ದವು. ಹಗೇದಿಬ್ಬ ವೃತ್ತದಲ್ಲಿ ಉಗ್ರ ನರಸಿಂಹವತಾರದ ರೂಪಕ ಚಿತ್ರ ಗಮನ ಸೆಳೆಯಿತು. ವೆಂಕಟೇಶ್ವರ ವೃತ್ತದಿಂದ ಪ್ರಾರಂಭವಾದ ಶೋಭಾಯಾತ್ರೆ ಹಳೆ ಬಿಡಿಒ ಆಫೀಸ್ ರಸ್ತೆ, ಚಾಮರಾಜಪೇಟೆ, ಚೌಕಿಪೇಟೆ, ಹೊಂಡದ ವೃತ್ತ, ಅರುಣಾ ಚಿತ್ರಮಂದಿರ ವೃತ್ತ, ಹಳೆ ಪಿಬಿ ರಸ್ತೆ ಮೂಲಕ ಶ್ರೀ ಬೀರಲಿಂಗೇಶ್ವರ ಮೈ ದಾನ ತಲುಪಲಿದೆ. ಮೇಯರ್ ಕೆ. ಚಮನ್ ಸಾಬ್, ತಂಜೀಮುಲ್ ಮುಸ್ಲಿಂಮೀನ್ ಫಂಡ್ ಅಸೋಸಿಯೇಷನ್ ಅಧ್ಯಕ್ಷ ದಾದುಸೇಠ್, ಟಿ. ಅಸ್ಗರ್ ಒಳಗೊಂಡಂತೆ ಮುಸ್ಲಿಂ ಸಮಾಜದ ಮುಖಂಡರು ಶೋಭಾಯಾತ್ರೆ ಮೆರವಣಿಗೆಯಲ್ಲಿನ ಹಿಂದು ಸಮಾಜದ ಮುಖಂಡರಿಗೆ ಹೂಮಾಲೆ, ಶಾಲು ಹಾಕಿ ಸನ್ಮಾನಿಸಿದರು. ಪರಸ್ಪರ ಸಿಹಿ ಹಂಚುವ ಮೂಲಕ ಭಾವೈಕ್ಯತೆಗೆ ಸಾಕ್ಷಿಯಾದರು. ಶೋಭಾಯಾತ್ರೆ ಹಿನ್ನೆಲೆಯಲ್ಲಿ ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಡ್ರೋಣ್ ಮೂಲಕ ಮೆರವಣಿಗೆ ಮೇಲೆ ನಿಗಾ ವಹಿಸಲಾಗಿತ್ತು.

---

## ಪಡಿತರ ಚೀಟಿದಾರರಿಗೆ ಅ. ತಿಂಗಳ ಆಹಾರ ಧಾನ್ಯ ವಿತರಣೆ ಆರಂಭ

• ಉದಯವಾಹಿನಿ, ಧಾರವಾಡ


ಉದಯವಾಹಿನಿ ಚಿತ್ರ

ಅಕ್ಟೋಬರ್ 2024ರ ಮಾಹೆಗೆ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಜಿಲ್ಲೆಯಲ್ಲಿ ಚಾಲ್ತಿ ಯಲ್ಲಿರುವ ಪಡಿತರ ಚೀಟಿದಾರರಿಗೆ ಪಡಿತರ ಆಹಾರಧಾನ್ಯವನ್ನು ಬಿಡುಗಡೆ ಮಾಡಲಾಗಿದೆ.

ಅಕ್ಟೋಬರ್ 2024 ರ ಮಾಹೆಯ ಪ ಡಿತರ ವಿತರಣೆಯಲ್ಲಿ ಅಂತ್ಯೋದಯ (ಎಎವೈ) ಪಡಿತರ ಚೀಟಿದಾರರಿಗೆ ಪ್ರತಿ ಪಡಿತರ ಚೀಟಿಗೆ ಅಕ್ಕಿ 21 ಕೆಜಿ, ಜೋಳ 14 ಕೆಜಿ ಉಚಿತವಾಗಿ ವಿತರಿಸಲಾಗುತ್ತದೆ.

**ಬಯೋ ನೀಡಿದ ತಕ್ಷಣವೇ ಪಡಿತರ ಪಡೆಯಿರಿ**

ಹಾಗೂ ಪಿಎಚ್‌ಎಚ್ (ಬಿಪಿಎಲ್) ಪಡಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ ಅಕ್ಕಿ 3 ಕೆಜಿ, ಜೋಳ 2 ಕೆಜಿ ಉಚಿತವಾಗಿ ವಿತರಿಸಲಾಗುತ್ತದೆ. ಅಂತರರಾಜ್ಯ ಪೋರ್ಟೆಬಿಲಿಟಿ ಮೂಲಕ ಪಡಿತರ ಪಡೆಯುವವರಿಗೆ ಕೇಂದ್ರ ಸರ್ಕಾರದಿಂದ ಪ್ರತಿ ಸದಸ್ಯರಿಗೆ 5 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಪಡಿ ತರ ಚೀಟಿದಾರರು ತಮ್ಮ ಜಾತಿ ಪ್ರಮಾಣ ಪತ್ರವನ್ನು (ಆರ್‌ಡಿ ಸಂಖ್ಯೆ ಹೊಂದಿರುವ) ತೆಗೆದುಕೊಂಡು ತಮಗೆ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಗೆ ತೆರ ಳಿ ಇ–ಕೆವೈಸಿ ಮಾಡಿಸಿಕೊಳ್ಳುವುದು ಕಡ್ಡಾಯ ಮಾಡಲಾಗಿದೆ.

ಜಿಲ್ಲೆಯಲ್ಲಿ 29,430 ಅಂತ್ಯೋದಯ ಹಾಗೂ 3,55,200 ಬಿಪಿಎಲ್ ಒಟ್ಟು 3,84,630 ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತವೆ.

### ಪಡಿತರ ವಿತರಣೆ ಕಾರ್ಯ

**ಅಕ್ಟೋಬರ್ ಮಾಹೆ 1ನೇ ತಾರೀಖಿನಿಂದ ತಿಂಗಳ ಕೊನೆಯವರೆಗೆ ಬೆಳಿಗ್ಗೆ 07 ರಿಂದ ಮಧ್ಯಾಹ್ನ 12 ಗಂಟೆಯವರೆಗೆ, ಸಾಯಂಕಾಲ 04 ರಿಂದ ರಾತ್ರಿ 09 ಗಂಟೆಯವರೆಗೆ ಮಂಗಳವಾರ ರಜಾ ಹೊರತುಪಡಿಸಿ ಉಳಿದ ದಿನಗಳಂದು ಬಾಕಿ ಉಳಿದಿರುವ ಪಡಿತರ ಚೀಟಿಯಲ್ಲಿನ ಸದಸ್ಯರುಗಳು ಇ– ಕೆವೈಸಿ ಮಾಡುವ ಹಾಗೂ ಎನ್‌ಎಫ್‌ಎಸ್‌ಎ ಯಡಿ ಪಡಿತರ ವಿತರಣೆ ಕಾರ್ಯ ಜರುಗಲಿದ್ದು, ಕಾರಣ ಪಡಿತರ ಚೀಟಿದಾರರು ಬಯೋ ನೀಡಿದ ತಕ್ಷಣವೇ ಪಡಿತರ ಪಡೆಯಲು ತಿಳಿಸಿದೆ.**

---

# ಮುಧೋಳದ ಸದಾಶಿವ ನಲವಡೆಗೆ ದಸರಾ ಕೇಸರಿ ಪ್ರಶಸ್ತಿ

## ಸಾಂಸ್ಕೃತಿಕ ಸೇವೆಯಲ್ಲೂ ಗಣನೀಯ ಸಾಧನೆ– ಮೈಸೂರು ದಸರಾದಲ್ಲಿ ಮುಧೋಳ ಮಲ್ಲರ ಕಮಾಲ್

• ಉದಯವಾಹಿನಿ, ಮುಧೋಳ


ಉದಯವಾಹಿನಿ ಚಿತ್ರ

ನಾಡಹಬ್ಬ ಮೈಸೂರು ದಸರಾದಲ್ಲಿ ಈ ಬಾರಿ ಮುಧೋಳದ ಮಲ್ಲರು ಕಮಾಲ್ ಮೆರೆಯುವ ಮೂಲಕ ರನ್ನನಾಡಿನ ಕೀರ್ತಿ ಹೆಚ್ಚಿಸಿದ್ದಾರೆ.ಅಂತಾ ರಾಷ್ಟ್ರೀಯ ಕುಸ್ತಿ ಅಖಾಡದಲ್ಲಿ ಮುಧೋಳ ಪೈಲ್ವಾನರು ತಮ್ಮದೆ ಆದ ಹೆಸರು ಮಾಡಿದ್ದಾರೆ. ಮೈಸೂರಿನಲ್ಲಿ ಅದ್ದೂರಿಯಾಗಿ ಜರಗುವ ನಾಡಹಬ್ಬ ದಸರಾದಲ್ಲಿ ಈ ಬಾರಿ ಮುಧೋಳದ ಪೈಲ್ವಾನರು 2 ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ನಾಡಿನ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕುಸ್ತಿಯೊಂದೇ ಅಲ್ಲದೆ ಸಾಂಸ್ಕೃತಿಕ ವಿಭಾಗದಲ್ಲಿಯೂ ಈ ಬಾರಿ ಮುಧೋಳದ ಕಲಾವಿದರು ದಸರಾ ವೇದಿಕೆ ಮೇಲೆ ಸಾರ್ವಜನಿಕರಿಗೆ ಭರಪೂರ ಮನರಂಜನೆ ನೀಡಿದ್ದಾರೆ. ಅಪಾರ ಕುಸ್ತಿ ಪ್ರೇಮಿಗಳ ಎದುರು ನಡೆದ 74–86 ಕೆ.ಜಿ ವಿಭಾಗದ ದಸರಾ ಕೇಸರಿ ಪ್ರಶಸ್ತಿಗೆ ಮುಧೋಳದ ಸದಾಶಿವ ನಲವಡೆ ಪಾತ್ರರಾಗಿದ್ದಾರೆ. ಫೈನಲ್ ಪಂದ್ಯದಲ್ಲಿ ದಾವಣಗೆರೆಯ ಪೈಲ್ವಾನ್ ಬಸವರಾಜ ಪಾಟೀಲ ಅವರನ್ನು ಮಣಿಸಿದ ಸದಾಶಿವ ಅವರು ಈ ಬಾರಿಯ ದಸರಾ ಕೇಸರಿಯಾಗಿ ಹೊರಹೊಮ್ಮಿದರು. ಪೂರ್ವಜರ ಕುಸ್ತಿಯ ಪ್ರಭಾವದಿಂದ ಪೈಲ್ವಾನ್ ಆಗಿರುವ ಸದಾಶಿವ ಅವರು ಸದ್ಯ ಪುಣೆಯ ಶಿವರಾಂ ದಾದಾ ಅವರ ಗರಡಿಯಲ್ಲಿ ತಾಲೀಮು ನಡೆಸುತ್ತಿದ್ದಾರೆ. ತಂದೆ ವಿಠ್ಠಲ ನಲವಡೆ ತಾಯಿ ಕಲ್ಪನಾ ಅವರ ಪ್ರೋತ್ಸಾಹದೊಂದಿಗೆ ಧಾರವಾಡದ ಸಾಯಿ ಕ್ರೀಡಾಶಾಲೆಯಲ್ಲಿ ಪ್ರಾವಢಶಾಲೆ ಹಂತದಲ್ಲಿ ಶಂಕರಪ್ಪ ಬಂಡೋಜಿ ಅವರ ಕೈಯಲ್ಲಿ ಕುಸ್ತಿಯ ಪಟ್ಟುಗಳನ್ನು ಕಲಿತು ಇಂದು ಈ ಹಂತಕ್ಕೆ ಬೆಳೆದು ನಿಂತಿದ್ದಾರೆ. ಮುಧೋಳದ ಮತ್ತೋರ್ವ ಯುವ ಮಹಿಳಾ ಕುಸ್ತಿಪಟು ಪ್ರತಿಕ್ಷಾ ಭೋವಿ ಈ ಬಾರಿ 72 ಕೆಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ತಾಲ್ಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ. ವಿಶೇಷವೆಂದರೆ ಪ್ರತಿಕ್ಷಾ ಮೈಸೂರು ದಸರಾದಲ್ಲಿ ನಿರಂತರವಾಗಿ 3 ಬಾರಿ ಪ್ರಥಮ ಸ್ಥಾನ ಪಡೆಯುವ ಮೂಲಕ ಹ್ಯಾಟ್ರಿಕ್ ಸಾಧನೆ ಮೆರೆದಿದ್ದಾಳೆ.

2022ರಲ್ಲಿ 62 ಹಾಗೂ 2023ರಲ್ಲಿ 65 ಕೆ.ಜಿ. ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿರುವ ಪ್ರತಿಕ್ಷಾ ಈ ಬಾರಿ 72 ಕೆ.ಜಿ. ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ತಂದೆ ಸೈದು ಭೋವಿ ಹಾಗೂ ತಾಯಿ ದ್ರಾಕ್ಷಾಯಿಣಿ ಭೋವಿ ಅವರ ಪ್ರೋತ್ಸಾಹದಿಂದ ಹಳಿಯಾಳದ ಕ್ರೀಡಾಶಾಲೆಯಲ್ಲಿ ಪ್ರಥಮ ಪಿಯುಸಿ ಓದುತ್ತಿರುವ ಪ್ರತಿಕ್ಷಾ ಕುಸ್ತಿಯಲ್ಲಿ ಹಲವಾರು ಪ್ರಶಸ್ತಿ ಫಲಕಗಳನ್ನು ಬಾಚಿಕೊಂಡಿದ್ದಾಳೆ.

86 ಕೆ.ಜಿ. ವಿಭಾಗದ ದಸರಾ ಕಂಠೀರವ ಪ್ರಶಸ್ತಿಗಾಗಿ ನಡೆದ ಫೈನಲ್ ಹಣಾಹಣಿಯಲ್ಲಿ ಮುಧೋಳದ ಫೈಲ್ವಾನ್ ಬಾಪೂ ಸಾಹೇಬ ಶಿಂಧೆ ಅವರು ನಿರಾಸೆ ಅನುಭವಿಸಬೇಕಾಯಿತು. ಬಾಗಲಕೋಟೆಯ ಪೈಲ್ವಾನ್ ಶಿವಯ್ಯ ಪೂಜಾರ ಅವರ ಎದುರು ಫೈನಲ್ ಪಂದ್ಯ ಸೋತ ಬಾಪೂ ಸಾಹೇಬ ಅವರು ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು.


ಲೋಕಾಪುರದ ನಟರಾಜ ಹವ್ಯಾಸಿ ಕಲಾತಂಡದವರು ಮೈಸೂರಿನ ಟೌನ್ ಹಾಲ್ ನಲ್ಲಿ ನಡೆದ ನಾಟಕ ಪ್ರದರ್ಶನ ನೆರದಿದ್ದ ಅಪಾರ ಕಲಾರಸಿಕರನ್ನು ರಂಜಿಸಿ ಜನಮೆಚ್ಚುಗೆಗೆ ಪಾತ್ರವಾಯಿತು.

> ಸಾಂಸ್ಕೃತಿಕ ಹಾಗೂ ಕುಸ್ತಿಯಲ್ಲಿ ಈ ಬಾರಿ ಉನ್ನತ ಸಾಧನೆ ಮೆರೆದಿರುವ ಮುಧೋಳದ ಪ್ರತಿಭೆಗಳಿಗೆ ತಾಲ್ಲೂಕಿನ ಜನರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
> –ಗೋವಿಂದಪ್ಪ ತಳವಾರ, ಮುಧೋಳ

### ಸಹೋದರರ ಸಂಗೀತಕ್ಕೆ ಮನಸೋತ ಕಲಾರಸಿಕರು

**ಕಳೆದ 30 ವರ್ಷಗಳಿಂದ ನಾಟಕದಲ್ಲಿ ಹಿನ್ನೆಲೆ ಸಂಗೀತ ನೀಡುವ ತಾಲ್ಲೂಕಿನ ಹಲಗಲಿ ಗ್ರಾಮದ ಸದಾಶಿವ ಕಟ್ಟೆನ್ನವರ ಹಾಗೂ ಸೋಮಶೇಖರ ಕಟ್ಟೆವರ ಸಹೋದರರು ಈ ಬಾರಿ ಸಂಗೀತ ಕ್ಷೇತ್ರದ ಮೂಲಕ ಮುಧೋಳ ತಾಲೂಕಿಗೆ ಕೀರ್ತಿ ತಂದಿದ್ದಾರೆ. ನಾದಬ್ರಹ್ಮ ಸಂಗೀತ ಸಭಾ ವೇದಿಕೆಯಲ್ಲಿ ಜರುಗಿದ ಸಂಗೀತ ಕಚೇರಿಯಲ್ಲಿ ಗಾಯಕ ಗುರುರಾಜ ಪಾಟೀಲ ಅವರ ಧ್ವನಿಗೆ ಸದಾಶಿವ ಬ್ಯಾಂಜೋ ಹಾಗೂ ಕೀಬೋರ್ಡ್ ನುಡಿಸಿದರೆ ಅವರ ಸಹೋದರ ಸೋಮು ಪ್ಯಾಡ್ ನುಡಿಸಿ ಪ್ರೇಕ್ಷಕರ ಮೆವಮಚ್ಚುಗೆಗೆ ಪಾತ್ರರಾದರು.**

---




# ಮಿನಿ ನ್ಯೂಸ್

## ಹುಟ್ಟುಹಬ್ಬದ ವೇಳೆ ದ್ವೇಷದ ಕೊಲೆ ಸಂಭ್ರಮ ದುಃಖದಲ್ಲಿ ಅಂತ್ಯ

• ಉದಯವಾಹಿನಿ, ಆಳಂದ

ವ್ಯಕ್ತಿಯೊಬ್ಬ ತನ್ನ ಸ್ನೇಹಿತರೊಂದಿಗೆ ಆಶ್ರಮವೊಂದರ ಬಳಿ ಹುಟ್ಟುಹಬ್ಬ ಆಚರಿಸುತ್ತಿದ್ದ ಸಂದರ್ಭ ಕೊಲೆಯಾದ ಘಟನೆ ಶುಕ್ರವಾರ ರಾತ್ರಿ ನಡೆದಿದೆ. ಪಟ್ಟಣದ ಮಹಾತ್ಮಾ ಜ್ಯೋತಿಬಾ ಫುಲೆ ಬಡಾವಣೆ ಯ ನಿವಾಸಿ ಶಿವಕುಮಾರ ಸೂರ್ಯಕಾಂತ (20) (ಬಾಬುರಾವ) ದೇವನೂರ ಕೊಲೆಯಾದ ವ್ಯಕ್ತಿ.ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಕುಡಿದ ಮತ್ತಿನಲ್ಲಿ ಕೊಲೆ ನಡೆದಿದೆ ಎಂದು ಹೇಳಲಾಗುತ್ತಿದ್ದು, ಆದರೆ ಈ ಕುರಿತು ತನಿಖೆ ನಡೆದಾಗಲೇ ಸತ್ಯಾಂಶ ಹೊರಬೀಳಲಿದೆ. ಶಿವಕುಮಾರ ಕೊಲೆ ಆಗಿರುವ ಸುದ್ದಿ ಸಾರ್ವಜನಿಕರಲ್ಲಿ ತೀವ್ರ ಆಘಾತವನ್ನು ಮೂಡಿಸಿದ್ದು, ಆತನ ಕುಟುಂಬದಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ. ತಕ್ಷಣವೇ ಘಟನಾ ಸ್ಥಳಕ್ಕೆ ಆಳಂದ ಪೋಲೀಸ್ ಠಾಣೆಯ ಡಿಐ ಎಸ್ಪಿ ಬಿ.ಆರ್. ಗೋಪಿ, ಸಿಪಿಐ ಪ್ರಕಾಶ ಯಾತನೂರ ಹಾಗೂ ಪಿ.ಐ. ಮಹಾದೇವ ಪಂಚಮುಖಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಕುಂಭ ಹೊತ್ತು 3 ಕಿ.ಮೀ. ಪಾದಯಾತ್ರೆ ನಡೆಸಿದ ರಂಭಾಪುರಿ ಜಗದ್ಗುರುಗಳು

• ಉದಯವಾಹಿನಿ, ಗದಗ

ವಿಜಯದಶಮಿ ಹಬ್ಬದ ಅಂಗವಾಗಿ ಬಾಳೆಹೊನ್ನೂರು ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು ಅಬ್ಬಿಗೇರಿ ಗ್ರಾಮದ ಹಳೆ ಹಿರೇಮಠದಿಂದ ಹೊಸ ಹಿರೇಮಠದವರೆಗೆ 3 ಕಿ.ಮೀ. ದೂರದವರೆಗೂ ಕುಂಭ ಹೊತ್ತು ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಸಾವಿರಾರು ಮುತ್ತೈದೆಯರು ಕುಂಭ ಹೊತ್ತು ಶ್ರೀಗಳ ಹಿಂದೆ ಸಾಗಿದರು.ಅಬ್ಬಿಗೇರಿ–ಸಿದ್ಧರಬೆಟ್ಟ ಹಿರೇಮಠದ ವೀರಭದ್ರ ಶಿವಾಚಾರ್ಯರು ಸೇರಿ ಹರ–ಗುರು–ಚರ ಮೂರ್ತಿಗಳು ಇದ್ದರು.

## ಹುಲಿಕೆರೆ ಕೆರೆ ಬಳಿಯ ರಸ್ತೆಯಲ್ಲಿ ಬಿರುಕು.. ಕುಸಿಯುವ ಭೀತಿ

• ಉದಯವಾಹಿನಿ, ಕಾನಾಹೊಸಹಳ್ಳಿ

ಕೂಡ್ಲಿಗಿ ತಾಲ್ಲೂಕಿನಲ ದೊಡ್ಡ ಕೆರೆಗಳಲ್ಲಿ ಒಂದು ಕೆರೆಯಾಗಿರುವ ಕಾನಾಹೊಸಹಳ್ಳಿ ಹೋಬಳಿಯ ಹುಲಿಕೆರೆ ಕೆರೆಗೆ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ಕೆರೆ ಸಂಪೂರ್ಣ ಬರ್ತಿಯಾಗುವ ಹಂತದಲ್ಲಿ ಇದ್ದು ಯಾವುದೇ ಕ್ಷಣದಲ್ಲಿ ಕೆರೆ ಕೋಡಿ ಬೀಳುವ ಸಾದ್ಯತೆ ಇದೆ ಆದರೆ, ಕೆರೆಯ ಏರಿಯ ಒಂದು ಭಾಗ ಮಣ್ಣು ಕುಸಿದಿದ್ದು ಹಾಗೂ ರಸ್ತೆ ಬಿರುಕು ಬಿಟ್ಟಿದ್ದು ಕೆರೆ ಒಡೆಯುವ ಆತಂಕ ಹೆಚ್ಚಾಗಿದೆ, ಹಲವು ತಿಂಗಳ ಹಿಂದೆ ಕೆರೆಯ ಏರಿ ದುರಸ್ತಿಗೊಳಿಸಿದ್ದು ಒಂದು ಭಾಗದಲ್ಲಿ ತಡೆ ಗೋಡೆ ನಿರ್ಮಾಣ ಮಾಡಿದ್ದು ಮತ್ತೊಂದು ಕಡೆ ಹಾಗೆಯೆ ಬಿಟ್ಟಿರುವುದು ಕೆರೆಯ ಏರಿ ಕುಸಿತಕ್ಕೆ ಕಾರಣವಾಗಿದೆ,

ಎರಡು ದಿನಗಳ ಹಿಂದೆ ಕೆರೆ ಏರಿ ಬಿರುಕು ಬಿಟ್ಟಿರುವ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಈ ವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಕೆರೆಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದ್ದು ಹೀಗೆ ಮುಂದುವರಿದರೆ ಕೆರೆ ಒಡೆದು ಹೋಗುವ ಲಕ್ಷಣಗಳಿದ್ದು ಕೆರೆ ಒಡೆದರೆ, ಹತ್ತಾರು ಹಳ್ಳಿಗಳಿಗೆ ಹಾನಿಯಾಗುತ್ತದೆ ಕೂಡಲೆ ದುರಸ್ತಿಗೊಳಿಸಬೇಕು ಎಂದು,ಗ್ರಾಮದ ಮುಖಂಡರಾದ, ಮಾಜಿ ತಾಪಂ ಅದ್ಯಕ್ಷ ವೆಂಕಟಸ್ವಾಮಿ, ಸಿಆರ್ ಪಿ ಮಾರಣ್ಣ ,ದುರುಗೇಶ್,ಎಚ್,ಎಂ, ಶರಣಪ್ಪ, ವಿರೇಶ್, ಕರಿಬಸವೇಶ, ಕಣದಮನೆ ಶಿವು, ಬೋರಣ್ಣ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಗದಗ ನಗರಕ್ಕೆ ಆಗಮಿಸಿದ ವಿಜಯ ಜ್ಯೋತಿ ಸ್ವಾಗತಿಸಿದ ಸಚಿವ

• ಉದಯವಾಹಿನಿ, ಗದಗ

ಕಿತ್ತೂರು ಉತ್ಸವದ ಪ್ರಯುಕ್ತ ರಾಜ್ಯಾದ್ಯಂತ ಹಮ್ಮಿಕೊಂಡಿರುವ ವಿಜಯ ಜ್ಯೋತಿ ಯಾತ್ರೆಯು ಶನಿವಾರ ಗದಗ ನಗರಕ್ಕೆ ಆಗಮಿಸಿತು.

ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ವಿಜಯ ಜ್ಯೋತಿಗೆ ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ್ ಅವರು ಸ್ವಾಗತಿಸಿ, ಪೂಜೆ ಸಲ್ಲಿಸಿದರು.

ಕಿತ್ತೂರ ಚನ್ನಮ್ಮ ವಿಜಯ ಜ್ಯೋತಿಗೆ ಸಚಿವರು ಸ್ವಾಗತಿಸಿ, ರಥದಲ್ಲಿದ್ದ ರಾಣಿ ಚೆನ್ನಮ್ಮ ಪುತ್ಥಳಿಗೆ ಪುಷ್ಪಹಾರ ಅರ್ಪಿಸಿ, ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ನಗರದ ಪ್ರವಾಸಿ ಮಂದಿರದಿಂದ ವೀರಜ್ಯೋತಿ ಮೆರವಣಿಗೆಯು ಆರಂಭವಾಗಿ ಮುಳಗುಂದ ನಾಕಾ, ಎಸಿ ಕಚೇರಿ ಮೂಲಕ ಕಲಾ ತಂಡಗಳೊಂದಿಗೆ ಸಾಗಿದ ವಿಜಯ ಜ್ಯೋತಿ ಯಾತ್ರೆ, ಕಿತ್ತೂರ ಚನ್ನಮ್ಮ ವೃತ್ತ ತಲುಪಿತು.

ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿ ಅ. 23ರಿಂದ 25ರ ವರೆಗೆ ನಡೆಯಲಿರುವ ಕಿತ್ತೂರು ಉತ್ಸವ ಪ್ರಯುಕ್ತ ರಾಜ್ಯದಾದ್ಯಂತ ಸಂಚರಿಸುವ ಈ ವಿಜಯ ಜ್ಯೋತಿ ಯಾತ್ರೆ, ಹಾವೇರಿ ಜಿಲ್ಲೆಯಿಂದ ಗದಗ ಜಿಲ್ಲೆಗೆ ಆಗಮಿಸಿ ಲಕ್ಕುಂಡಿ, ಬನ್ನಿಕೊಪ್ಪ ಮಾರ್ಗವಾಗಿ ಜಿಲ್ಲೆಯಿಂದ ಕೊಪ್ಪಳ ಜಿಲ್ಲೆಗೆ ಬಿಳ್ಕೊಡಲಾಯಿತು.

## ಧಾರಾಕಾರ ಮಳೆಯಿಂದ ಮನೆಗಳಿಗೆ ನುಗ್ಗಿದ ನೀರು– ನಿದ್ದೆಗೆಟ್ಟ ಜನ

• ಉದಯವಾಹಿನಿ, ಶಿವಮೊಗ್ಗ


ಉದಯವಾಹಿನಿ ಚಿತ್ರ

ಶಿವಮೊಗ್ಗದಲ್ಲಿ ಧಾರಾಕಾರ ಮಳೆಯಿಂದಾಗಿ ದೊಡ್ಡ ಅವಾಂತರವೇ ಸೃಷ್ಟಿಯಾಗಿದೆ. ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಹಲವೆಡೆ ಮನೆಗಳಿಗೆ ಮಳೆ ನೀರು ನುಗ್ಗಿದೆ. ಕಳೆದ ಕೆಲ ದಿನಗಳಿಂದ ಭದ್ರಾವತಿ ತಾಲ್ಲೂಕಿನಲ್ಲಿ ಮಳೆ ಅಬ್ಬರ ಜೋರಾಗಿದೆ. ನಿರಂತರ ಮಳೆಗೆ ರಸ್ತೆಗಳು, ಮನೆಗಳು ಜಲಾವೃತಗೊಂಡು ಊರಿಗೂರೇ ಹಬ್ಬದ ಕಳೆ ಕಳೆದುಕೊಂಡಿದೆ. ಹೌ ದು... ಇಂದು ದಸರಾ ಹಬ್ಬ. ಹಬ್ಬದ ಹಿನ್ನೆಲೆ ಮನೆ, ಕಚೇರಿಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ಜನ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ಬೆಳಗ್ಗೆಯಿಂದ ಶುರುವಾದ ಮಳೆಯಿಂದಾಗಿ ಜನ ಮನೆ ಬಿಟ್ಟು ಹೊರಬರಲು ಹಿಂದೇಟು ಹಾಕುವಂತಹ ಸ್ಥಿತಿ ನಿರ್ಮಾಣವಾಗಿದೆ.

ಮಳೆ ಮುಂದುವರೆದ ಹಿನ್ನೆಲೆ ಚರಂಡಿಗಳು ತುಂಬಿ ಹರಿಯುತ್ತಿವೆ. ಚರಂಡಿ ತುಂಬಿದ ಪರಿಣಾಮ ರಸ್ತೆ ಮೇಲೆ ಮಳೆಯ ನೀರು ತುಂಬಿ ಹರಿಯುತ್ತಿದೆ. ಹೀಗಾಗಿ ವಾಹನ ಸಂಚಾರಕ್ಕೂ ಅಡ್ಡಿಯಾಗಿದೆ. ಅಲ್ಲದೆ ಭದ್ರಾವತಿ ನಗರದ ಜನ್ನಾಪುರದ ಕಿತ್ತೂರು ರಾಣಿ ಚೆನ್ನಮ್ಮ ಬ್ಲಾಕ್‌ನ ಮನೆಯೊಂದರ ಕಾಂಪೌಂಡ್ ಗೋಡೆ ಕುಸಿದು ಮನೆಗಳಿಗೆ ನುಗ್ಗಿರುವ ನೀರನ್ನು ಹೊರ ಹಾಕಲು ಜನರು ಹರಸಾಹಸ ಪಡುತ್ತಿದ್ದಾರೆ. ಧಾರಾಕಾರ ಮಳೆಯಿಂದ ಮನೆಗಳಿಗೆ ನುಗ್ಗಿದ ನೀರು– ರಾತ್ರಿಯಿಡೀ ನಿದ್ದೆಗೆಟ್ಟ ಜನ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ವೃಷಭ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಮಿಥುನ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ.

**ಕರ್ಕಾಟಕ** ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ಅನಿರೀಕ್ಷಿತ ಪ್ರಣಯ ಭಾವ.

**ಸಿಂಹ** ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ.

**ಕನ್ಯಾ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು.

**ತುಲಾ** ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು.

**ವೃಶ್ಚಿಕ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ.

**ಧನಸ್ಸು** ನಿಮ್ಮ ಮಹತ್ವಾಕಾಂಕ್ಷೆ ಮತ್ತು ಆಕಾಂಕ್ಷೆಗಳು ಭಯದಿಂದ ಹಾನಿಗೊಳಗಾಗುವ ಸಾಧ್ಯತೆಗಳು ಹೆಚ್ಚಿವೆ. ಇದನ್ನು ನಿಭಾಯಿಸಲು ನಿಮಗೆ ಸರಿಯಾದ ಸಲಹೆ ಬೇಕು. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

**ಮಕರ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

**ಕುಂಭ** ನಿಮ್ಮ ದೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು.

**ಮೀನ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು

# ಹುಲಿಗಳ ಅಬ್ಬರಕ್ಕೆ ತಾಸೆ ಪೆಟ್ಟೇ ಆಧಾರ: ನೋಡುಗರ ಮನದಲ್ಲೂ ರೋಮಾಂಚನ

### ತಾಸೆಯ ಪೆಟ್ಟಿನಿಂದ ಹೊರಬರುವ ಶಬ್ದದ ಸ್ವರ ಮತ್ತು ರಾಗಬದ್ಧವಾಗಿದ್ದರಷ್ಟೇ ಹುಲಿ ವೇಷಧಾರಿಗೆ ಅಬ್ಬರದ ಕುಣಿತ ಸಾಧ್ಯ

• **ಉದಯವಾಹಿನಿ ಮಹಾನಗರ**

ದೈವಾ ರಾಧನೆಯಲ್ಲಿ ಬಳಸುವ 'ತಾಸೆ'ಗೆ ಕರಾವಳಿಯಲ್ಲಿ ಅತ್ಯಂತ ಪವಿತ್ರ ಸ್ಥಾನ. ಬಹಳಷ್ಟು ಶ್ರದ್ಧೆ ಹಾಗೂ ಅಚ್ಚುಕಟ್ಟಾಗಿ ತಾಸೆ ಬಡಿಯುವ ಕಾರ್ಯದಲ್ಲಿ ನಿರತರಾದ ನೂರಾರು ಮಂದಿ ಕರಾವಳಿ ಭಾಗದಲ್ಲಿದ್ದಾರೆ.

ಹುಲಿ ವೇಷಧಾರಿ ಅಬ್ಬರಿಸಿ ಕುಣಿದಾಡಬೇಕಾದರೆ 'ತಾಸೆ'ಯ ಶಬ್ದವೇ ಆಧಾರ, ತಾಸೆಯ ಪೆಟ್ಟಿನಿಂದ ಹೊರಬರುವ ಶಬ್ದದ ಸ್ವರ ಮತ್ತು ರಾಗಬದ್ಧವಾಗಿದ್ದರಷ್ಟೇ ಹುಲಿ ವೇಷಧಾರಿಗೆ ಅಬ್ಬರದ ಕುಣಿತ ಸಾಧ್ಯವಾಗುವುದು, ಹೀಗಾಗಿ ತಾಸೆಯ ಶಬ್ದವಿಲ್ಲದಿದ್ದರೆ ಹುಲಿ ವೇಷ ಪೂರ್ಣತ್ವ ಕಂಡುಕೊಳ್ಳುವುದಿಲ್ಲ.

ಹುಲಿ ವೇಷಧಾರಿಗೆ ಮಾತ್ರವಲ್ಲ, ನೋಡುಗರ ಮನದಲ್ಲೂ ರೋಮಾಂಚನ ಮೂಡಲು, ನಿಂತಲ್ಲೇ ಕಾಲು ಕುಣಿಯಲು ತಾಸೆಯೇ ಬೇಕು. ಹಿಂದೆ ಒಂದು ಹುಲಿ ವೇಷದ ತಂಡಕ್ಕೆ ಎರಡು ತಾಸೆ, ಒಂದು ಡೋಲು ಮಾತ್ರ ಬೇಕಾಗುತ್ತಿತ್ತು.

> 1980ರಿಂದ ತಾಸೆ ಕೆಲಸದಲ್ಲಿರುವ ಬಾಲಕೃಷ್ಣ ಮುಲ್ಲಕಾಡು ಅವರ ಪ್ರಕಾರ, ಹಿಂದೆ ಹುಲಿ ವೇಷದ ಕುಣಿತ ವ್ಯಾಯಾಮ ಶಾಲೆಯ ತಾಲೀಮನ್ನು ಒಳಗೊಂಡಿತ್ತು. ಹುಲಿ ವೇಷಧಾರಿಯ ಕಾಲಿನ ಚಲನವಲನ ನೋಡಿ ಅದರಂತೆ ತಾಸೆಯಲ್ಲಿ ನಾವು ಕೈಚಳಕ ಮಾಡುತ್ತಿದ್ದೆವು. ಆಗ ಅದೊಂದು ಶಿಸ್ತು. ಆದರೆ, ಈಗ ಹುಲಿ ಕುಣಿತಕ್ಕೆ ಪ್ರತ್ಯೇಕ ಸ್ಟೆಪ್ ಜಾರಿಗೆ ಬಂದಿದೆ. 10ಕ್ಕೂ ಅಧಿಕ ಸ್ಟೆಪ್ ಹಾಕುವವರು ಇದ್ದಾರೆ. ನಾವೆಲ್ಲ ಕಷ್ಟಪಟ್ಟು ತಾಸೆ ಕಲಿತವರು. ಈಗ ಅದರ ಬಗ್ಗೆ ಏನೂ ತಿಳಿಯದ ಮಂದಿ ಕಮೆಂಟ್ ಮಾಡುವುದು ಬೇಸರ ತರಿಸುತ್ತದೆ -ಬಾಲಕೃಷ್ಣ

ಆದರೆ, ಈಗ ಒಂದು ತಂಡದಲ್ಲಿ 8-10 ತಾಸೆ ಬಳಕೆಯಲ್ಲಿದೆ. ಮೂರು ಡೋಲು, ವಾದ್ಯದವರು ಬೇಕಾಗುತ್ತಾರೆ. ಹುಲಿ ವೇಷದ ತಂಡದ ಡಿಮ್ಯಾಂಡ್



ಉದಯವಾಹಿನಿ ಚಿತ್ರ

ಮೇಲೆ ಈ ಸಿದ್ಧತೆ ಆಗುತ್ತದೆ. ಸ್ಪರ್ಧೆಗೆ ಹೋಗುವ ಹುಲಿ ವೇಷದ ತಂಡಕ್ಕೆ ತಾಸೆಯವರ ಜತೆಗೆ ತರಬೇತಿ ಕೂಡ ಇರುತ್ತದೆ. ತಾಸೆ ಬಡಿಯಲು ಮೊದಲು ನಾಗರ ಬೆತ್ತದ ಕೋಲು ಬಳಕೆಯಲ್ಲಿತ್ತು. ಈಗ ಫೈಬರ್ ಕೋಲು. ವಿಶೇಷವೆಂದರೆ ದ.ಕ. ವಾದ್ಯ ಕಲಾವಿದರ ಸಂಘದ ವತಿಯಿಂದ ಕಳೆದ ವರ್ಷ ನವರಾತ್ರಿಗೆ 2 ದಿನ ಪದವಿನಂಗಡಿ ಸಮೀಪ ಬಾಂದೊಟ್ಟುವಿನಲ್ಲಿ ಹುಲಿವೇಷ ಕುಣಿತ ನಡೆದಿತ್ತು.

ತಾಸೆ ಬಡಿಯುವುದು ಮನೆಯಲ್ಲಿ ಅಭ್ಯಾಸ ಮಾಡಿ ಕಲಿಯುವ ಪಾಠ. ಇದಕ್ಕೆ ಕೈ ಚಳಕ ಹಾಗೂ ಯುಕ್ತಿಯೇ ಆಧಾರ. ಕಳೆದ 40 ವರ್ಷದಿಂದ ತಾಸೆ ಬಡಿಯುವ ಸೇವೆಯಲ್ಲಿರುವ ರಮೇಶ್

> ಹಿಂದೆ ಚರ್ಮದ ತಾಸೆಯನ್ನೇ ಬಳಕೆ ಮಾಡುತ್ತಿದ್ದೆವು. ಚರ್ಮ ತಂದು ಅದನ್ನು ತಾಸೆಯ ಸ್ವರೂಪಕ್ಕೆ ತರಲು 5ರಿಂದ 8 ದಿನ ಬೇಕು. ಆದರೆ, ಈಗ ಅಷ್ಟು ಸಮಯ ಇಲ್ಲ. ಅದಕ್ಕಾಗಿ ಫೈಬರ್ ತಾಸೆ ಬಂದಿದೆ. ಇದನ್ನು ಸಿದ್ದಪಡಿಸಲು 2 ದಿನ ಸಾಕು. ಮೊದಲು 12 ಇಂಚಿನವರೆಗಿನ ತಾಸೆ ಇತ್ತು. ಈಗ ಸಣ್ಣ ಆಗಿ 8 ಇಂಚಿನ 'ಚಿಮಿಣಿ ತಾಸೆ'ಯೂ ಬಂದಿದೆ. ಹಿಂದೆ ತಾಸೆಯ ಶಬ್ದ 1 ಮೈಲ್ ದೂರದವರೆಗೆ ಕೇಳುತ್ತಿತ್ತು. ಆದರೆ ಈಗಿನ ಶಬ್ದ ಹುಲಿ ವೇಷ ಕುಣಿಯುವ ವ್ಯಾಪ್ತಿಗೆ ಮಾತ್ರ ಕೇಳುತ್ತದೆ
>
> -ರಮೇಶ್ ಮಿತ್ತನಡ್ಕ, ದಿನೇಶ್ ಇರಾ

**ಕೈ ಚಳಕ ಹಾಗೂ ಯುಕ್ತಿಯೇ ಆಧಾರ**

ಮಿತ್ತನಡ್ಕ ಅವರ ಪ್ರಕಾರ, ಹುಲಿ ವೇಷ ಕುಣಿತಕ್ಕೆ ತಾಸೆಯ ಸದ್ದು ಬಹುಮುಖ್ಯ. ಹುಲಿ ವೇಷದ ಸಂದರ್ಭ ಹಿಂದೆ ಬಡಿಯುವ ಕ್ರಮ ಮತ್ತು ಈಗಿನ ಕ್ರಮದಲ್ಲಿ ಬದಲಾವಣೆ ಇದೆ.

ಹುಲಿ ಕುಣಿತಕ್ಕೆ ತಾಸೆಯ ಪೆಟ್ಟು ಬೇರೆ ಬೇರೆ ರೀತಿಯದ್ದಿದೆ. ಹುಲಿ ವೇಷ ಹೊರಡುವಾಗ, ಕುಣಿಯುವಾಗ, ಮಂಡೆ ಹಾಕುವಾಗ, ತೆಗೆಯುವಾಗ, ಹೊರಡುವಾಗ ಹೀಗೆ ವಿವಿಧ ಸಂದರ್ಭಕ್ಕೆ ಅನುಗುಣವಾಗಿ ಪ್ರತ್ಯೇಕ ತಾಸೆಯ ಸ್ವರಗಳಿರುತ್ತವೆ ಎನ್ನುತ್ತಾರೆ ರಮೇಶ್ ಮಿತ್ತನಡ್ಕ. ಹುಲಿ ವೇಷಧಾರಿ ಎಷ್ಟು ಆಸಕ್ತಿ ಹಾಗೂ ಶ್ರಮವಹಿಸಿ ಕುಣಿಯುತ್ತಾನೆಯೋ ಅಷ್ಟೇ ಆಸಕ್ತಿ ಶ್ರಮದಿಂದ ತಾಸೆಯವರು ಸಹಕಾರ ನೀಡುತ್ತಾರೆ. ಹುಲಿ ವೇಷ ಹಾಕಿದವರು ಉತ್ಸಾಹದಿಂದಿದ್ದರೆ ಆ ತಂಡವು ಹೆಚ್ಚು ಉತ್ಸಾಹದಲ್ಲಿರುತ್ತದೆ ಎನ್ನುತ್ತಾರೆ.

ಹುಲಿ ವೇಷದ ಐದಾರು ತಂಡಕ್ಕೆ ಕಳೆದ 10 ವರ್ಷದಿಂದ ತಾಸೆಯ ಕೆಲಸ ಮಾಡುವ ಪೃಥ್ವಿರಾಜ್ ಕಂಕನಾಡಿ.

# ಐಕೂರ ಗಾಪಂ ನೂತನ ಕಟ್ಟಡಕ್ಕೆ ಭೂಮಿ ಪೂಜೆ

• **ಉದಯವಾಹಿನಿ ವಡಗೇರಾ**

ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಐಕೂರ ಗ್ರಾಮ ಪಂಚಾಯಿತಿ ನೂತನ ಕಟ್ಟಡಕ್ಕೆ ಪಂಚಾಯತ್ ರಾಜ್ ಇಲಾಖೆಯ ವತಿಯಿಂದ 20 ಲಕ್ಷ ಅನುದಾನದ ಬಿಡುಗಡೆ ಆಗಿದ್ದು ಈ ಅನುದಾನದಲ್ಲಿ ನಿರ್ಮಾಣವಾಗುತ್ತಿರುವ ನೂತನ ಗ್ರಾಮ ಪಂಚಾಯಿತಿ ಕಟ್ಟಡದ ಭೂಮಿ ಪೂಜೆ ಕಾರ್ಯಕ್ರಮವನ್ನು ಐಕೂರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ದೇವಕಿ.ಗಂಡ ನಿಂಗಪ್ಪ ಕವಲ್ದಾರ್ ಉದ್ಘಾಟಿಸಿ ಮಾತನಾಡಿದರು.

ನಮ್ಮ ಗ್ರಾಮವು ಗ್ರಾಮ ಪಂಚಾಯಿತಿ ಕೇಂದ್ರವಾಗಿ ಸುಮಾರು ಎಂಟು ವರ್ಷಗಳು ಕಳೆದಿವೆ ಇಲ್ಲಿಯವರೆಗೆ ಸ್ವಂತ ಕಟ್ಟಡ ಇಲ್ಲದ ಕಾರಣ ತುಂಬಾ ತೊಂದರೆಯಾಗಿತ್ತು, ಈಗ ಗ್ರಾಮಸ್ಥರು ಮತ್ತು ಮೇಲಾಧಿಕಾರಿಗಳು ಸಹಕಾರದಿಂದ ನಮ್ಮ ಗ್ರಾಮದಲ್ಲಿ ನೂತನ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿದ್ದು ನನಗೆ ತುಂಬಾ ಸಂತೋಷ ತಂದಿದೆ ಪಂಚಾಯಿತಿ ಕಟ್ಟಡವನ್ನು ಅಚ್ಚುಕಟ್ಟಾಗಿ ಉತ್ತಮ ಗುಣಮಟ್ಟದಲ್ಲಿ ಮತ್ತು ಆದಷ್ಟು ಬೇಗನೆ ನಿರ್ಮಿಸಿಕೊಡಲು



ಉದಯವಾಹಿನಿ ಚಿತ್ರ

ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದೇವೇಂದ್ರಪ್ಪ ಹಸನಾಪುರ ಗ್ರಾಮ ಪಂಚಾಯಿತಿ ಸದಸ್ಯರಾದ . ಮರೇಪ್ಪ ನಸಲಾಯಿ, ಚಂದ್ರಾಯ ಊಳ್ಳೆಸೂಗುರು, ಸಂಗನಗೌಡ ಮಾಲಿಪಾಟೀಲ್, ಯಂಕಣ್ಣ ಠಾಣಗುಂದಿ, ಅಮೋಘ ಬಾಗ್ಲಿ, ಗ್ರಾಮದ ಮುಖಂಡರಾದ ತಿಪ್ಪಣ್ಣ ತಿಮ್ಮಣ್ಣ ಗೌಡ್ರು, ವೆಂಕಟರಾಯ ಗೌಡ, ಮಲಗಣ್ಣ ,ಮಾನಸಪ್ಪ ಮೆದರಗಾಳ, ಬಸವರಾಜ್ ದಿವಳಗುಡ್ಡ, ಪರಶುರಾಮ್, ಪ್ರಭುಗೌಡ ,ರಾಯಗೌಡ ಬಿರಾದರ್, ದೇವೇಂದ್ರಪ್ಪ ಕವಲ್ದಾರ್ ಗ್ರಾಮ ಪಂಚಾಯಿತಿ ಸದಸ್ಯರು ಊರಿನ ಮುಖಂಡರು ಪಂಚಾಯಿತಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕೊಲೆ ಪ್ರಕರಣ: ಕಾಲಿಗೆ ಗುಂಡು ಹೊಡೆದು ಇಬ್ಬರ ಬಂಧನ

• **ಉದಯವಾಹಿನಿ, ಹುಬ್ಬಳ್ಳಿ**

ಇಲ್ಲಿನ ಅಶೋಕ ನಗರ ಠಾಣೆ ವ್ಯಾಪ್ತಿಯ ಗೋಪನಕೊಪ್ಪದಲ್ಲಿ ಶುಕ್ರವಾರ ರಾತ್ರಿ ಓರ್ವನನ್ನು ಭೀಕರ ಕೊಲೆ ಮಾಡಿದ್ದ 6-7 ಜನರ ತಂಡದಲ್ಲಿನ ಇಬ್ಬರ ಬೆಳಗ್ಗೆ ಕಾಲಿಗೆ ಗುಂಡು ಹೊಡೆದು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಆರೋಪಿಗಳಾದ ಸುದೀಪ ರಾಯಾಪುರ, ಕಿರಣ ಜಟ್ಟಪ್ಪನವರ ಎಂಬವರನ್ನು ಪೊಲೀಸರು ಗುಂಡು ಹೊಡೆದು ಬಂಧಿಸಿದ್ದಾರೆ. ಇದೇ ವೇಳೆ ಇಬ್ಬರು ಪಿಎಸ್ಐ ಸೇರಿದಂತೆ ಆರು ಪೊಲೀಸರು ಗಾಯಗೊಂಡಿದ್ದು, ಕೆಎಂಸಿಆರ್ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಂಧಿತರು ಸೇರಿದಂತೆ 6-7 ಜನರ ತಂಡವು ಹಳೆ ದ್ವೇಷ ಹಾಗೂ ಹಣಕಾಸಿನ ವಿಚಾರವಾಗಿ ಗೋಪನಕೊಪ್ಪದ ಸಂತೋಷನಗರ ರಸ್ತೆಯಲ್ಲಿ ಶಿವರಾಜ ಕಮ್ಮಾರ (23) ಎಂಬಾತನ



ಉದಯವಾಹಿನಿ ಚಿತ್ರ

**ಪಿಎಸ್ಐ ಸೇರಿದಂತೆ ಆರು ಪೊಲೀಸರಿಗೆ ಗಾಯ**

ಮೇಲೆ ಶುಕ್ರವಾರ ರಾತ್ರಿ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಭೀಕರವಾಗಿ ಕೊಲೆಗೈದು ಪರಾರಿಯಾಗಿದ್ದರು. ಈ ಘಟನೆಗೆ ಸಂಬಂಧಿಸಿ ಮೂವರನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಇನ್ನುಳಿದವರ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿ ಹಳೇಹುಬ್ಬಳ್ಳಿಯ ರೈಲ್ವೆ ಕ್ವಾರ್ಟರ್ಸ್ ಬಳಿ ಪೊಲೀಸರ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಆಗ ಪಿಎಸ್ಐ ಸಾತನ್ನವರ ಸಿಬ್ಬಂದಿಗಳ ರಕ್ಷಣೆಗಾಗಿ ಗಾಳಿಯಲ್ಲಿ ಮೂರು ಸುತ್ತು ಹಾಗೂ ಆರೋಪಿಗಳಾದ ಸುದೀಪ್ ಮತ್ತು ಕಿರಣ್ ಕಾಲಿಗೆ ಮೂರು ಸುತ್ತು ಗುಂಡು ಹೊಡೆದು ಬಂಧಿಸಿದ್ದಾರೆ.

> ಪ್ರಕರಣಕ್ಕೆ ಸಂಬಂಧಿಸಿ ಕೊಲೆಯಾದ ಶಿವರಾಜನ ಕುಟುಂಬಸ್ಥರು ಸುದೀಪ್ ರಾಯಾಪುರ, ಕಿರಣ ಜಟ್ಟಪ್ಪನವರ, ಕಾರ್ತಿಕ, ಅಭಿಷೇಕ ಜಾಧವ ಮೇಲೆ ದೂರು ಕೊಟ್ಟಿದ್ದಾರೆ. ಪೂರ್ವನಿಯೋಜಿತವಾಗಿ 6-7 ಜನರ ತಂಡವು ಲಾಂಗು, ಮಚ್ಚಿನಿಂದ ತಲೆಗೆ ಐದಾರು ಬಾರಿ ಹಾಗೂ ಮೂವತ್ತಕ್ಕೂ ಹೆಚ್ಚು ಸಲ ದೇಹದ ಎಲ್ಲೆಂದರಲ್ಲಿ 30ಕ್ಕೂ ಹೆಚ್ಚು ಬಾರಿ ಚಾಕುವಿನಿಂದ ಇರಿದು ಭೀಕರವಾಗಿ ಹತ್ಯೆಗೈದಿದ್ದಾರೆ. ಹೆಚ್ಚಿನ ತನಿಖೆ ನಡೆಸಿ, ಆದಷ್ಟು ಬೇಗ ಎಲ್ಲರನ್ನೂ ಬಂಧಿಸಲಾಗುವುದು
>
> -ಎನ್. ಶಶಿಕುಮಾರ್, ಪೊಲೀಸ್ ಆಯುಕ್ತ

# ಉತ್ತಮ ಮಾನಸಿಕ ಆರೋಗ್ಯಕ್ಕೆ ಉತ್ತಮ ವಾತಾವರಣ ಅಗತ್ಯ

• **ಉದಯವಾಹಿನಿ, ಚಿತ್ರದುರ್ಗ**

ಯಾವುದೇ ಕೆಲಸಗಳು ಉತ್ತಮವಾದ ರೀತಿಯಲ್ಲಿ ಸಾಗಬೇಕಾದರೆ ಕೆಲಸಮಾಡುವವರ ಮಾನಸಿಕ ಆರೋಗ್ಯ ಚೆನ್ನಾಗಿರಬೇಕು ಅದಕ್ಕಾಗಿ ಯಾವುದೇ ಕೆಲಸಮಾಡುವ ಸ್ಥಳದ ವಾತಾವರಣ ಒತ್ತಡರಹಿತವಾಗಿರಬೇಕು. 2024ರ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಘೋಷವಾಕ್ಯವಾದ ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಸಮಯ ಇದು' ಎಂಬುದಕ್ಕೆ ಅನುಸಾರವಾಗಿ ಸರ್ಕಾರಿ, ಖಾಸಗಿ ಉದ್ಯೋಗದಾತರು ಮತ್ತು ಕಾರ್ಮಿಕರನ್ನು ಪ್ರತಿನಿಧಿಸುವ ಸಂಸ್ಥೆಗಳು ಕೆಲಸದ ಸ್ಥಳದಲ್ಲಿ ಕೆಲಸಗಾಋು ಮಾನಸಿಕ ಆರೋಗ್ಯಕ್ಕೆ ಉತ್ತೇಜನ ನೀಡಲು ಸಹಕರಿಸಬೇಕು ಎಂದು ಜಿಲ್ಲಾ ಮಾನಸಿಕ ಆರೋಗ್ಯಾನುಷ್ಠಾನಾಧಿಕಾರಿ ಡಾ|| ನಾಗರಾಜ್ ಜಿ. ಒ ಅಭಿಪ್ರಾಯ ಪಟ್ಟಿದ್ದಾರೆ.

ಅವರು ದಿನಾಂಕ 10/10/2024ರಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ಚಿತ್ರದುರ್ಗ ವತಿಯಿಂದ ಚಿತ್ರದುರ್ಗ ಹೊರವಲಯದ ಗೊನೂರು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾನಸಿಕ ಆರೋಗ್ಯ ತಪಾಸಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ



ಉದಯವಾಹಿನಿ ಚಿತ್ರ

> ನಿರಾಶ್ರಿತರ ಪರಿಹಾರ ಕೇಂದ್ರದ ನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿ ಮಾತನಾಡಿದ ಜಿಲ್ಲಾಸ್ಪತ್ರೆಯ ಮನೋವೈದ್ಯರಾದ ಡಾ|| ಮಂಜುನಾಥ್ ಆರ್ ಮಾತನಾಡಿ ಇಂದಿನ ಬ್ಯುಸಿ ಜಮಾನದಲ್ಲಿ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಾಗಿರುವುದು ಸುಳ್ಳಲ್ಲ. ಒತ್ತಡ ಎಂಬುದು ಒಂದು ರೀತಿಯ ಸಾಂಕ್ರಾಮಿಕ ಕಾಯಿಲೆಯಂತೆ ಒಬ್ಬರಿಂದ ಒಬ್ಬರಿಗೆ ಹರಡುತ್ತಿದೆ.
>
> -ಡಾ|| ನಾಗರಾಜ್ ಜಿ ಒ, ಜಿಲ್ಲಾ ಮಾನಸಿಕ ಆರೋಗ್ಯಾನುಷ್ಠಾನಾಧಿಕಾರಿ

ಮಾತನಾಡಿದರು. ಈ ಸಂದರ್ಭದಲ್ಲಿ ಮಾನಸಿಕ ಆರೋಗ್ಯದ ಮಹತ್ವ ಅರಿಯುವುದು ಬಹಳ ಮುಖ್ಯವಾಗಿದೆ. ಈ ಕಾರಣದಿಂದಲೇ ಪ್ರತಿವರ್ಷ ಅಕ್ಟೋಬರ್ 10 ರಂದು ವಿಶ್ವ ಮಾನಸಿಕ ಆರೋಗ್ಯ ದಿನ ಆಚರಿಸಲಾಗುತ್ತದೆ.

ಒತ್ತಡವು ಮಾನಸಿಕ ಸಮಸ್ಯೆಯಾದರೂ ಇದರಿಂದ ಹತ್ತಾರು ಆರೋಗ್ಯ ಸಮಸ್ಯೆಗಳು ಶುರುವಾಗುವುದು ಸುಳ್ಳಲ್ಲ. ಒತ್ತಡದಿಂದ ಜೀವನಶೈಲಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಎದುರಾಗುತ್ತವೆ.

ಒತ್ತಡ ಸೇರಿದಂತೆ ಖಿನ್ನತೆ, ಆತಂಕ ಇಂತಹ ಮಾನಸಿಕ ಸಮಸ್ಯೆಗಳು ಅತಿಯಾದ್ರೆ ದೇಹಾರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವುದು ಸುಳ್ಳಲ್ಲ. ಆ ಕಾರಣಕ್ಕೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಹೆಚ್ಚಿನ ಮಹತ್ವ ನೀಡಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸುಮಾರು 125ಕ್ಕೂ ಫಲಾನುಭವಿಗಳಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಜಿಲ್ಲಾಸ್ಪತ್ರೆ ನೇತ್ರತಜ್ಞ ಡಾ|| ಪ್ರದೀಪ್, ನಿರಾಶ್ರಿತರ ಕೇಂದ್ರದ ಅಧಿಕಾರಿಗಳಾದ ಮಹದೇವ್, ವಿಜಯಕುಮಾರ್, ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ, ನೇತ್ರಾಧಿಕಾರಿ ಕೆ.ಸಿ.ರಾಮು, ಚಿಕಿತ್ಸಾ ಮನೋಶಾಸ್ತ್ರಜ್ಞ ಶ್ರೀಧರ್, ಶುಶ್ರೂಷಣಾಧಿಕಾರಿ ರಶ್ಮಿ ಮತ್ತು ಶರತ್ ಹಾಜರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಯೋಗ ತರಬೇತುದಾರರ ರವಿ ಕೆ.ಅಂಬೇಕರ್ ಎಲ್ಲರಿಗೂ ಮಾನಸಿಕ ಆರೋಗ್ಯಕ್ಕೆ ಸಂಭಂಧ ಪಟ್ಟಂತೆ ಸೂಕ್ಷ್ಮ ಯೋಗಾಭ್ಯಾಸ ಹಾಗೂ ಒತ್ತಡ ನಿವಾರಣೆಯ ಪ್ರಾಣಾಯಾಮ ಹಾಗೂ ಧ್ಯಾನ ಮಾಡುವ ವಿಧಾನದ ಬಗ್ಗೆ ತಿಳಿಸಿಕೊಟ್ಟರು.

# ರೈತಪರ ಯೋಜನೆಗಳಿಲ್ಲ, ಸರ್ಕಾರ ನನ್ನ ಗೋಳು ಕೇಳುತ್ತಿಲ್ಲ: ಶಾಸಕ ಕಾಗೆ

• **ಉದಯವಾಹಿನಿ, ಬೆಳಗಾವಿ**



ರೈತರ ಪರ ಯಾವುದೇ ಯೋಜನೆಗಳು ಬರುತ್ತಿಲ್ಲ. ರೈತರು ಬದುಕು ದುಸ್ತರವಾಗಿದೆ ಎಂದು ತಮ್ಮದೇ ಸರ್ಕಾರದ ವಿರುದ್ಧ ಕಾಗವಾಡ ಕಾಂಗ್ರೆಸ್ ಶಾಸಕ ರಾಜು ಕಾಗೆ ಹರಿಹಾಯ್ದಿದ್ದಾರೆ.

ಬೆಳಗಾವಿ ಜಿಲ್ಲೆಯ ಕಾಗವಾಡ ಮತಕ್ಷೇತ್ರದ ತಾವಂಶಿ ಗ್ರಾಮದಲ್ಲಿ ಶನಿವಾರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ವಿಧಾನಸೌಧದಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಓರ್ವ ಮಂತ್ರಿಗೆ ಹೇಳಿದೆ. ನೀನ್ಯಾಕೆ ಆತ್ಮಹತ್ಯೆ ಮಾಡಿಕೊಳ್ಳುತ್ತೀಯಾ, ನಿನ್ನ ಕೆಲಸ ಮಾಡುತ್ತೇವೆಂದು ಹೇಳಿ ಅನುದಾನ ಬಿಡುಗಡೆ ಮಾಡದ ಮಂತ್ರಿಗಳಿದ್ದಾರೆ ಎಂದು ಅನುದಾನ ನೀಡದ ಸ್ವಪಕ್ಷೀಯ ಸಚಿವರ ವಿರುದ್ಧ ರಾಜು ಕಾಗೆ ಗರಂ ಆದರು.

ರೈತರು ಒಂದು ವರ್ಷ ಬೆಳೆಗಳನ್ನು ಬೆಳೆಯುವುದನ್ನು ಬಿಟ್ಟರೆ ನೀವೇನು ತಿನ್ನುತ್ತೀರೀ? ನಿಮ್ಮ ಬಳಿ ರೊಕ್ಕ, ಬಂಗಾರ ಬೆಳ್ಳಿ ಸಾಕಷ್ಟು ಇರಬಹುದು, ಆದರೆ ಅದನ್ನು ತಿನ್ನೋಕಾಗುತ್ತಾ? ಮೊದಲು ರೈತರನ್ನು ಬದುಕಿಸುವ ಕೆಲಸ ಮಾಡಿ.

ರೈತರು ಬದುಕಿದರೆ ಮಾತ್ರ ಈ ದೇಶ ಪ್ರಗತಿ ಹೊಂದಲು ಸಾಧ್ಯವಿದೆ. ಕಳೆದ ಒಂದು ವರ್ಷದಿಂದ ನನ್ನ ಗೋಳನ್ನು ಸರ್ಕಾರ ಆಲಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

# ಅದ್ದೂರಿ ಶರನ್ನವರಾತ್ರಿ ದಶಮಿ ಪೂಜೆ

• **ಉದಯವಾಹಿನಿ, ಚಿಕ್ಕಮಗಳೂರು**



ಉದಯವಾಹಿನಿ ಚಿತ್ರ

ವಿಜಯದಶಮಿ ನಿಮಿತ್ತ ಶೃಂಗೇರಿಯ ಶ್ರೀ ಶಾರದಾ ಪೀಠದ ಶಾಖಾ ಮಠದಲ್ಲಿ ಅದ್ದೂರಿಯಾಗಿ ಶರನ್ನವರಾತ್ರಿ ದಶಮಿ ಪೂಜೆಯನ್ನು ನೆರವೇರಿಸಲಾಯಿತು. ಜಗದ್ಗುರು ವಿಧುಶೇಖರ ಭಾರತೀ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಗಜಪೂಜೆ ಮತ್ತು ಅಶ್ವಪೂಜೆಯನ್ನು ಕೈಗೊಳ್ಳಲಾಯಿತು. ಭಕ್ತಾದಿಗಳು ಶಾರದಾ ಶರನ್ನವರಾತ್ರಿ ಮಹೋತ್ಸವ-2024ರಲ್ಲಿ ಭಾಗವಹಿಸಿ ಮತ್ತು ಮಾತೆ ಜಗದಂಬಾ ಅವರ ಅನುಗ್ರಹವನ್ನು ಪಡೆಯುವಂತೆ ಆಹ್ವಾನಿಸಿದರು.

# ಸೆಲ್ಫಿ ಕ್ರೇಜ್‌ಗೆ ಮತ್ತೊಂದು ಬಲಿ

• **ಉದಯವಾಹಿನಿ, ವಿಜಯನಗರ**

ಇತ್ತೀಚಿಗೆ ಯುವ ಜನತೆ ಮೊಬೈಲ್‌ಗೆ ಎಷ್ಟು ಅಡಿಕ್ಟ್ ಆಗಿದೆ ಎಂದರೆ, ತಮ್ಮ ಪ್ರಾಣ ಹೋಗುತ್ತೆ ಎಂದು ತಿಳಿದಿದ್ದರು ಕೂಡ ಕೆಲವು ಹುಚ್ಚಾಟಗಳನ್ನಾಡುತ್ತಾರೆ. ಇದೀಗ ಕೋಡಿ ಬಿದ್ದಿದ್ದ ಕೆರೆಯಲ್ಲಿ ಯುವಕನೊಬ್ಬ ಸೆಲ್ಫಿ ತೆಗೆಯಲು ಹೋಗಿ ಕಾಲು ಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ವಿಜಯನಗರ ಜಿಲ್ಲೆಯಲ್ಲಿ ನಡೆದಿದೆ. ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗಂಡಬೊಮ್ಮನಹಳ್ಳಿಯ ಚೇತನ್ ಕುಮಾರ್ (21) ಮೃತ ದುರ್ದೈವಿ. ಭಾರಿ ಮಳೆಯಿಂದಾಗಿ ಗಂಡಬೊಮ್ಮನಹಳ್ಳಿ ಕೆರೆ ಸಂಪೂರ್ಣ ಭರ್ತಿಯಾಗಿತ್ತು ಎನ್ನಲಾಗುತ್ತಿದೆ. ಈ ವೇಳೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಕೋಡಿ ಬಿದ್ದ ಕೆರೆಬಳಿ ನಿಂತು ಚೇತನ್ ಕುಮಾರ್ ಸೆಲ್ಫಿ ತೆಗೆದುಕೊಳ್ಳಲು ಮುಂದಾಗಿದ್ದಾನೆ. ಸೆಲ್ಫಿ ತೆಗೆಯುತ್ತಿದ್ದಾಗಲೇ ಕಾಲು ಜಾರಿ ಬಿದ್ದು ಯುವಕ ನೀರುಪಾಲಾಗಿದ್ದಾನೆ.

ತಕ್ಷಣ ಅಕ್ಕಪಕ್ಕದ ಜನರು ರಕ್ಷಣೆಗೆ ಮುಂದಾಗಿದ್ದಾರೆ. ಆದರೂ ಚೇತನ್ ನನ್ನು ಕಾಪಾಡಲು ಆಗಲಿಲ್ಲ ನೋಡನೋಡುತ್ತಿದ್ದಂತೆ ಯುವಕ ರಭಸವಾಗಿ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿ ಹೋಗಿದ್ದಾನೆ. ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇಬ್ಬರು ಪ್ರವಾಸಿಗರ ರಕ್ಷಣೆ

• **ಉದಯವಾಹಿನಿ, ಗೋಕರ್ಣ**

ಪ್ರವಾಸಕ್ಕೆಂದು ಬಂದು ಈಜಲು ಹೋಗಿ ಸಮುದ್ರದಲ್ಲಿ ಕೊಚ್ಚಿ ಹೋಗುತ್ತಿದ್ದ ಇಬ್ಬರು ಪ್ರವಾಸಿಗರನ್ನು ರಕ್ಷಿಸಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣ ಕಡಲ ತೀರದಲ್ಲಿ ನಡೆದಿದೆ.

ಮೈಸೂರು ಮೂಲದ ಅಭಿ ಹಾಗೂ ಆತನ ಸ್ನೇಹಿತನನ್ನು ಲೈಫ್ ಗಾರ್ಡ್ ಸಿಬ್ಬಂದಿ ರಕ್ಷಿಸಿದ್ದಾರೆ. ರಜೆ ಹಿನ್ನೆಲೆಯಲ್ಲಿ ಇಬ್ಬರು ಸ್ನೇಹಿತರು ಗೋಕರ್ಣಕ್ಕೆ ಪ್ರವಾಸಕ್ಕೆ ಬಂದಿದ್ದರು. ಈ ವೇಳೆ ಸಮುದ್ರದ ನೀರಿನಲ್ಲಿ ಈಜಲು ಇಳಿದಿದ್ದಾರೆ. ಅಲೆಗಳ ಹೊಡೆತಕ್ಕೆ ಸಿಲುಕಿ ಇಬ್ಬರೂ ನೀರಿನಲ್ಲಿ ಮುಳುಗುತ್ತಿದ್ದರು.

ಇದನ್ನು ಗಮನಿಸಿದ ಲೈಫ್ ಗಾರ್ಡ್ ಸಿಬ್ಬಂದಿ ಶಿವಪ್ರಸಾದ್ ಹಾಗೂ ಮೋಹನ್ ಎಂಬುವವರು ಇಬ್ಬರನ್ನೂ ರಕ್ಷಿಸಿದ್ದಾರೆ. ಗೋಕರ್ಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಮಲ್ಪೆಯಲ್ಲಿ ಅಕ್ರಮವಾಗಿ ನೆಲೆಸಿದ್ದ 7 ಬಾಂಗ್ಲಾದೇಶದ ಪ್ರಜೆಗಳು ಅಂದರ್

• **ಉದಯವಾಹಿನಿ, ಉಡುಪಿ**

ಕಳೆದ ಮೂರು ವರ್ಷಗಳಿಂದ ಮಲ್ಪೆಯಲ್ಲಿ ಅಕ್ರಮ ವಾಗಿ ನೆಲೆಸಿದ್ದ7 ಮಂದಿ ಬಾಂಗ್ಲಾದೇಶಿ ಪ್ರಜೆಗಳನ್ನು ಉಡುಪಿ ಪೊಲೀಸರು ಬಂಧಿಸಿದ್ದಾರೆ. ಮೀನುಗಾರಿಕಾ ಉದ್ಯೋಗ ಅರಿಸಿಕೊಂಡು ಬಂದಿದ್ದ ಬಾಂಗ್ಲಾದೇಶೀಯರನ್ನು ಮಲ್ಪೆ ವಡಬಾಂಡೇಶ್ವರ ಬಸ್ ನಿಲ್ದಾಣ ಬಳಿ ವಶಕ್ಕೆ ಪಡೆದಿದ್ದಾರೆ.

ಹಕೀಂ ಅಲಿ, ಸುಜೋನ್, ಇಸ್ಮಾಯಿಲ್, ಕರೀಂ, ಸಲಾಂ, ರಾಜಿಕುಲ್, ಮೊಹಮ್ಮದ್ ಸೋಜಿಬ್, ಕಾಜೋಲ್, ಉಸ್ಮಾನ್ ಬಂಧಿತರು. ಆರೋಪಿಗಳ ಪೈಕಿ ಉಸ್ಮಾನ್ ಕರೆತಂದು ಉದ್ಯೋಗಕ್ಕೆ ವ್ಯವಸ್ಥೆ ಮಾಡಿದ್ದ. ಆರೋಪಿಗಳು



ಉದಯವಾಹಿನಿ ಚಿತ್ರ

ಸಿಕ್ಕಿಂನಲ್ಲಿ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿದ್ದರು. ಬಂಧನಕ್ಕೆ ಒಳಗಾಗಿರುವ ಮಾಣಿಕ್ ಹುಸೈನ್ ನಕಲಿ ಪಾಸ್‌ಪೋರ್ಟ್ ಬಳಸಿ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ದುಬೈ ಪರಾರಿಯಾಗಲು ಯತ್ನಿಸಿದ್ದ. ವಿಮಾನ ನಿಲ್ದಾಣದಲ್ಲಿ ದಾಖಲಾತಿ ಪರಿಶೀಲಿಸುವ ಸಂದರ್ಭದಲ್ಲಿ ಅನುಮಾನಗೊಂಡ ಅಧಿಕಾರಿಗಳು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಈ ವೇಳೆ ಆತ ಅಕ್ರಮವಾಗಿ ಬಾಂಗ್ಲಾದೇಶದಿಂದ ನುಸುಳಿ ನಕಲಿ ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಪಡೆದ ವಿಚಾರ ಬೆಳಕಿಗೆ ಬಂದಿದೆ.

ಕೂಡಲೇ ವಿಮಾನ ನಿಲ್ದಾಣದ ಅಧಿಕಾರಿಗಳು ಈತನ ಬಗ್ಗೆ ಬಜ್ಪೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆತ ನೀಡಿದ ಮಾಹಿತಿ ಆಧಾರದಲ್ಲಿ ಮತ್ತೆ 6 ಮಂದಿಯನ್ನು ಉಡುಪಿಯ ಮಲ್ಪೆ ಪೊಲೀಸರು ಬಂಧಿಸಿದ್ದಾರೆ.

# ಕೋಟೆ ನಾಡಲ್ಲಿ ಬೊಂಬೆಗಳ ವಿಶೇಷ ದಸರಾ ಹಬ್ಬ

### ನವರಾತ್ರಿಯ 9 ದಿನಗಳ ಕಾಲ ಪಟ್ಟದ ಗೊಂಬೆಗಳನ್ನು ಕೂರಿಸಿ, ನೆರೆ ಹೊರೆಯವರನ್ನು ಕರೆದು ಸಂಭ್ರಮ

• **ಉದಯವಾಹಿನಿ, ಚಿತ್ರದುರ್ಗ**

ನಾಡಿನಾದ್ಯಂತ ನವರಾತ್ರಿ ಸಂಭ್ರಮವನ್ನು ವಿವಿಧ ಆಚರಣೆ ಮೂಲಕ ಆಚರಿಸಲಾಗುತ್ತದೆ. ಅದರಲ್ಲೂ ಕೋಟೆ ನಾಡಾದ ಕರ್ನಾಟಕದ ಮಧ್ಯಭಾಗದ ಚಿತ್ರದುರ್ಗದಲ್ಲಿ ದಸರಾ ನವರಾತ್ರಿ ಹಾಗೂ ವಿಜಯದಶಮಿಯ ಆಕರ್ಷಣೆ ಎಂದರೆ 10 ದಿನಗಳ ಕಾಲ ಆಚರಿಸಲಾಗುವ ಬೊಂಬೆ ಹಬ್ಬ ದಸರಾ ಹಬ್ಬದ ವಿಜಯದಶಮಿಯ ದಿನವಾದ ಶನಿವಾರ ಬೊಂಬೆಗಳಿಗೆ ಬನ್ನಿಪತ್ರೆ ಕುಡಿಸುವುದರೊಂದಿಗೆ ದಸರಾ ಹಬ್ಬಕ್ಕೆ ತೆರೆ ಎಳೆಯಲಾಯಿತು.

ಬೊಂಬೆ ಹಬ್ಬವನ್ನು ಹಳೆ ಚಿತ್ರದುರ್ಗದ ಚಿಕ್ಕ ಪೇಟೆಯ ಕೋಟೆ ರಸ್ತೆಯ ಕೆಲವು ಮನೆಗಳಲ್ಲಿ ಇಂದಿಗೂ ಕಾಣಬಹುದು. ನವರಾತ್ರಿಯ 9 ದಿನಗಳ ಕಾಲ ಪಟ್ಟದ ಗೊಂಬೆಗಳನ್ನು ಕೂರಿಸಿ, ನೆರೆ ಹೊರೆಯವರನ್ನು ಕರೆದು ಸಂಭ್ರಮಿಸಲಾಗುವುದು.

ಇದೇ ವೇಳೆ ಯುವತಿಯರಿಗೆ ಗೊಂಬೆ ಬಾಗಿನವನ್ನು ಕೂಡ ಅರ್ಪಿಸಲಾಗುವುದು. ತಲೆಮಾರುಗಳಿಂದ ಕಾಪಾಡಿಕೊಂಡು ಬಂದ ಗೊಂಬೆಗಳನ್ನು ದಸರಾ ಆರಂಭಕ್ಕೂ ಮುನ್ನ ಬೊಂಬೆಗಳನ್ನು ಪೆಟ್ಟಿಗೆಯಿಂದ ತೆಗೆದು ಶುಚಿಗೊಳಿಸಿ, ಅದಕ್ಕೆ ಅಲಂಕಾರ ಮಾಡಲಾಗುವುದು. ಗೊಂಬೆ ಹಬ್ಬವನ್ನು ಹೀಗೇ ಗೊಂಬೆಗಳನ್ನು ಜೋಡಿಸಬೇಕು. ಇಂತಹ ಗೊಂಬೆಗಳೇ ಇರಬೇಕು ಎಂಬ ಸಂಪ್ರ



ಉದಯವಾಹಿನಿ ಚಿತ್ರ

**ಗೊಂಬೆಗಳಲ್ಲಿ ಕಥೆಯನ್ನು ರಚಿಸುವುದು ಮತ್ತೊಂದು ವಿಶೇಷ**

ದಾಯ ಇರದಿದ್ದರೂ ಸಾಮಾನ್ಯವಾಗಿ ಪಟ್ಟದ ರಾಜ, ರಾಣಿ, ದೇವರುಗಳ ಮೂರ್ತಿಗಳನ್ನು ಕಾಣಬಹುದಾಗಿದೆ. ಮಹಿಳೆಯರ ಸೃಜನಶೀಲತೆಗೆ ತಕ್ಕಂತೆ ಈ ಗೊಂಬೆಗಳಲ್ಲಿ ಕಥೆಯನ್ನು ರಚಿಸುವುದು ಇದರ ಮತ್ತೊಂದು ವಿಶೇಷ. ಈ ಮೂಲಕ ಮುಂದಿನ ಪೀಳಿಗೆಗೆ ಈ ನಾಡಿನ ಶ್ರೀಮಂತ ಸಂಸ್ಕೃತಿ ಮತ್ತು ಪುರಾಣಗಳನ್ನು ಪರಿಚಯಿಸಲಾಗುವುದು ಮೂರು-ಐದು ಅಂತಸ್ತಿನ ಹಂತ ನಿರ್ಮಾಣ ಮಾಡಿ, ಪ್ರತಿ ಸಾಲಿನಲ್ಲೂ ಗೊಂಬೆಗಳ ಜೋಡಿಸುವ ಮೂಲಕ ಒಂದೊಂದು ಸಾಲಿನಲ್ಲೂ ಒಂದು ಪುರಾಣ ಅಥವಾ ಇನ್ನಿತರ ಕಥೆಗಳು ಹೇಳುವಂತೆ ಗೊಂಬೆ ಜೋಡಿಸಲಾಗುವುದು.

ನವರಾತ್ರಿಯ ಒಂಬತ್ತು ರಾತ್ರಿಗಳನ್ನು ಸೂಚಿಸಲು ಅನೇಕ ಮನೆಗಳು ಗೊಂಬೆಗಳ ಪ್ರದರ್ಶನಕ್ಕಾಗಿ ಒಂಬತ್ತು ಹಂತಗಳನ್ನು

**ಪ್ರತಿದಿನ ವಿಶೇಷ ನೈವೇದ್ಯ**

ನವರಾತ್ರಿಯ ಒಂಭತ್ತು ದಿನಗಳು ಪ್ರತಿದಿನ ಒಂದೊಂದು ಬಗೆಯ ವಿಶೇಷ ನೈವೇದ್ಯದೊಂದಿಗೆ ಚಾಮುಂಡೇಶ್ವರಿದೇವಿ ಹಾಗೂ ಬೊಂಬೆಗಳಿಗೆ ಪೂಜಿಸಲಾಯಿತು. ದಸರಾ ಹಬ್ಬದ ಹತ್ತನೇ ಹಾಗೂ ಕೊನೆಯ ದಿನವಾದ ವಿಜಯದಶಮಿಯ ದಿನವಾದ ಶನಿವಾರ ತಾಯಿ ಚಾಮುಂಡೇಶ್ವರಿ ದೇವಿಗೆ ಬನ್ನಿಪತ್ರೆ ಮುಡಿಸುವುದರೊಂದಿಗೆ ಬೊಂಬೆಗಳ ದಸರಾ ಹಬ್ಬಕ್ಕೆ ತೆರೆ ಎಳೆಯಲಾಯಿತು.

ಬಳಸಲಾಗುವುದು. ಆಚರಣೆಯ ಸಂದರ್ಭದಲ್ಲಿ ಗೊಂಬೆಗಳನ್ನು ಶಾಸ್ತ್ರೋಕ್ತವಾಗಿ ಪೂಜಿಸಲಾಗುತ್ತದೆ. ಗೊಂಬೆ ಕೂರಿಸುವ ಮನೆಯಲ್ಲಿ ಒಂಬತ್ತು ದಿನಗಳ ಸಂಭ್ರಮದ ಮನೆ ಮಾಡುತ್ತದೆ. ಸಂಜೆಯಾದರೆ ಚಿಣ್ಣರು, ಮುತ್ತೈದೆಯರು, ಯುವತಿಯರು ಈ ಗೊಂಬೆ ನೋಡಲು ಮನೆ ಮನೆಗೆ ಹೋಗುವ ಪರಿಪಾಠ ಇದೆ.

ಈ ವೇಳೆ ಹಾಡು, ಭಜನೆ ಜೊತೆ ಸಿಹಿ ತಿಂಡಿ, ಆಟಿಕೆ, ಉಡುಗೊರೆಗಳನ್ನು ನೀಡಲಾಗುವುದು.

ಸಾಂಪ್ರದಾಯಿಕ ಗೊಂಬೆ, ಮರದ ಮತ್ತು ಮಣ್ಣಿನ ಗೊಂಬೆ ಜೊತೆ ಪ್ಲಾಸ್ಟಿಕ್ ಗೊಂಬೆಗಳು ಈ ಸಾಲಿನಲ್ಲಿ ನಿಲ್ಲುತ್ತಿವೆ.

# ಜೈಲಲ್ಲಿ ನಟ ದರ್ಶನ್‌ಗೆ ಕಾಟ ಕೊಟ್ಟಿದ್ದ ರೇಣುಕಾಸ್ವಾಮಿಯ ಪ್ರೇತಾತ್ಮ, ಮಂಗಳೂರಲ್ಲಿ ಪ್ರತ್ಯಕ್ಷ

• **ಉದಯವಾಹಿನಿ, ಮಂಗಳೂರು**

ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ನಟ ದರ್ಶನವರು ಬಳ್ಳಾರಿ ಜೈಲಿನಲ್ಲಿ ಇದ್ದಾರೆ. ಅವರಿಗೆ ತೀವ್ರವಾಗಿ ಬೆನ್ನು ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯ ವೈದ್ಯರು, ಅವರನ್ನು ತಪಾಸಣೆ ಮಾಡಿ ಸ್ಕ್ಯಾನಿಂಗ್ ಮಾಡಿಸಿಕೊಳ್ಳುವಂತೆ ಎಷ್ಟೇ ಹೇಳಿದರು ಕೂಡ ಅವರು ಬೇಡ ಬೆಂಗಳೂರಿಗೆ ಹೋಗಿ ನಾನು ಸ್ಕ್ಯಾನಿಂಗ್ ಮಾಡಿಸಿಕೊಳ್ಳುತ್ತೇನೆ ಎಂದು ಹಠ ಹಿಡಿದಿದ್ದಾರೆ.

ಅಲ್ಲದೆ ನಟ ದರ್ಶನ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ 54ನೇ ಸಿಸಿಎಚ್ ಕೋರ್ಟ್, ವಿಚಾರಣೆಯ ಬಳಿಕ ಅಕ್ಟೋಬರ್ 14ರಂದು ತೀರ್ಪು ಕಾಯ್ದಿರಿಸಿ ಆದೇಶ ನೀಡಿದೆ. ಇದರ ಮಧ್ಯ ಜೈಲಿನಲ್ಲಿ ಆಗಾಗ ದರ್ಶನ್‌ಗೆ ರೇಣುಕಾ ಸ್ವಾಮಿಯ ಆತ್ಮ ಕಾಟ ಕೊಡುತ್ತಿದೆ ಎಂಬ ಗಾಳಿ ಸುದ್ದಿ ಹರಡಿತ್ತು. ಇದು ಎಷ್ಟು ಸತ್ಯವೋ ಅಥವಾ ಮಿಥ್ಯವೋ ಎಂಬುದು ಗೊತ್ತಿಲ್ಲ. ಆದರೆ ರೇಣುಕಾ ಸ್ವಾಮಿಯ ಆತ್ಮ ನಟ ದರ್ಶನ್ ಅವರಿಗೆ ಕಾಟ ಕೊಡುತ್ತಿತ್ತು ಎಂಬ ಊಹಾಪೋಹಗಳು ಎದ್ದಿದ್ದವು.

ಇದೀಗ ದರ್ಶನ್ ಹಾಗೂ ಗ್ಯಾಂಗ್‌ನಿಂದ ಕೊಲೆಯಾಗಿದ್ದಾರೆ ಎನ್ನಲಾದ ಚಿತ್ರದುರ್ಗದ ರೇಣುಕಾಸ್ವಾಮಿ ಕೂಡ ಈಗ ನವರಾತ್ರಿ ವೇಷದ ಥೀಮ್ ಸಾಮಾಜಿಕ ಜಾಲತಾಣದಲ್ಲಿ ಸಕತ್ ವೈರಲ್ ಆಗುತ್ತಿದೆ. ರೇಣುಕಾಸ್ವಾಮಿಯ ಪ್ರೇತಾತ್ಮ ಎಂಬಂತೆ ಬಿಂಬಿತವಾದ ನವರಾತ್ರಿ ವೇಷವೊಂದು ಕರಾವಳಿ ಕರ್ನಾಟಕದ ಮಂಗಳೂರು ಸುತ್ತಮುತ್ತ ಮನೆ ಮನೆ ಸಂಚರಿಸಿದ್ದು, ವಿಡಿಯೋ ಈಗ ವೈರಲ್ ಆಗುತ್ತಿದೆ.



ಉದಯವಾಹಿನಿ ಚಿತ್ರ

**ತುಳು ಭಾಷೆಯ ವೇಷಧಾರಿಗಳು**

ಹೌದು ಯಮನ ಜೊತೆ ಭೂಲೋಕಕ್ಕೆ ಬಂದ ಪ್ರೇತಾತ್ಮ, ಭೂಲೋಕದಲ್ಲಿ ತನಗೆ ಹಿಂಸೆ ನೀಡಿದವರನ್ನು ಕರೆದೊಯ್ಯಲು ಬಂದಂತೆ ಚಿತ್ರಣ ಮಾಡಲಾಗಿದೆ. ಸಾಮಾನ್ಯವಾಗಿ ಕರಾವಳಿಯಲ್ಲಿ ನವರಾತ್ರಿ ಸಂದರ್ಭ ವಿವಿಧ ವೇಷ ಹಾಕಿ ವೇಷಧಾರಿಗಳು ಮನೋರಂಜನೆ ನೀಡುತ್ತಾರೆ. ಈ ಬಾರಿ ವ್ಯಕ್ತಿಗಳಿಬ್ಬರು ರೇಣುಕಾಸ್ವಾಮಿ ಪ್ರೇತಾತ್ಮ ಹಾಗೂ ಯಮನ ವೇಷ ಧಾರಣೆ ಮಾಡಿ ಬಂದಿದ್ದಾರೆ. ಚಿತ್ರಹಿಂಸೆ ನೀಡಿದವರನ್ನು ಕರೆದೊಯ್ಯಲು ಬಂದಿದ್ದೇವೆ ಎಂಬ ಅರ್ಥ ಬರುವಂತೆ ತುಳು ಭಾಷೆಯಲ್ಲಿ ವೇಷಧಾರಿಗಳು ಮಾತನಾಡಿಕೊಂಡಿದ್ದಾರೆ.

# ಡೆಟ್ರಾಯಿಟ್ ಎಕನಾಮಿಕ್ ಕ್ಲಬ್‌ನಲ್ಲಿ ಆರ್ಥಿಕ ನೀತಿಗಳ ಕುರಿತು ಭಾಷಣ


## ● ಗೆದ್ದರೆ ಭಾರತದ ವಸ್ತುಗಳ ಮೇಲೆ ತೆರಿಗೆ': ಮೋದಿ 'ಮಿತ್ರ' ಎನ್ನುತ್ತಲೇ ಎಚ್ಚರಿಕೆ ಕೊಟ್ಟ ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್:** ತಾವು ಅಧಿಕಾರಕ್ಕೆ ಮರಳಿದರೆ ಪರಸ್ಪರ ತೆರಿಗೆಯನ್ನು ಜಾರಿಗೊಳಿಸುವುದಾಗಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಎಲ್ಲಾ ಪ್ರಮುಖ ದೇಶಗಳ ನಡುವೆ ಭಾರತವು ವಿದೇಶಿ ಉತ್ಪನ್ನಗಳ ಮೇಲೆ ಅತ್ಯಧಿಕ ತೆರಿಗೆ ಟಾರಿಫ್ ವಿಧಿಸುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ.

ಅಮೆರಿಕವನ್ನು ಮತ್ತೊಮ್ಮೆ ಅಸಾಧಾರಣ ಸಂಪತ್ತಿನ ರಾಷ್ಟ್ರವನ್ನಾಗಿ ಮಾಡುವ ನನ್ನ ಆಲೋಚನೆಯಲ್ಲಿ ಅತ್ಯಂತ ಪ್ರಮುಖವಾದ ಅಂಶವೆಂದರೆ ಬಹುಶಃ ಪ್ರತಿ ತೆರಿಗೆ. ಇದು ನನ್ನ ಯೋಜನೆಗಳಲ್ಲಿ ಬಹಳ ಮುಖ್ಯವಾದ ಪದ. ಏಕೆಂದರೆ ಸಾಮಾನ್ಯವಾಗಿ ನಾವು ಟಾರಿಫ್ ವಿಧಿಸುವುದಿಲ್ಲ. ನಾನು ವ್ಯಾನ್, ಸಣ್ಣ ಟ್ರಕ್‌ಗಳು ಇತ್ಯಾದಿಗಳ ಮೂಲಕ ಆ ಪ್ರಕ್ರಿಯೆಯನ್ನು ಆರಂಭಿಸಿದ್ದೆ. ನಾನು ನಿಜಕ್ಕೂ ತೆರಿ ಗೆ ಹಾಕುವುದಿಲ್ಲ. ಚೀನಾ ನಮ್ಮ ಮೇಲೆ ಶೇ 200 ರಷ್ಟು ಟಾರಿಫ್ ವಿಧಿಸುತ್ತದೆ. ಬ್ರೆಜಿಲ್ ದೊಡ್ಡ ತೆರಿಗೆ ವಿಧಿಸುತ್ತದೆ. ಆದರೆ ಅತಿ ದೊಡ್ಡ ಟಾರಿಫ್ ವಿಧಿಸುವುದೆಂದರೆ ಭಾರತ ಎಂದು ಡೆಟ್ರಾಯಿಟ್‌ನಲ್ಲಿ ಪ್ರಮುಖ ಆರ್ಥಿಕ ನೀತಿ ಕುರಿತ ಭಾಷಣದಲ್ಲಿ ಕಿಡಿಕಾರಿದ್ದಾರೆ.

ಭಾರತ ಅತಿ ದೊಡ್ಡ ತೆರಿಗೆ ವಿಧಿಸುತ್ತದೆ. ನಾವು ಭಾರತದ ಜತೆ ಅದ್ಭುತ ಸಂಬಂಧ ಹೊಂದಿದ್ದೇವೆ. ನಾನೂ ಹೊಂದಿದ್ದೆ. ಮುಖ್ಯವಾಗಿ ಅಲ್ಲಿನ ನಾಯಕ ಮೋದಿ (ಪ್ರಧಾನಿ ನರೇಂದ್ರ ಮೋದಿ). ಮಹಾನ್ ವ್ಯಕ್ತಿ. ನಿಜಕ್ಕೂ ಆತ ಮಹಾನ್ ವ್ಯಕ್ತಿ. ಅವರು ಇದನ್ನು ಜತೆಗೂಡಿಸಿದರು. ಅವರು ಅದ್ಭುತ ಕೆಲಸ ಮಾಡಿದ್ದಾರೆ. ಆದರೆ ಅವರು ವಿಪರೀತ ತೆರಿಗೆ ವಿಧಿಸುತ್ತಿದ್ದಾರೆ ಎಂದು ಮೋದಿ ಅವರನ್ನು ಹೊಗಳುತ್ತಲೇ ಭಾರತದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಹಾರ್ಲೆ ಡೇವಿಸನ್ ಕಥೆ:** ನನ್ನ ಮಾತಿನ ಅರ್ಥ, ಬಹುಶಃ ಅವರು ಅನೇಕ ರೀತಿಗಳಲ್ಲಿ ಚೀನಾಕ್ಕಿಂತಲೂ ಅಧಿಕ ಟಾರಿಫ್ ಹಾಕುತ್ತಿದ್ದಾರೆ ಎನ್ನುವುದು ನನ್ನ ಅನಿಸಿಕೆ. ಆದರೆ ಅವರು ಅದನ್ನು ನಗುವಿನೊಂದಿಗೆ ಮಾಡುತ್ತಿದ್ದಾರೆ. ಇದು ಒಂದು ರೀತಿ ನಯವಾದ ತೆರಿಗೆ. ಭಾರತದಿಂದ ಖರೀದಿಸಿದ್ದಕ್ಕಾಗಿ ಧನ್ಯವಾದಗಳು ಎಂದು ಅವರು ಹೇಳುತ್ತಾರೆ. ನನ್ನ ಎರಡು ಅಥವಾ ಮೂರನೇ ವರ್ಷದ ವೇಳೆ ಶ್ವೇತ ಭವನಕ್ಕೆ



**ಭಾರತವು ಅಮೆರಿಕದ ಉತ್ಪನ್ನಗಳಿಗೆ ಅತ್ಯಧಿಕ ತೆರಿಗೆಯನ್ನು ವಿಧಿಸುತ್ತಿದೆ. ಆದರೆ ಅಮೆರಿಕವು ಯಾವ ತೆರಿಗೆಯನ್ನೂ ವಿಧಿಸುತ್ತಿಲ್ಲ. ನಾನು ಮತ್ತೆ ಅಧಿಕಾರಕ್ಕೆ ಬಂದರೆ ಪ್ರತಿ ತೆರಿಗೆಯನ್ನು ವಿಧಿಸುತ್ತೇನೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅದಕ್ಕೆ ಅವರು ಹಾರ್ಲೆ ಡೇವಿಸನ್ ಬೈಕ್ ಕಂಪೆನಿ ಎದುರಿಸಿದ ಸಂಕಷ್ಟವನ್ನು ಉದಾಹರಣೆಯಾಗಿ ನೀಡಿದ್ದಾರೆ. ಭಾರತದವರು ನಗುತ್ತಲೇ ಟಾರಿಫ್ ಹಾಕುತ್ತಾರೆ ಎಂದು ಕಿಡಿಕಾರಿದ್ದಾರೆ.**

ಬಹಳ ಹಿಂದೆ ಹಾರ್ಲೆ ಡೇವಿಸನ್ ಬಂದಿತ್ತು. ನಾನು ಅವರನ್ನು ಭೇಟಿ ಮಾಡಿದ್ದೆ. ಅವರು ವಿಸ್ಕನ್ಸಿನ್ ಮೂಲದವರು. 'ಹೇಗಿದೆ ವ್ಯವಹಾರ' ಎಂದು ಕೇಳಿದೆ. ಚೆನ್ನಾಗಿದೆ ಎಂದರು. 'ಯಾವುದೆಲ್ಲ ಕೆಟ್ಟ ದೇಶಗಳು' ಎಂದು ಕೇಳಿದೆ. 'ಭಾರತ ಬಹಳ ಕಠಿಣ' ಎಂದರು. ಇನ್ನೂ ಕೆಲವು ದೇಶಗಳನ್ನು

- **ಅಧಿಕಾರಕ್ಕೆ ಬಂದರೆ ಉತ್ಪನ್ನಗಳ ಮೇಲಿನ ತೆರಿಗೆಗೆ ಪ್ರತಿ ಟಾರಿಫ್ ವಿಧಿಸುವುದಾಗಿ ಟ್ರಂಪ್ ಹೇಳಿಕೆ**
- **ಅತಿ ಹೆಚ್ಚು ಟಾರಿಫ್ ವಿಧಿಸುವುದು ಭಾರತ, ಅದರ ಜತೆ ನಾವು ಬಹಳ ಒಳ್ಳೆ ಸಂಬಂಧ ಹೊಂದಿದ್ದೇವೆ**

ಹೆಸರಿಸಿದರು. ಏಕೆ? ಟಾರಿಫ್‌ಗಳು. ಅದು ಎಷ್ಟಿದೆ ಎಂದು ಕೇಳಿದೆ ಶೇ 150ರ ಹಾಗಿದೆ, ಬಹಳ ದೊಡ್ಡ ಬೆಲೆ' ಎಂದರು ಎಂಬುದಾಗಿ ಡೆಟ್ರಾಯಿಟ್ ಎಕಾನಾಮಿಕ್ ಕ್ಲಬ್‌ನ ಸದಸ್ಯರಿಗೆ ಟ್ರಂಪ್ ಹೇಳಿದ್ದಾರೆ. ಹಾರ್ಲೆಯನ್ನು ಖರೀದಿಸಲು ಜನ ಬಯಸಿದ್ದಾರೆ ಎಂದು ಬಯ ಸಿರುತ್ತೀರಿ. ಹೀಗಾಗಿ ಅನೇಕ ಮೋಟಾರ್ ಸೈಕಲ್‌ಗಳನ್ನು ಮಾರಾಟ ಮಾಡಿರುತ್ತೀರಾ? ಎಂದು ಕೇಳಿದೆ. 'ಇಲ್ಲ, ಭಾರತದಲ್ಲಿ ಬಹಳ ಕಡಿಮೆ. ಆದರೆ ಅಲ್ಲಿಗೆ ಹೋಗಲು ಬಯಸಿದ್ದೇವೆ. ನೀವು ಇಲ್ಲಿಗೆ (ಭಾರತಕ್ಕೆ) ಬಂದು, ಘಟಕ ಆರಂಭಿಸಿದರೆ ನಿಮ್ಮ ಮೇಲೆ ಯಾವ ತೆರಿಗೆಯನ್ನೂ ವಿಧಿಸುವುದಿಲ್ಲ ಎನ್ನುತ್ತಾರೆ' ಎಂದು ತಿಳಿಸಿದರು.

ನೀವು ಏನು ಬಯಸಿದ್ದೀರೋ ಮಾಡಬಹುದು. ನನಗೆ ಅದು ಇಷ್ಟವಾಗುವುದಿಲ್ಲ ಎಂದಿದ್ದೆ. ಅವರು ಭಾರತಕ್ಕೆ ಹೋದರು, ಘಟಕ ಸ್ಥಾಪಿಸಿದರು. ಭಾರತದೊಂದಿಗೆ ವ್ಯವಹಾರ ಕೂಡ ಮಾಡುತ್ತಿದ್ದಾರೆ. ಭಾರತದ ಹೊರಗೆ ಕೂಡ ಅವರು ಮಾಡಿರಬಹುದು. ಅವರು ಅನೇಕ ದೇಶಗಳಲ್ಲಿ ಬಹಳ ದೊಡ್ಡ ಘಟಕಗಳನ್ನು ಸ್ಥಾಪಿಸಿದ್ದಾರೆ. ಬಳಿಕ ಇದ್ದಕ್ಕಿದ್ದಂತೆ ಅವರು ಮಿಲ್ವಾಕೀಯಿಂದ ನಿರ್ಗಮಿಸುವ ಸುದ್ದಿ ಕೇಳಿಸಿದೆ ಎಂದಿದ್ದಾರೆ.

**ಮೋದಿಯನ್ನು ಶ್ಲಾಘಿಸಿದ್ದ ಟ್ರಂಪ್:** ಅಮೆರಿಕ ಚುನಾವಣೆಯಲ್ಲಿ ಭಾರತೀಯ ಸಮುದಾಯದ ಮತಗಳು ಕೂಡ ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಹೀಗಾಗಿ ಎರಡೂ ಪಕ್ಷಗಳ ನಾಯಕರು ಭಾರತೀಯ ಸಮುದಾಯವನ್ನು ಓಲೈಸುವ ಪ್ರಯತ್ನ ಮಾಡುತ್ತಿದ್ದಾರೆ. ಕಳೆದ ವಾರವಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟ್ರಂಪ್ ಕೊಂಡಾಡಿದ್ದರು.

ಮೋದಿ, ಭಾರತ. ಅವರು ನನ್ನ ಸ್ನೇಹಿತ. ಅವರು ಮಹಾನ್ ವ್ಯಕ್ತಿ. ಮೋದಿಗೂ ಮುನ್ನ ಅವರು ಪ್ರತಿ ವರ್ಷ ನಾಯಕರನ್ನು ಬದಲಿಸುತ್ತಿದ್ದರು. ಅದು ಬಹಳ ಅಸ್ಥಿರವಾಗಿತ್ತು. ಮೋದಿ ಬೆಳೆದು ಬಂದರು. ಅವರು ನನ್ನ ಸ್ನೇಹಿತ. ಆದರೆ ಹೊರಗೆ, ಅವರು ನಿಮ್ಮ ತಂದೆಯಂತೆ ಕಾಣಿಸುತ್ತಾರೆ. ಅವರು ಬಹಳ ಒಳ್ಳೆಯ ಮಾನವೀಯ ವ್ಯಕ್ತಿ ಎಂದು ಹೇಳಿದ್ದರು.

## ಬೈರೂತ್‌ನಲ್ಲಿ ಇಸ್ರೇಲ್ ವಾಯು ದಾಳಿ, 22 ಮಂದಿ ದಾರುಣ ಸಾವು

**ಬೈರೂತ್:** ಇಸ್ರೇಲ್ ಸೇನೆಯು ಸೆಂಟ್ರಲ್ ಬೈರೂತ್‌ನ ವಿಶ್ವಸಂಸ್ಥೆ ಶಾಂತಿಪಾಲನಾ ಪ್ರಧಾನ ಕಚೇರಿ ಮೇಲೆ ನಡೆಸಿದ ಭೀಕರ ವೈಮಾನಿಕ ದಾಳಿಯಲ್ಲಿ 22 ಮಂದಿ ಹತ್ಯೆಯಾಗಿದ್ದು, ಸುಮಾ ರು 117 ಮಂದಿ ಗಾಯಗೊಂಡಿದ್ದಾರೆ.

ರಾಸ್ ಅಲಾ -ನಬಾ ಪ್ರದೇಶ ಮತ್ತು ಬುರ್ಜ್ ಅಬಿ ಹೈದರ್ ಪ್ರದೇಶ, ಮತ್ತು ಎಂಟು ಅಂತಸ್ತಿನ ಕಟ್ಟಡವನ್ನು ನೆಲಸಮಗೊಳಿಸಿತು. ಸೆಪ್ಟೆಂಬರ್ ಅಂತ್ಯದಲ್ಲಿ ಮಿಲಿಟರಿ ಕಾರ್ಯಾಚರಣೆಯನ್ನು ವಿಸ್ತರಿಸಿದ ನಂತರ ಬೈರೂತ್‌ನ ದಕ್ಷಿಣ ಉಪನಗರವಾದ ದಹಿಯೆಹ್ ಹೊರಗೆ ಇದು ಮೂರನೇ ಇಸ್ರೇಲಿ ದಾಳಿಯನ್ನು ಸೂಚಿಸುತ್ತದೆ. ಅದೃಷ್ಟವಶಾತ್ ಈ ದಾಳಿಯಲ್ಲಿ ಹಿಜ್ಬುಲ್ಲಾದ ಉನ್ನತ ಅಧಿಕಾರಿಯೊಬ್ಬರು ಬದುಕುಳಿದಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿಕೊಂಡಿದೆ. ಸ್ಥಳೀಯ ಸುದ್ದಿ ಸಂಸ್ಥೆಗಳು ಪ್ರಕಟಿಸಿದ ಮತ್ತು ಅಲ್ ಜಜೀರಾದ ಸತ್ಯಶೋಧನಾ ಸಂಸ್ಥೆ ಪರಿಶೀಲಿಸಿದ ವೀಡಿಯೋಗಳು ದಾಳಿಯ ನಂತರದ ಗೊಂದಲಮಯ ದೃಶ್ಯಗಳನ್ನು ತೋರಿಸುತ್ತವೆ, ರಾಸ್ ಅಲ್ಲಾ -ನಬಾ ಮತ್ತು ಅಲ್ಲಾ -ನುವೇರಿಯ ವಸತಿ ಬ್ಲಾಕ್‌ಗಳನ್ನು ಹೊಗೆ ಮತ್ತು ಜ್ವಾಲೆಗಳು ಆವರಿಸಿವೆ. ಕಳೆದ 1 ವರ್ಷದಲ್ಲಿ ಇಸ್ರೇಲ್ ನಡೆಸಿದ ಮಾರಣಾಂತಿಕ ದಾಳಿಗಳಲ್ಲಿ ಇದೂ ಒಂದು ಎನ್ನಲಾಗಿದೆ.



ದಾಳಿಯಿಂದ ಲೆಬನಾನ್‌ನಲ್ಲಿ ವಿಶ್ವಸಂಸ್ಥೆಯ ಶಾಂತಿ ಪಾಲಕರಿಗೆ ಅಪಾಯವುಂಟಾಗಿದ್ದು, ಅಂತಾರಾಷ್ಟ್ರೀಯ ಕಾನೂನು ಉಲ್ಲಂಘನೆಯಾಗಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ

ಈ ಹಿಂದೆ ಸೆ. 29 ರಂದು ಬೈರೂತ್‌ನ ಕೋಲಾ ಮತ್ತು ಅ.3 ರಂದು ಬಚೌರಾವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು ಎಂದು ಅಲ್ ಜಜೀರಾ ವರದಿ ಮಾಡಿದೆ. ಯಾವುದೇ ಮುನ್ಸೂಚನೆಯಿಲ್ಲದೆ ದಾಳಿಗಳು ರಾಜಧಾನಿಯ ಹೃದಯಭಾಗದಲ್ಲಿರುವ ಎರಡು ವಸತಿ ಕಟ್ಟಡಗಳಿಗೆ ಅಪ್ಪಳಿಸಿವೆ. ಉದ್ದೇಶಿತ ಕಟ್ಟಡಗಳಲ್ಲಿ ಒಂದು ಅನೇಕ ಸ್ಥಳಾಂತರಗೊಂಡ ಜನರಿಗೆ ಆಶ್ರಯ ನೀಡುವ ಪ್ರದೇಶದಲ್ಲಿದೆ. ಸುಮಾರು ಒಂದು ಮೈಲಿ ದೂರದಿಂದ ಭೂಕಂಪನದ ಅನುಭವವಾಗುತ್ತಿದ್ದು, ಕಟ್ಟಡಗಳು ನಡುಗುತ್ತಿವೆ ಮತ್ತು ವಸತಿ ಬ್ಲಾಕ್ ಗಳಿಂದ ಹೊಗೆ ಹೊರಬರುತ್ತಿದೆ ಎಂದು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ. ಆದ್ರೆ ಈ ದಾಳಿಯಲ್ಲಿ ಹಿಜ್ಬುಲ್ಲಾದ ಉನ್ನತಾಧಿಕಾರಿ ಬದುಕುಳಿದಿದ್ದಾರೆ. ಈ ದಾಳಿಯು ಅಂತಾರಾಷ್ಟ್ರೀಯ ಕಾನೂನು ಉಲ್ಲಂಘನೆ ಮಾಡಿದೆ ಎಂದು ಸ್ಪೇನ್ ಹಾಗೂ ಇಟಲಿ ದೇಶಗಳು ಆರೋಪಿಸಿವೆ.

ಇತ್ತೀಚೆಗೆ ಇಸ್ರೇಲ್ ಹಿಜ್ಬುಲ್ಲಾದ 120 ಉಗ್ರ ನೆಲೆಗಳ ಮೇಲೆ ಭೀಕರ ದಾಳಿ ನಡೆಸಿತ್ತು. ಆ ನಂತರ ನಡೆದ ಅತಿದೊಡ್ಡ ದಾಳಿ ಇದಾಗಿದೆ.

### ಸಿರಿಯಾಕ್ಕೆ ಪಲಾಯನ

**ಇತ್ತೀಚಿನ ದಿನಗಳಲ್ಲಿ ಇಸ್ರೇಲ್‌ನ ಯುದ್ಧ ವಿಮಾನಗಳು ಲೆಬನಾನ್‌ನ ಬೆಕಾ ಪ್ರದೇಶ ಮತ್ತು ಬೈರೂತ್‌ನಲ್ಲಿ ವ್ಯಾಪಕವಾದ ವೈಮಾನಿಕ ದಾಳಿಗಳನ್ನು ನಡೆಸಿದೆ. ಮೂಲಸೌಕರ್ಯ ತಾಣಗಳು, ಲಾಂಚರ್‌ಗಳು, ಕಮಾಂಡ್ ಕಂಟ್ರೋಲ್ ಸೆಂಟರ್‌ಗಳು ಹಾಗೂ ಸಂಗ್ರಹಣಾ ಸೌಲಭ್ಯ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಿವೆ. ಸದ್ಯಕ್ಕೆ ಕದನ ವಿರಾಮ ಘೋಷಣೆಯಾಗುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ಇದರಿಂದ ಭಯಭೀತರಾಗಿರುವ 2.20 ಲಕ್ಷ ಮಂದಿ ಸಿರಿಯಾಕ್ಕೆ ಪಲಾಯನ ಮಾಡಿದ್ದಾರೆ ಎಂದು ವರದಿಗಳು ತಿಳಿಸಿವೆ.**

## ಅ.17 ಸೈನಿ ಪ್ರಮಾಣ, ಮೋದಿ ಭಾಗಿ

**ಹರಿಯಾಣ:** ಈ ತಿಂಗಳ 17ರಂದು ನಡೆಯಲಿರುವ ಹೊಸ ಸರ್ಕಾರದ ಮುಖ್ಯಮಂತ್ರಿಯಾಗಿ ನಯಾಬ್ ಸಿಂಗ್ ಸೈನಿ ಪ್ರಮಾಣ ವಚನ ಸ್ವೀ ಕಾರ ಸಮಾರಂಭದಲ್ಲಿ ಪ್ರಧಾನಿ ಮೋ ದಿ ಪಾಲ್ಗೊಳ್ಳಲಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 48 ಸ್ಥಾನಗಳನ್ನು ಪಡೆದುಕೊಂಡಿತ್ತು. ಮತ್ತೊಂದೆಡೆ ಕಾಂಗ್ರೆಸ್ 37 ಸ್ಥಾನಗಳನ್ನು ಗೆದ್ದಿದೆ. ಕಳೆ ದ ವಿಧಾನಸಭೆಯಲ್ಲಿ ಆ ಡಳಿತಾರೂಢ ಮೈತ್ರಿಕೂಟದ ಭಾಗ ವಾಗಿದ್ದ ಜೆಜೆಪಿ ತವರು ರಾಜ್ಯದಲ್ಲಿ ಖಾತೆ ತೆರೆಯಲು ವಿಫಲವಾಗಿತ್ತು.



**ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಸತತ ಮೂರನೇ ಗೆಲುವಿನ ನಂತರ ಬಿಜೆಪಿ ಸರ್ಕಾರ ರಚ ನೆಗೆ ಸಜ್ಜಾಗಿದೆ. ಇತ್ತೀಚಿನ ಬೆಳವಣಿಗೆಯಲ್ಲಿ, ಅ17 ರಂದು ಹೊಸ ಹರಿಯಾಣ ಕ್ಯಾಬಿನೆಟ್ ಪ್ರಮಾಣ ವಚನ ಸ್ವೀಕರಿಸಲಿದ್ದು, ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಹೊಸ ಸ ರ್ಕಾರದ ಸಚಿವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.**


ಗುರುವಾರ ಪಂಚಕುಲದ ದಸರಾ ಮೈದಾನದಲ್ಲಿ ಬೆಳಗ್ಗೆ 10:00 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಪ್ರಧಾನಿ ಮೋದಿ, ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಅವರ ಜೊತೆಗೆ ಪಕ್ಷದ ಹಿರಿಯ ನಾಯಕರೂ ಸಮಾರಂಭದಲ್ಲಿ ಉಪಸ್ಥಿತರಿರುತ್ತಾರೆ. ಈ ನಡುವೆ ದಸರಾ ಮೈದಾನದಲ್ಲಿ ಸಮಾರಂಭಕ್ಕೆ ಸಿದ್ಧತೆಗಳು ನಡೆಯುತ್ತಿವೆ. ''ನಾವು ಕಾರ್ಯಕ್ರಮಕ್ಕಾಗಿ ಸ್ಥಳವನ್ನು ಸಿದ್ಧಪಡಿಸುತ್ತಿದ್ದೇವೆ'' ಎಂದು ಪಂಚಕುಲದ ಉಪ ಆಯುಕ್ತ (ಡಿಸಿ) ಡಾ ಯಶ್ ಗಾರ್ಗ್ ಹೇಳಿದ್ದಾರೆ.

ಪ್ರಮಾಣ ವಚನ ಸಮಾರಂಭಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸಲು ಡಿಸಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನೂ ರಚಿಸಲಾಗಿದೆ. ಬಿಜೆಪಿ ತನ್ನ ಚುನಾವಣಾ ಪ್ರಚಾರದ ಸಮಯದಲ್ಲಿ, ಮಾರ್ಚ್‌ನಲ್ಲಿ ಮುಖ್ಯಮಂತ್ರಿಯಾಗಿ ಮನೋಹರ್ ಲಾಲ್ ಖಟ್ಟರ್ ಅವರನ್ನು ಬದಲಿಸಿದ, ಇತರ ಹಿಂದುಳಿದ ವರ್ಗಗಳಿಂದ ಬಂದ ನಯಾಬ್ ಸಿಂಗ್ ಸೈ ನಿ ಅವರು ಪಕ್ಷವು ಮತ್ತೆ ಅಧಿಕಾರಕ್ಕೆ ಬಂದರೆ ಉನ್ನತ ಹುದ್ದೆಗೆ ಆಯ್ಕೆಯಾಗುತ್ತಾರೆ ಎಂದು ಸೂಚಿಸಿತ್ತು.

ಅಕ್ಟೋಬರ್ 8 ರಂದು ಬಿಜೆಪಿಯು ಎಲ್ಲಾ ಎಕ್ಸಿಟ್ ಪೋಲ್ ಭವಿಷ್ಯವನ್ನು ಬುಡಮೇಲು ಮಾಡಿತ್ತು. ಪಕ್ಷವು ಇನ್ನೂ ಹೆಚ್ಚಿನ ಬಹುಮತದೊಂದಿಗೆ ಸತತವಾಗಿ ಮೂರನೇ ಬಾ ರಿಗೆ ಹರಿಯಾಣದಲ್ಲಿ ಅಧಿಕಾರಕ್ಕೆ ಮರಳುವ ಮೂಲಕ ಇ ತಿಹಾಸ ಸೃಷ್ಟಿಸಿದೆ. ಕೇಸರಿ ಪಕ್ಷವು 48 ಸ್ಥಾನಗಳನ್ನು ಗೆದ್ದುಕೊಂಡಿತು, ಕಾಂಗ್ರೆಸ್‌ಗಿಂತ 11 ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡಿತು, ಇದು ಆಡಳಿತ ವಿರೋಧಿ ಅಧಿಕಾರದ ಮೇಲೆ ಚುನಾವಣೆಯನ್ನು ಗೆಲ್ಲುವ ಭರವಸೆಯನ್ನು ಹೊಂದಿದೆ.

## ಜಾಮನಗರ ರಾಜಮನೆತನ: ಉತ್ತರಾಧಿಕಾರಿಯಾಗಿ ಅಜಯ್

**ಜಾಮನಗರ:** ಗುಜರಾತ್‌ನ ಈ ಹಿಂದಿನ ಜಾಮನಗರ ಸಂಸ್ಥಾನದ ರಾಜವಂಶದ ಮುಖ್ಯಸ್ಥ ಶತ್ರುಸಲ್ಯಸಿಂಹ ಜಡೇಜ ಅವರು ತಮ್ಮ ಸ್ಥಾನಕ್ಕೆ ಮಾಜಿ ಕ್ರಿಕೆಟಿಗ ಅಜಯ್ ಜಡೇಜ ಅವರನ್ನು ಉತ್ತರಾಧಿಕಾರಿಯಾಗಿ ಘೋಷಣೆ ಮಾಡಿದ್ದಾರೆ. ಶನಿವಾರ, ದಸರೆಯ ದಿನ ಶತ್ರುಸಲ್ಯಸಿಂಹ ಅವರು ಈ ಘೋಷಣೆ ಮಾಡಿದ್ದಾರೆ. 53 ವರ್ಷ ವಯಸ್ಸಿನ ಜಡೇಜ ಅವರು 1992 ರಿಂದ 2000 ಅವಧಿಯಲ್ಲಿ ಭಾರತ ತಂಡದ ಪರ 196 ಏಕದಿನ ಪಂದ್ಯ ಹಾಗೂ 15 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಜಡೇಜ ಅವರ ತಂದೆ ದೌಲತ್‌ಸಿಂಹಜಿ ಜಡೇಜ ಅವರು ಜಾಮನಗರದ ಮಹಾರಾಜ ಶತ್ರುಸಲ್ಯಸಿಂಹ ಜಡೇಜ ಅವರ ಚಿಕ್ಕಪ್ಪ, ದೌಲತ್‌ಸಿಂಹಜಿ ಅವರು ಮೂರು ಬಾರಿ (1971-1984) ಜಾಮನಗರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವನವಾಸ, ಅಜ್ಞಾತವಾಸ ಮುಗಿಸಿ ಪಾಂಡವರು ವಿಜಯಿಯಾದ ದಿನ ದಸರೆಯ ಹಬ್ಬ ಆಚರಿಸಲಾಗುತ್ತದೆ. ಈ ಶುಭ ದಿನ ನನ್ನ ಮುಂದಿದ್ದ ದ್ವಂದ್ವವೊಂದು ಕೊನೆಗೊಂಡಿದ್ದು, ಜಡೇಜ ಅವರು ನನ್ನ ಸ್ಥಾನಕ್ಕೆ ಉತ್ತರಾಧಿಕಾರಿಯಾಗಲಿದ್ದಾರೆ' ಎಂದು ಮಹಾರಾಜ ಜಾಮಸಾಹೇಬ ಎಂದೇ ಖ್ಯಾತರಾದ ಶತ್ರುಸಲ್ಯಸಿಂಹ ಹೇಳಿಕೆಯಲ್ಲಿ ಘೋಷಿಸಿದ್ದಾರೆ. ತಂದೆಯ ನಿಧನದ ನಂತರ, 1966ರ ಫೆಬ್ರುವರಿ 3ರಂದು ಅವರನ್ನು ನವನಗರದ ರಾಜವಂಶ ಕುಟುಂಬದ ಮುಖ್ಯಸ್ಥ ಸ್ಥಾನಕ್ಕೆ ನೇಮಕ ಮಾಡಲಾಗಿತ್ತು. ನೇಪಾಳದ ರಾಜವಂಶದ ಸದಸ್ಯೆಯೊಬ್ಬರನ್ನು ವಿವಾಹವಾಗಿದ್ದರು. ಈ ಕುಟುಂಬವು ಕ್ರಿಕೆಟ್ ದಿಗ್ಗಜ ರಣಜಿತ್ ಜಡೇಜ ಅವರ ಪರಂಪರೆ ಹೊಂದಿದೆ. ಅವರು 1907 ರಿಂದ 1933ರವರೆಗೆ ಜಾಮನಗರ ಸಂಸ್ಥಾನ ಆಳಿದ್ದರು.



**ಶತ್ರುಸಲ್ಯಸಿಂಹಜಿ ಅವರೂ ಕ್ರಿಕೆಟಿಗರಾಗಿದ್ದು, 1966-67ನೇ ಸಾಲಿನಲ್ಲಿ ರಣಜಿ ಟ್ರೋಫಿಯಲ್ಲಿ ಸೌರಾಷ್ಟ್ರ ತಂಡಕ್ಕೆ ನಾಯಕರಾಗಿದ್ದರು. ನಂತರ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದರು.**

## ಇಂಟರ್ನ್‌ಶಿಪ್ ಯೋಜನೆ, ಅರ್ಜಿ ಸಲ್ಲಿಕೆಗೆ ಅವಕಾಶ

**ನವದೆಹಲಿ:** ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆಗೆ ಯುವಕರು ಶನಿವಾರ ಸಂಜೆ ಯಿಂದ ಯುವಪೋರ್ಟಲ್‌ನಲ್ಲಿ ಅರ್ಜಿ ನೋಂದಾಯಿಸಿಕೊಳ್ಳಬಹುದಾಗಿದೆ. ಶುಕ್ರವಾರ ಸಂಜೆ ಯವರೆಗೆ 193 ಕಂಪನಿಗಳು 90,849 ಇಂಟರ್ನ್‌ಶಿಪ್ ಹುದ್ದೆಗಳಿಗೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿವೆ ಎಂದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯಕ್ಕೆ ಸಂಬಂಧಿಸಿದ ಮೂಲಗಳು ತಿಳಿಸಿವೆ.

ಇಂಟರ್ನ್‌ಶಿಪ್ ಅವಕಾಶಗಳ'ನ್ನು ಒದಗಿಸುವ ಕಂಪನಿಗಳು ಜುಬಿಲಂಟ್ ಫುಡ್‌ವರ್ಕ್ಸ್, ಮಾರುತಿ ಸುಜುಕಿ ಇಂಡಿಯಾ, ಐಚರ್ ಮೋಟಾರ್ ಲಿಮಿಟೆಡ್, ಲಾರ್ಸೆನ್, ಟೂಬ್ರ ಲಿಮಿಟೆಡ್, ಮುತ್ತೂಟ್ ಫೈನಾನ್ಸ್, ರಿಲಯನ್ಸ್ ಇಂಡಸ್ಟ್ರೀಸ್‌ನಂತಹ ಪ್ರಮುಖ ಕಂಪನಿಗಳನ್ನು ಒಳಗೊಂಡಿವೆ. 21 ರಿಂದ 24 ವರ್ಷ ವಯಸ್ಸಿನ ಯುವಕರು ಇಂಟರ್ನ್‌ಶಿಪ್‌ಗೆ ಅರ್ಜಿ ಸಲ್ಲಿಸಬಹುದು.

**ಇಂಟರ್ನ್‌ಶಿಪ್‌ಗೆ ಆಯ್ಕೆಯಾದ ಯುವಕರಿಗೆ ಒಟ್ಟು ಆರು ಸಾವಿರ ರೂಪಾಯಿಗಳನ್ನು ನೀಡಲಾಗುತ್ತದೆ. ಇದರೊಂದಿಗೆ 12 ತಿಂಗಳಿಗೆ ತಿಂಗಳಿಗೆ ಐದು ಸಾವಿರ ರೂಪಾಯಿಗಳನ್ನು ಸಹ ನೀಡಲಾಗುವುದು, ಇದರಲ್ಲಿ 4500 ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡಿದರೆ 500 ರೂಪಾಯಿಗಳನ್ನು ಕಂಪನಿಗಳು ಸಿಎಸ್‌ಆರ್ ನಿಧಿಯ ಮೂಲಕ ನೀಡುತ್ತವೆ.**

24 ಕ್ಷೇತ್ರಗಳಲ್ಲಿ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸಲಾಗುವುದು. ತೈಲ, ಅನಿಲ ಮತ್ತು ಇಂಧನ ಕ್ಷೇತ್ರಗಳಲ್ಲಿ ಗರಿಷ್ಠ ಅವಕಾಶಗಳಿವೆ. ಇದರ ನಂತರ ಪ್ರಯಾಣ ಮತ್ತು ಪ್ರವಾಸೋದ್ಯಮ, ಆಟೋಮೊಬೈಲ್, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು. ದೇಶಾದ್ಯಂತ ಇಂಟರ್ನ್‌ಶಿಪ್ ಅವಕಾಶಗಳು ಲಭ್ಯವಿರುತ್ತವೆ. ಈ ಅವಕಾಶಗಳು 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿರುವ 737 ಜಿಲ್ಲೆಗಳಲ್ಲಿ ಲಭ್ಯವಿದೆ.

ಇಂಟರ್ನ್‌ಶಿಪ್ ಅವಕಾಶಗಳ ಬಗ್ಗೆ ಮಾಹಿತಿ ನೀಡಲು ಸರ್ಕಾರ ಅಕ್ಟೋಬರ್ 3 ರಂದು ಈ ಪೋರ್ಟಲ್ ಪ್ರಾರಂಭಿಸಿದೆ. ಪ್ರಾಯೋಗಿಕ ಯೋಜನೆಯಡಿ ಇಂಟರ್ನ್‌ಶಿಪ್ ಕಾರ್ಯಕ್ರಮವು ಡಿ ಸೆಂಬರ್ 2 ರಿಂದ ಪ್ರಾರಂಭವಾಗಲಿದೆ. ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಸುಮಾರು 1.25 ಲಕ್ಷ ಅಭ್ಯರ್ಥಿಗಳನ್ನು ಯೋಜನೆಯಡಿ ತರಲು ನಿರೀಕ್ಷಿಸಲಾಗಿದೆ.

## ಲಾವೊಸ್ ಅಧ್ಯಕ್ಷ, ಪ್ರಧಾನಿ ಭೇಟಿ ಮಾಡಿದ ನರೇಂದ್ರ ಮೋದಿ ಮಾತುಕತೆ

**ಲಾವೊಸ್:** ಲಾವೊಸ್ ಅಧ್ಯಕ್ಷ ಥಾಂಗ್ಲೋನ್ ಸಿಸೌಲಿತ್, ಲಾವೊಸ್ ಪ್ರಧಾನಿ ಸೋನೆಕ್ಸೆ ಸಿ ಫಾಂಡೋನ್ ಅವರನ್ನು ಭೇಟಿ ಮಾಡಿರುವ ಭಾರತ ಪ್ರಧಾನಿ ನರೇಂದ್ರ ಮೋದಿ ಬಾಂಧವ್ಯ ವೃದ್ಧಿ ಕುರಿತು ದ್ವಿಪಕ್ಷೀಯ ಚರ್ಚೆ ನಡೆಸಿದ್ದಾರೆ.

ರಕ್ಷಣೆ, ನವೀಕರಿಸಬಹುದಾದ ಇಂಧನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪಾಲುದಾರಿಕೆ ಕುರಿತು ಮಾತುಕತೆ ನಡೆಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಬರೆದುಕೊಂಡಿರುವ ಪ್ರಧಾನಿ ಮೋದಿ, ಭಾರತ-ಆಸಿಯಾನ್, ಪೂರ್ವ ಏಷ್ಯಾ ಶೃಂಗಸಭೆಯನ್ನು ಯಶಸ್ವಿಯಾಗಿ ಆಯೋಜಿಸಿರುವ



ಲಾವೊಸ್‌ಗೆ ಅಭಿನಂದಿನಂದನೆಗಳನ್ನು ಸಲ್ಲಿಸಿದ್ದಾರೆ. ಸಿನಿಮಾ ಲಾವೊಸ್ ಪ್ರಧಾನಿ ಅವರೊಂದಿಗಿನ ಚರ್ಚೆ ಕುರಿತು ಉಲ್ಲೇಖ ಮಾಡಿರುವ ಮೋದಿ, 'ಕೌಶಲ್ಯ, ಶಕ್ತಿ, ಮೂಲಸೌಕರ್ಯ, ಶಿಕ್ಷಣ ಮತ್ತು ಇತರೆ ಕ್ಷೇತ್ರಗಳಲ್ಲಿ ಉಭಯ ದೇಶಗಳ ಪಾಲುದಾರಿಕೆಯನ್ನು ಮತ್ತಷ್ಟು ಉತ್ತೇಜಿಸಲು ಬಯಸುತ್ತೇವೆ ಎಂದು ಹೇಳಿದ್ದಾರೆ. ಮಗದೊಂದು ಪೋಸ್ಟ್‌ನಲ್ಲಿ ಲಾವೊಸ್ ಅಧ್ಯಕ್ಷರ ಭೇಟಿ ಕುರಿತು ತಿಳಿಸಿರುವ ಪ್ರಧಾನಿ ಮೋದಿ. ಉಭಯ ದೇಶಗಳ ಬಾಂಧವ್ಯದ ಕುರಿತು ಸಮಗ್ರವಾಗಿ ಪರಿಶೀಲಿಸಲಿದ್ದೇವೆ.

ಸಾಂಸ್ಕೃತಿಕ ಸಹಕಾರದ ಕುರಿತು ಚರ್ಚಿಸಿದ್ದೇವೆ' ಎಂದು ಹೇಳಿದ್ದಾರೆ. ಈ ಮೊದಲು 21ನೇ ಭಾರತ-ಆಸಿಯಾನ್ ಮತ್ತು 19ನೇ ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗವಹಿಸಿದರು. ಭಾರತ-ಆಸಿಯಾನ್ ಬಾಂಧವ್ಯ ಮತ್ತು ಪೂರ್ವ ಕೇಂದ್ರಿತ ನೀತಿಗೆ ಭಾರತವು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ ಎಂದು ಪ್ರತಿಪಾದಿಸಿದ್ದಾರೆ.

## ಆರ್‌ಎಸ್‌ಎಸ್ ಪಥಸಂಚಲನ: ಪರಿಸ್ಥಿತಿ ಉದ್ವಿಗ್ನ

**ಮುಂಬೈ:** ಮಹಾರಾಷ್ಟ್ರದ ರತ್ನಗಿರಿ ನಗರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪಥ ಸಂಚಲನ ನಡೆಯುತ್ತಿದ್ದ ವೇಳೆ ಅಲ್ಪಸಂಖ್ಯಾತರು ಘೋಷಣೆ ಕೂಗಿದ ಪರಿಣಾಮ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಕೊಂಕಣ್ ನಗರ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಘಟನೆ ನಡೆದಿದ್ದು, ಈ ಸಂಬಂಧ ಎರಡು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

ಅಶಾಂತಿಗೆ ಕಾರಣವಾದ ಐವರನ್ನು ಗುರುತಿಸಲಾಗಿದ್ದು, ಅವರಿಗೆ ನೋಟಿಸ್ ನೀಡಲಾಗಿದೆ.

ಈವರೆಗೆ ಯಾರನ್ನೂ ಬಂಧಿಸಲಾಗಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಪಥಸಂಚಲನದ ವೇಳೆ ವಿರುದ್ಧವಾದ ಘೋಷಣೆಗಳನ್ನು ಕೂಗುವ ಮೂಲಕ ಧಾರ್ಮಿಕ ಭಾವನೆಗಳಿಗೆ ಘಾಸಿ ಉಂಟು ಮಾಡಲಾಗಿದೆ ಎಂದು ಆರೋಪಿಸಿ ಸಂಘಟನೆಯವರು ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ. ಯಾವುದೇ ರೀತಿಯ ಹಿಂಸಾಚಾರ ನಡೆದಿಲ್ಲ, ಆದರೆ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧದ ಪ್ರಾಥಮಿಕ ವರದಿಯನ್ನು ನೀಡಬೇಕು ಎಂದು ಆಗ್ರಹಿಸಿ ಹಲವರು ಪೊಲೀಸ್ ಠಾಣೆಯ ಮುಂದೆ ಧರಣಿ ನಡೆಸಿದ್ದಾರೆ' ಎಂದು ತಿಳಿಸಿದ್ದಾರೆ.

# ಕಮಲಾ ಹ್ಯಾರಿಸ್ ಪರವಾಗಿ ಪ್ರಚಾರಕ್ಕೆ ನಿಂತ ಎ.ಆರ್. ರೆಹಮಾನ್

## ಈ ಬಾರಿಯ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ನಿಂತಿರುವ ಭಾರತೀಯ ಮೂಲದ ಕಮಲಾ ಹ್ಯಾರಿಸ್

**ನ್ಯೂಯಾರ್ಕ್:** ಈ ಬಾರಿಯ ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ನಿಂತಿರುವ ಅಲ್ಲಿನ ಹಾಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಗಾಗಿ ಖ್ಯಾತ ಸಂಗೀತ ನಿರ್ದೇಶಕ ಎಆರ್ ರಹಮಾನ್ ಅವರು ತಮ್ಮ ವಿಶಿ ಷ್ಟ ಸಂಗೀತದ ಮೂಲಕ ಪ್ರಚಾರ ಆರಂಭಿಸಿದ್ದಾರೆ. ಇದಕ್ಕಾಗಿ 30 ನಿಮಿಷಗಳ ಕಾಲ ಮ್ಯೂಸಿಕಲ್ ಪರ್ಫಾಮನ್ಸ್ ನಡೆಸಿ ಅದರ ವಿಡಿಯೋವನ್ನು ಸಿದ್ಧಪಡಿಸಿದ್ದಾರೆ ರಹಮಾನ್.




ಎ.ಆರ್.ರಹಮಾನ್ ಅ ವರು ಹೊಸ ದಾಖಲೆ ಬರೆದಿ ದ್ದಾರೆ. ಅಮೆರಿಕದಲ್ಲಿರುವ ಭಾರತೀಯರ ಮತದಾರ ರನ್ನು ಸೆಳೆಯುವ ಉದ್ದೇಶಕ್ಕಾಗಿ ಕಮಲಾ ಹ್ಯಾರಿಸ್ ಅವರ ಪ್ರಚಾರ ತಂತ್ರಗಾರಿಕೆಯಲ್ಲಿ ಎ.ಆರ್. ರಹಮಾನ್ ಅವರ ಸಂಗೀತವನ್ನು ಹ್ಯಾರಿಸ್ ಅವರ ಪ್ರಚಾರದ ವೇಳೆ ಬಳಸಲು ನಿರ್ಧರಿಸಲಾಗಿತ್ತು. ಆ ಕೆಲಸವನ್ನು ಎ.ಆರ್. ರಹಮಾನ್ ಕೂಡ ಒಪ್ಪಿಗೆ ನೀಡಿದ್ದರು. ಆ ಹಿನ್ನೆಲೆಯಲ್ಲಿ, ರಹಮಾನ್ ಅವರು 30 ನಿಮಿಷಗಳ ಕಾಲ ತಮ್ಮ ಸಂಗೀತ ಸಂಯೋಜನೆಯ ಪರ್ಫಾಮನ್ಸ್ ಅನ್ನು ಧ್ವನಿಮುದ್ರಣ ಮಾಡಿ ಅದನ್ನು ಕಮಲಾ ಅವರ ಚುನಾವಣಾ ಸ್ಟ್ರಾಟೆಜಿ ತಂಡಕ್ಕೆ ರವಾನಿಸಿದ್ದಾರೆ. ಇದು ಕೇವಲ ಅಮೆರಿಕವನ್ನು ಬಣ್ಣಿಸುವ ವಿಡಿಯೋ ರೀತಿಯಾದ್ದಲ್ಲ. ಮುಂದಿನ ಅಮೆರಿಕ ಹೇಗಿರಬೇಕು, ಹೇಗೆ ಅದು ಸರ್ವಧರ್ಮದ ನೆಲೆಯಾಗಿ, ದುಡಿಯುವವರ ಕಾರ್ಯಕ್ಷೇತ್ರವಾಗಿ ಬದಲಾಗಬೇಕು ಎಂಬುದರ ಒಂದು ದೃಷ್ಟಿಕೋನವನ್ನು ಮುಂದಿಡಲಿದ್ದಾರೆ.

ನ. 5ರಂದು ನಡೆಯಲಿರುವ ಮತದಾನಕ್ಕೆ ಕೆಲವು ದಿನಗಳ ಮುನ್ನ ಈ ವಿಡಿ ಯೋ ಬಿಡುಗಡೆಯಾಗಲಿದ್ದು, ಅದು ಜನರ ಮೇಲೆ ಅದರಲ್ಲೂ ವಿಶೇಷವಾಗಿ ಅಮೆರಕದಲ್ಲಿರುವ ದಕ್ಷಿಣ ಭಾರತೀಯರ ಮೇಲೆ ಗಾಢವಾದ ಪರಿಣಾಮ ಬೀರಲಿದೆ ಎಂದು ನಿರೀ ಕ್ಷಿಸಲಾಗಿದೆ. ಇಡೀ ದಕ್ಷಿಣ ಏಷ್ಯಾದ ಸಂಗೀತಗಾ ರರೊಬ್ಬರು ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಪ್ರಚಾರದಲ್ಲಿ ಹೀಗೆ ಪರೋಕ್ಷವಾಗಿ ಪಾಲ್ಗೊಂಡಿದ್ದು ಇದೇ ಮೊದಲು. ಆ ನಿಟ್ಟಿನಲ್ಲಿ

### ಏನಿದೆ ಈ ವಿಡಿಯೋದಲ್ಲಿ?

**30 ನಿಮಿಷಗಳ ಈ ಮ್ಯೂಸಿಕಲ್ ವಿಡಿಯೋದಲ್ಲಿ ಸುದೀರ್ಘವಾದ ಸಂಗೀತ ರಸದೌತಣವಿದೆ. ನಡುನಡುವೆ, ಅಮೆರಿಕದ ಖ್ಯಾತ ನಾಯಕರು, ವಿಜ್ಞಾನಿಗಳು ಹಾಗೂ ಇನ್ನಿತರ ಅಮೆರಿಕದ ಖ್ಯಾತ ನಾಮರು, ಅಮೆರಿಕವು ವಿಶ್ವದಲ್ಲಿ ಹೊಂದಿರುವ ಸ್ಥಾನಮಾನ, ಶ್ರಮಪಟ್ಟು ದುಡಿಯುವವರಿಗೆ ಅಮೆರಿಕದಲ್ಲಿ ಏನೆಲ್ಲಾ ಅವಕಾಶಗಳಿವೆ, ಯಾವ್ಯಾವ ದೇಶಗಳ ಜನರು ಅಲ್ಲಿ ನೆಲೆ ಕಂಡುಕೊಂಡಿದ್ದಾರೆ ಇತ್ಯಾದಿಗಳನ್ನು ತಮ್ಮದೇ ಮಾತುಗಳಲ್ಲಿ ಬಣ್ಣಿಸುತ್ತಾರೆ.**

**ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಈ ಬಾರಿಯ ಅಲ್ಲಿನ ಅಧ್ಯಕ್ಷೀಯ ಚುನಾವಣೆಗೆ ನಿಂತಿದ್ದಾರೆ. ಅವರಿಗಾಗಿ ವಿವಿಧ ರೀತಿಯ ಕ್ಯಾಂಪೇನ್ ಗಳನ್ನು ಮಾಡಲಾಗುತ್ತಿದೆ. ಅಮೆರಿಕದ ಮತದಾರರನ್ನು ಅದರಲ್ಲೂ ವಿಶೇಷವಾಗಿ ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ಮತದಾರರನ್ನು ಸೆಳೆಯಲು ನಾನಾ ರೀತಿಯ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳಲು ಕಮಲಾ ಹ್ಯಾರಿಸ್ ಅವರ ಡೆಮಾಕ್ರಟಿಕ್ ಪಾರ್ಟಿ ನಿರ್ಧರಿಸಿದೆ. ಆ ನಿಟ್ಟಿನಲ್ಲಿ ಎ.ಆರ್. ರಹಮಾನ್ ಅವರನ್ನು ಸಂಪರ್ಕಿಸಲಾಗಿದ್ದು, ಅದಕ್ಕೆ ಒಪ್ಪಿರುವ ರಹಮಾನ್ ಅವರು, 30 ನಿಮಿಷಗಳ ಮ್ಯೂಸಿಕಲ್ ವಿಡಿಯೋವನ್ನು ನಿರ್ಮಿಸಿ ಕೊಟ್ಟಿದ್ದಾರೆ.**

**ರಹಮಾನ್ ಪ್ರಚಾರದಿಂದೇನು ಲಾಭ:** ಈ ಮೊದಲೇ ಹೇಳಿದಂತೆ ಅಮೆರಿಕದಲ್ಲಿರುವ ಭಾರತೀಯರನ್ನು ತಲುಪುವ ಉದ್ದೇಶದಿಂದ ಕಮಲಾ ಹ್ಯಾರಿಸ್ ಅವರ ಪ್ರಚಾರಕ್ಕೆ ಎ.ಆರ್. ರಹಮಾನ್ ಅವರ ಗೀತಗಾಯನದ ವಿಡಿಯೋಗಳನ್ನು ಬಳಸಲಾಗುತ್ತದೆ.

ಎಆರ್ ರಹಮಾನ್ ಅಂದರೆ ಪಂಚಪ್ರಾಣ. ತಮಿಳು, ತೆಲುಗರು ಹಾಗೂ ಹಿಂದಿ ಭಾಷೆಗಳಲ್ಲಿ ಅವರು ನೀಡಿರುವ ಸಿನಿಮಾ ಹಾಡುಗಳನ್ನು ಅಲ್ಲಿರುವ ಭಾರತೀಯರು ಭಾಷೆ, ಧರ್ಮಗಳ ಹಂಗಿಲ್ಲದೆ ಆಸ್ವಾದಿಸುತ್ತಾರೆ. ಅಲ್ಲಿನ ಭಾರತೀಯ ಸಮಾರಂಭಗಳಲ್ಲಿ ಎಆರ್ ರಹಮಾನ್ ಹಾಡುಗಳನ್ನು ಈಗಲೂ ಹಾಕಲಾಗುತ್ತದೆ.

ಒಟ್ಟಿನಲ್ಲಿ ಎಆರ್ ರಹಮಾನ್ ಅವರು ಅಲ್ಲಿ ಜನಪ್ರಿಯ ಭಾರತೀಯ ಸಂಗೀತ ನಿರ್ದೇಶಕರಾಗಿರುವ ಹಿನ್ನೆಲೆಯಲ್ಲಿ ಅವರನ್ನು ಪ್ರಚಾರಕ್ಕೆ ಬಳಸಿಕೊಳ್ಳುವುದರಿಂದ ಲಾಭವಿದೆ ಎಂದು ಕಮಲಾ ಹ್ಯಾರಿಸ್ ಅವರ ಪ್ರಚಾರ ತಂತ್ರಗಾರಿಕೆಯನ್ನು ಬಳಸಿಕೊಂಡಿರುವ ಎಎಪಿಐ ಮತದಾರರ ಸಂಘದ ಅಧ್ಯಕ್ಷ ಶೇಖರ್ ನರಸಿಂಹನ್ ತಿಳಿಸಿದ್ದಾರೆ.




# ಮಿನಿ ನ್ಯೂಸ್

## ಬಾಂಗ್ಲಾದೇಶದಲ್ಲಿ ಮೋದಿ ನೀಡಿದ್ದ ಕಿರೀಟವನ್ನು ಕದ್ದ ದುಷ್ಕರ್ಮಿಗಳು

**ಢಾಕಾ:** ಬಾಂಗ್ಲಾದೇಶದ ಸತ್ಖಿರಾದ ಶ್ಯಾಮನಗರದಲ್ಲಿರುವ ಜೆಶೋರೇಶ್ವರಿ ದೇವಸ್ಥಾನದ ಕಾಳಿ ದೇವಿಗೆ ನರೇಂದ್ರ ಮೋದಿ ಅವರು ಉಡುಗೊರೆಯಾಗಿ ನೀಡಿದ್ದ ಕಿರೀಟವನ್ನು ದುಷ್ಕರ್ಮಿಗಳು ಕಳವು ಮಾಡಿದ್ದಾರೆ. ಕಳೆದ 2021ರ ಮಾರ್ಚ್ ನಲ್ಲಿ ಬಾಂಗ್ಲಾದೇಶಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದಾಗ ಢಾಕಾದಲ್ಲಿರುವ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಉಡುಗೊರೆಯಾಗಿ ಈ ಕಿರೀಟ ನೀಡಿದ್ದರು. ದೇವಾಲಯದ ಅರ್ಚಕ ದಿಲೀಪ್ ಮುಖರ್ಜಿ ಅವರು ದಿನದ ಪೂಜೆ ಮಾಡಿ ಹೊರಟ ನಂತರ ಕಳ್ಳತನ ನಡೆದಿದೆ.

ಕಳ್ಳರನ್ನು ಪತ್ತೆಹಚ್ಚಲು ನಾವು ದೇವಾಲಯದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಶ್ಯಾಮನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ತೈಜುಲ್ ಇಸ್ಲಾಂ ತಿಳಿಸಿದ್ದಾರೆ. 51 ಶಕ್ತಿಪೀಠಗಳಲ್ಲಿ ಜೇಜೋಶ್ವರಿ ದೇವಸ್ಥಾನವೂ ಒಂದು ಕಳವಾದ ಕಿರೀಟವು ಬೆಳ್ಳಿ ಮತ್ತು ಚಿನ್ನದ ಲೇಪಿತದಿಂದ ಮಾಡಿದ ಗಮನಾರ್ಹ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಹಿಂದೂ ಪುರಾಣಗಳ ಪ್ರಕಾರ, ಜೆಶೋರೇಶ್ವರಿ ದೇವಾಲಯವುಭಾರತ ಮತ್ತು ನೆರೆಯ ದೇಶಗಳಲ್ಲಿ ಹರಡಿರುವ 51 ಶಕ್ತಿ ಪೀಠಗಳಲ್ಲಿ ಒಂದಾಗಿದೆ.

## ಸರ್ಕಾರ ರಚನೆಗೆ ಓಮರ್ ಹಕ್ಕು ಮಂಡನೆ

**ನವದೆಹಲಿ:** ನ್ಯಾಷನಲ್ ಕಾನ್ಫರೆನ್ಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಓಮರ್ ಅಬ್ದುಲ್ಲ ಜಮ್ಮು-ಕಾಶ್ಮೀರ ರಾಜ್ಯಪಾಲ ಮನೋಜ್‌ಸಿನ್ಹಾ ಅವರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಭರ್ಜರಿ ಗೆಲುವು ಸಾಧಿಸಿದ ನಂತರ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಓಮರ್ ಅಬ್ದುಲ್ಲ ಅವರು ಸರ್ಕಾರ ರಚಿಸಲು ರಾಜ್ಯಪಾಲ ಮನೋಜ್‌ಸಿನ್ಹಾ ಅವರಲ್ಲಿ ಹಕ್ಕು ಮಂಡಿಸಿದ ಹಿನ್ನೆಲೆಯಲ್ಲಿ ಸರ್ಕಾರ ರಚಿಸಲು ಬೆಂಬಲ ಪತ್ರವನ್ನು ರಾಜ್ಯಪಾಲರು ವಿತರಿಸಿರುವ ಹಿನ್ನೆಲೆಯಲ್ಲಿ ಅ. 16 ರಂದು ಮುಖ್ಯಮಂತ್ರಿಯಾಗಿ ಓಮರ್ ಅಬ್ದುಲ್ಲ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಚುನಾವಣೆಯ ಫಲಿತಾಂಶ ಘೋಷಣೆಯಾದ ನಂತರ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಓಮರ್ ಅಬ್ದುಲ್ಲ ಅವರು ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಅಂದೇ ಘೋಷಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಮಾಣವಚನ ದಿನಾಂಕವನ್ನು ನಿಗದಿಪಡಿಸುವಂತೆ ರಾಜ್ಯಪಾಲರಲ್ಲಿ ಮನವಿ ಸಲ್ಲಿಸಲಾಗಿತ್ತು. ಈ ಎಲ್ಲಾ ಪ್ರಕ್ರಿಯೆಗಳು ಮುಂದಿನ ಮಂಗಳವಾರ ಪೂರ್ಣಗೊಳ್ಳಲಿದ್ದು, ಬುಧವಾರ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಓಮರ್ ತಿಳಿಸಿದ್ದಾರೆ.

## ಜಪಾನ್‌ನ ನಿಹಾನ್ ಹಿಡಾಂಕ್ಯೊ ಸಂಸ್ಥೆಗೆ ನೊಬೆಲ್ ಶಾಂತಿ ಪ್ರಶಸ್ತಿ

**ಓಸ್ಲೋ:** ಹಿರೋಶಿಮಾ, ನಾಗಾಸಾಕಿಯಲ್ಲಿ ಪರಮಾಣು ಬಾಂಬ್ ದಾಳಿಯಲ್ಲಿ ಬದುಕುಳಿದವರನ್ನು ಪ್ರತಿನಿಧಿಸುವ, ಪರಮಾಣು ಶಸ್ತ್ರಾಸ್ತ್ರಗಳ ವಿರುದ್ಧ ಹೋರಾಟ ನಡೆಸುತ್ತಿರುವ ಜಪಾನ್‌ನ 'ನಿಹಾನ್ ಹಿಡಾಂಕ್ಯೊ' ಸಂಸ್ಥೆಯನ್ನು ಪ್ರಸಕ್ತ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಗೆ ಶುಕ್ರವಾರ ಆಯ್ಕೆ ಮಾಡಲಾಗಿದೆ. ಸಾಕಷ್ಟು ಒತ್ತಡದ ನಡುವೆಯೂ ಪರಮಾಣು ಅಸ್ತ್ರಗಳ ಬಳಕೆ ವಿರುದ್ಧ ಹೋರಾಟ ನಡೆಸುತ್ತಿರುವ ಸಂಘಟನೆಗೆ ಶಾಂತಿ ಪ್ರಶಸ್ತಿ ನೀಡಲಾಗಿದೆ' ಎಂದು ನಾರ್ವೆಯ ನೊಬೆಲ್ ಸಮಿತಿ ಅಧ್ಯಕ್ಷ ಜಾರ್ಗೆಮ್ ವಾಟೆ ಫ್ರಿಡ್‌ನೆಸ್ ತಿಳಿಸಿದರು.

ದುರಂತದಲ್ಲಿ ದೈಹಿಕ ಸಂಕಟದ ಜತೆಗೆ ನೋವಿನ ನೆನಪುಗಳ ಹೊರತಾಗಿಯೂ ಬದುಕುಳಿದ ಎಲ್ಲರಿಗೂ ಶುಭ ಹಾರೈಸುತ್ತೇವೆ. ತಮ್ಮ ತ್ರಾಸದಾಯಕ ಅನುಭವಗಳನ್ನು ಶಾಂತಿ ಸ್ಥಾಪನೆಗೆ ಸಂಸ್ಥೆಯು ಶ್ರಮಿಸುತ್ತಿದೆ' ಎಂದು ಅವರು ಪ್ರಶಂಸಿಸಿದರು.

ಪ್ರಶಸ್ತಿ ಘೋಷಣೆಯಾದ ಸುದ್ದಿ ಕೇಳುತ್ತಿದ್ದಂತೆಯೇ ನಿಹಾನ್ ಹಿಡಾಂಕ್ಯೊದ ಹಿರೋಶಿಮಾ ಶಾಖೆಯ ಮುಖ್ಯಸ್ಥ ತೊಶಿಯುಕಿ ಮಿಮಾಕಿ ಸಂತಸ ವ್ಯಕ್ತಪಡಿಸಿದರು.

## ರೋಬೊ ಟ್ಯಾಕ್ಸಿ ಅನಾವರಣ

**ರಾಯಿಟರ್ಸ್:** ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾ ಅಭಿವೃದ್ಧಿಪಡಿಸಿರುವ ಚಾಲಕರಹಿತ ರೋಬೊ ಟ್ಯಾಕ್ಸಿಯನ್ನು ಅನಾವರಣ ಮಾಡಲಾಗಿದೆ. ಹಾಲಿವುಡ್ ಸ್ಟುಡಿಯೊದಲ್ಲಿ ಟ್ಯಾಕ್ಸಿ ಅನಾವರಣದ ಬಳಿಕ ಮಾತನಾಡಿದ ಟೆಸ್ಲಾ ಮುಖ್ಯಸ್ಥ ಇಲಾನ್ ಮಸ್ಕ್, '2026ರಿಂದ ಕಂಪನಿಯು ರೋಬೊ ಟ್ಯಾಕ್ಸಿಗಳ ತಯಾರಿಕೆ ಆರಂಭಿಸಲಿದೆ. ಇದರ ಬೆಲೆ 30 ಸಾವಿರ ಡಾಲರ್‌ಗಿಂತ (25 ಲಕ್ಷ) ಕಡಿಮೆ ಇರಲಿದೆ' ಎಂದು ತಿಳಿಸಿದ್ದಾರೆ. ಮುಂದಿನ ವರ್ಷದ ಕ್ಯಾಲಿಫೋರ್ನಿಯಾ ಮತ್ತು ಟೆಕ್ಸಾಸ್‌ನಲ್ಲಿ ಕಂಪನಿಯ ಜನಪ್ರಿಯ ಕಾರುಗಳಾದ ಮಾಡೆಲ್ 3 ಮತ್ತು ಮಾಡೆಲ್ ವೈ ಅನ್ನು ಕಾರ್ಯಾಚರಣೆ ಮಾಡಲಾಗುವುದು ಎಂದು ಹೇಳಿದ್ದಾರೆ.


ರೋಬೊ ಟ್ಯಾಕ್ಸಿಯ ಸ್ವಯಂಚಾಲಿತ ವ್ಯವಸ್ಥೆಗೆ ಆಟೊಪೈಲಟ್ ಎಂದು ಕರೆಯಲಾಗುತ್ತದೆ. ಈ ತಂತ್ರಜ್ಞಾನ ಹೊಂದಿರುವ ಕಾರುಗಳನ್ನು ಸಮೂಹ ಸಾರಿಗೆ ವ್ಯವಸ್ಥೆಯಾಗಿ ಜನಪ್ರಿಯಗೊಳಿಸುವುದು ಮಸ್ಕ್ ಅವರ ಗುರಿಯಾಗಿದೆ.

## ಮಹಿಳೆಯರ ಘನತೆಗೆ ಧಕ್ಕೆ ಮೂವರ ನಟರ ವಿರುದ್ಧ ದೂರು

**ಕೊಚ್ಚಿ:** ಯೂಟ್ಯೂಬ್ ಚಾನಲ್‌ಗಳಲ್ಲಿ ಮಹಿಳಾ ಕಲಾವಿದರ ಮಾನಹಾನಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ, ಮೂವರು ಕಲಾವಿದರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಟೆಲಿವಿಷನ್ ಹಾಗೂ ಸಿನಿಮಾ ನಟರಾದ ಬೀನಾ ಆ್ಯಂಟನಿ, ಆಕೆಯ ಪತಿ ಮನೋಜ್, ರಾಷ್ಟ್ರೀಯ ಪ್ರಶಸ್ತಿ ವಿಜೇತೆ ಸ್ವಾಸಿಕಾ ಅವರು ಮಹಿಳೆಯರ ಘನತೆಗೆ ಧಕ್ಕೆ ತಂದಿದ್ದಾರೆ ಎಂದು ನೆಡುಂಬಕ್ಕೇರಿ ಪೊಲೀಸ್ ಠಾಣೆ ಯಲ್ಲಿ ಮಹಿಳೆಯೊಬ್ಬರು ದೂರು ದಾಖಲಿ ಸಿದ್ದಾರೆ.



ದಿನ ಭವಿಷ್ಯ ಮಲಯಾಳ ಚಿತ್ರೋದ್ಯಮದಲ್ಲಿ ಮಹಿಳೆಯರ ಶೋಷಣೆ ಮತ್ತು ಅವರಿಗೆ ನೀಡಲಾಗುತ್ತಿರುವ ಕಿರುಕುಳ ಕುರಿತು ನ್ಯಾಯಮೂರ್ತಿ ಹೇಮಾ ನೇತೃತ್ವದ ಸಮಿತಿ ಸಲ್ಲಿಸಿದ ವರದಿ ಬೆನ್ನಲ್ಲೇ, ಹಲವು ಪ್ರಮುಖ ನಟರ ವಿರುದ್ಧ ಕಲಾವಿದೆಯರು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಇದಕ್ಕೆ ಯೂಟ್ಯೂಬ್‌ನಲ್ಲಿ ಪ್ರತಿಕ್ರಿಯಿಸಿದ್ದ ಮೂವರು, 'ದ್ವೇಷ ಸಾಧಿಸುವ ಉದ್ದೇಶದಿಂದಲೇ ನಟಿಯರು ಕಿರುಕುಳದ ಆರೋಪ ಮಾಡಿದ್ದರು ಎಂದು ತಿಳಿಸಿದ್ದು, ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



# ಯೂಟ್ಯೂಬರ್ ಜೊತೆ ನತಾಶಾ ಸುತ್ತಾಟ

**ಹಾರ್ದಿಕ್ ಜೊತೆಗಿನ ವಿಚ್ಛೇದನ**

ನತಾಶಾ ಅವರು ಸೈಬೀರಿಯಾದವರು. ಕ್ರಿಕೆಟರ್ ಹಾರ್ದಿಕ್ ಪಾಂಡ್ಯ ಜೊತೆಗಿನ ವಿಚ್ಛೇದನದ ಬಳಿಕ ಅವರು ಮರಳಿ ಸೈಬೀರಿಯಾಗೆ ತೆರಳಿದ್ದಾಗಿ ವರದಿ ಆಗಿತ್ತು. ಈಗ ಅವರು ಮರಳಿ ಮುಂಬೈಗೆ ಬಂದಿದ್ದು, ಎಲ್ವಿಶ್ ಯಾದವ್ ಜೊತೆಯಲ್ಲಿ ಸುತ್ತಾಟ ಆರಂಭಿಸಿದ್ದಾರೆ. ಹಾರ್ದಿಕ್ ಪಾಂಡ್ಯ ಹಾಗೂ ನತಾಶಾ ಇತ್ತೀಚೆಗೆ ವಿಚ್ಛೇದನ ಪಡೆದು ಸುದ್ದಿ ಆಗಿದ್ದರು. ಈಗ ಅವರ ಹೆಸರು ಮತ್ತೆ ಚರ್ಚೆಗೆ ಬಂದಿದೆ. ನತಾಶಾ ಅವರು ಯೂಟ್ಯೂಬರ್ ಹಾಗೂ ಬಿಗ್ ಬಾಸ್ ಒಟಿಟಿ ವಿನ್ನರ್ ಎಲ್ವಿಶ್ ಯಾದವ್ ಜೊತೆ ಸುತ್ತಾಟ ನಡೆಸಿದ್ದಾರೆ. ಅವರ ಫೋಟೋಗಳು ಹಾಗೂ ವಿಡಿಯೋಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಸಾಕಷ್ಟು ಸದ್ದು ಮಾಡುತ್ತಿದೆ. ನತಾಶಾ ಅವರು ಸೈಬೀರಿಯಾದವರು.

ಕ್ರಿಕೆಟರ್ ಹಾರ್ದಿಕ್ ಪಾಂಡ್ಯ ಜೊತೆಗಿನ ವಿಚ್ಛೇದನದ ಬಳಿಕ ಅವರು ಮರಳಿ ಸೈಬೀರಿಯಾಗೆ ತೆರಳಿದ್ದಾಗಿ ವರದಿ ಆಗಿತ್ತು. ಈಗ ಅವರು ಮರಳಿ ಮುಂಬೈಗೆ ಬಂದಿದ್ದು, ಎಲ್ವಿಶ್ ಯಾದವ್ ಜೊತೆಯಲ್ಲಿ ಸುತ್ತಾಟ ಆರಂಭಿಸಿದ್ದಾರೆ. ಇಬ್ಬರ ಮಧ್ಯೆ ಏನಾದರೂ ನಡೆಯುತ್ತಿದೆಯೇ ಎನ್ನುವ ಪ್ರಶ್ನೆ ಮೂಡಿದೆ. ಎಲ್ವಿಶ್ ಹಾಗೂ ನತಾಶಾ ಮುಂಬೈನ ಹೋಟೆಲ್ ಎದುರಲ್ಲಿ ಕಾರಿನಿಂದ ಹೊರ ಬರುತ್ತಿರುವ ವಿಡಿಯೋ ಇದೆ. ಅವರು ಒಂದೇ ಕಾರಿನಲ್ಲಿ ಆಗಮಿಸಿದ್ದಾರೆ ಎನ್ನಲಾಗಿದೆ. ಇಬ್ಬರೂ ಬೇರೆ ಬೇರೆ ಆಗಿ ಹೋಗುವ ಪ್ರಯತ್ನ ಮಾಡಿದರು. ಒಂದು ಹಂತದಲ್ಲಿ ಎಲ್ವಿಶ್ ಅವರು ಹಿಂದಿರುಗಿ ನೋಡಿ, ನತಾಶಾ ತಮ್ಮನ್ನು ಫಾಲೋ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಖಾತ್ರಿಪಡಿಸಿಕೊಂಡರು. ಸೋಶಿಯಲ್ ಮೀಡಿಯಾದಲ್ಲಿ ಈ ವಿಡಿಯೋಗೆ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ.



# ರಿಲೀಸ್ ಆದ ಸಿನಿಮಾಗಳ ಗಳಿಕೆ ಲೆಕ್ಕ



ಧ್ರುವ ಸರ್ಜಾ ನಟನೆಯ 'ಮಾರ್ಟಿನ್' ಸಿನಿಮಾ ಬಗ್ಗೆ ಪ್ರೇಕ್ಷಕರು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಕನ್ನಡ ಮಾತ್ರವಲ್ಲದೆ ಪರಭಾಷೆಯಲ್ಲೂ ಈ ಚಿತ್ರವನ್ನು ರಿಲೀಸ್ ಮಾಡಲಾಯಿತು. ಅದ್ದೂರಿ ಬಜೆಟ್‌ನಲ್ಲಿ ಸಿನಿಮಾ ಸಿದ್ಧವಾಗಿದೆ. ಈ ಚಿತ್ರಕ್ಕಾಗಿ ಫ್ಯಾನ್ಸ್ ಹಲವು ವರ್ಷಗಳು ಕಾದಿದ್ದರು. ಈಗ ಸಿನಿಮಾದ ಮೊದಲ ದಿನದ ಗಳಿಕೆ ವಿಚಾರದ ಬಗ್ಗೆ ಮಾಹಿತಿ ಸಿಕ್ಕಿದೆ. 'ದಸರಾ' ಹಬ್ಬದ ಪ್ರಯುಕ್ತ ಹಲವು ಸಿನಿಮಾಗಳು ಈ ವಾರ ರಿಲೀಸ್ ಆಗಿವೆ. ಒಂದಷ್ಟು ಸಿನಿಮಾಗಳು ಅಕ್ಟೋಬರ್ 10 ರಂದು ತೆರೆಗೆ ಬಂದರೆ ಇನ್ನೂ ಕೆಲವು ಚಿತ್ರಗಳು ಅಕ್ಟೋಬರ್ 11ರಂದು ಬಿಡುಗಡೆ ಕಂಡಿವೆ. ದಸರಾ ಪ್ರಯುಕ್ತ ರಿಲೀಸ್ ಆದ ಚಿತ್ರಗಳ ಪೈಕಿ ಎಲ್ಲಾವೂ ಮಿಶ್ರಪ್ರತಿಕ್ರಿಯೆ ಪಡೆದಿದೆ. ಈ ವಾರ ರಿಲೀಸ್ ಆದ ಸಿನಿಮಾಗಳ ಗಳಿಕೆ ಬಗ್ಗೆ ಇಲ್ಲಿದೆ ಮಾಹಿತಿ.

'ಮಾರ್ಟಿನ್' ಧ್ರುವ ಸರ್ಜಾ ನಟನೆಯ, ಎಪಿ ಅರ್ಜುನ್ ನಿರ್ದೇಶನದ 'ಮಾರ್ಟಿನ್' ಸಿನಿಮಾ ಅಕ್ಟೋಬರ್ 11ರಂದು ರಿಲೀಸ್ ಆಗಿದೆ. ಈ ಸಿನಿಮಾಗೆ ಮಿಶ್ರಪ್ರತಿಕ್ರಿಯೆ ಸಿಕ್ಕಿದೆ. ಅವರ ಫ್ಯಾನ್ಸ್ ಈ ಚಿತ್ರವನ್ನು ಮೆಚ್ಚಿಕೊಂಡಿದ್ದಾರೆ. ಈ ಚಿತ್ರಕ್ಕೆ ಉದಯ್ ಮೆಹ್ತಾ ನಿರ್ಮಾಣ ಇದೆ. ಈ ಸಿನಿಮಾ ಮೊದಲ ದಿನ ಗಳಿಕೆ ಮಾಡಿದ್ದು 6.2 ಕೋಟಿ ರೂಪಾಯಿ ಎಂದು ವರದಿ ಆಗಿದೆ.

'ಜಿಗ್ರಾ' ಆಲಿಯಾ ಭಟ್ ನಟಿಸಿ, ನಿರ್ಮಿಸಿರೋ 'ಜಿಗ್ರಾ' ಸಿನಿಮಾ ಮೊದಲ ದಿನ 4 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಈ ಚಿತ್ರ ಬುಕ್ ಮೈ ಶೋನಲ್ಲಿ ಉತ್ತಮ ರೇಟಿಂಗ್ ಪಡೆದುಕೊಂಡಿದೆ. 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಬಳಿಕ ರಿಲೀಸ್ ಆಗುತ್ತಿರುವ ಆಲಿಯಾ ನಟನೆಯ ಸಿನಿಮಾ ಇದಾಗಿದೆ.

# ಮತ್ತೆ ಮದುವೆ ಆದ್ರಾ ಸಂಜಯ್ ದತ್

ಸಂಜಯ್ ದತ್ ಮೂರು ಬಾರಿ ಮದುವೆಯಾಗಿದ್ದಾರೆ ಮತ್ತು ಮಾನ್ಯತಾ ಅವರ ಮೂರನೇ ಪತ್ನಿ. ಇಬ್ಬರೂ 2008ರಲ್ಲಿ ಗೋವಾದಲ್ಲಿ ವಿವಾಹವಾದರು. ಸಂಜಯ್ ದತ್ ಮೊದಲು ಮದುವೆಯಾಗಿದ್ದು ರಿಚಾ ಶರ್ಮಾ ಅವರನ್ನು. 1987ರಲ್ಲಿ, ಈ ಇಬ್ಬರೂ ವಿವಾಹವಾದರು. ನಟ ಸಂಜಯ್ ದತ್ ಅವರ ವಿಡಿಯೋವೊಂದು ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇದರಲ್ಲಿ ಅವನು ಅಗ್ನಿಯ ಸುತ್ತ ಏಳು ಸುತ್ತು ಹಾಕುತ್ತಿರುವುದನ್ನು ಕಾಣಬಹುದು. ಹೀಗಾಗಿ 65ನೇ ವಯಸ್ಸಿನಲ್ಲಿ ಸಂಜು ಬಾಬಾ ನಾಲ್ಕನೇ ಮದುವೆಯಾಗಿದ್ದಾರಾ ಎಂದು ನೆಟ್ಟಿಗರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ವಾಸ್ತವವಾಗಿ ಈ ವೀಡಿಯೊ ಸಂಜಯ್ ದತ್ ಅವರ 16 ನೇ ವಿವಾಹ ವಾರ್ಷಿಕೋತ್ಸವದ ವೀಡಿಯೊವಾಗಿದೆ.



ಇತ್ತೀಚೆಗೆ ಸಂಜಯ್ ಮತ್ತು ಅವರ ಪತ್ನಿ ಮಾನ್ಯತಾ ದಾಂಪತ್ಯ ಜೀವನದಲ್ಲಿ 16 ವರ್ಷಗಳನ್ನು ಪೂರೈಸಿದರು. ಈ ವಿಶೇಷ ದಿನದ ಸಂದರ್ಭದಲ್ಲಿ, ಇಬ್ಬರೂ ಮತ್ತೊಮ್ಮೆ ಸಪ್ತಪದಿ ತುಳಿದಿದ್ದಾರೆ. ಈ ವಿಡಿಯೋಗೆ ನೆಟ್ಟಿಗರು ಲೈಕ್‌ಗಳು ಮತ್ತು ಕಾಮೆಂಟ್‌ಗಳನ್ನು ಸುರಿಯುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿರುವ ಈ ವಿಡಿಯೋದಲ್ಲಿ ಸಂಜಯ್ ದತ್ ಕೇಸರಿ ಬಣ್ಣದ ಧೋತಿ-ಕುರ್ತಾ ಧರಿಸಿ ಕಾಣಿಸಿಕೊಂಡಿದ್ದಾರೆ. ಅವನ ಹಣೆಯ ಮೇಲೆ ಕುಂಕುಮ ಇದೆ. ಮಾನ್ಯತಾ ಬಿಳಿ ಸೂಟ್ ಧರಿಸಿದ್ದಾರೆ. ಸಂಜಯ್ ಮತ್ತು ಮಾನ್ಯತಾ ಇಬ್ಬರೂ ಒಟ್ಟಿಗೆ ಅಗ್ನಿಯ ಸುತ್ತಲೂ ನಡೆಯುತ್ತಿದ್ದಾರೆ. ಸಂಜಯ್ ದತ್ ಮತ್ತು ಮಾನ್ಯತಾ ಮತ್ತೊಮ್ಮೆ ಮದುವೆ ಆಗಿ ಏಳು ಸುತ್ತುಗಳನ್ನು ಸುತ್ತಿದ್ದಾರೆ. ಸಂಜಯ್ ದತ್ ಮೂರು ಬಾರಿ ಮದುವೆಯಾಗಿದ್ದಾರೆ ಮತ್ತು ಮಾನ್ಯತಾ ಅವರ ಮೂರನೇ ಪತ್ನಿ.



# ಆಲಿಯಾ, ಕರಣ್ ಮೇಲೆ ಕಂಗನಾ ಕೆಂಗಣ್ಣು

**ಮಹಿಳಾ ಪ್ರಧಾನ ಸಿನಿಮಾ**

ತಮ್ಮ ಈ ಹಿಂದಿನ ಮಹಿಳಾ ಪ್ರಧಾನ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಸೋತಿರುವುದಕ್ಕೆ ಕರಣ್ ಜೋಹರ್ ಹಾಗೂ ಆಲಿಯಾ ಭಟ್ ಕಾರಣ ಎಂದು ಪರೋಕ್ಷವಾಗಿ ಆರೋಪ ಮಾಡಿದ್ದಾರೆ. ನಟಿ ಕಂಗನಾ ರನೌತ್ ಪದೇ ಪದೇ ಬಾಲಿವುಡ್ ವಿರುದ್ಧ, ಬಾಲಿವುಡ್‌ನ ಸ್ಟಾರ್ ಸೆಲೆಬ್ರಿಟಿಗಳ ವಿರುದ್ಧ ವಿಷ ಕಕ್ಕುತ್ತಲೇ ಇರುತ್ತಾರೆ. ಬಾಲಿವುಡ್ ಎಂಬುದು ಮಾಫಿಯಾ, ನನ್ನನ್ನು ತುಳಿಯಲು ಪ್ರಯತ್ನಿಸಿದ್ದಾರೆ, ನನಗೆ ಮೋಸ ಮಾಡಿದ್ದಾರೆ ಎಂದು ಪದೇ ಪದೇ ಹೇಳುತ್ತಲೇ ಇರುತ್ತಾರೆ.

ಕಂಗನಾರ ಈ ನಾಲಗೆ ಹರಿಬಿಡುವತನದಿಂದಲೇ ಜಾವೇದ್ ಅಖ್ತರ್ ಸೇರಿದಂತೆ ಕೆಲವರು ಕಂಗನಾ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಪ್ರಕರಣ ಇನ್ನೂ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ. ಇದರ ನಡುವೆ ಇದೀಗ ತಾವಾಯ್ತು, ತಮ್ಮ ಸಿನಿಮಾ ಆಯ್ತು, ಕುಟುಂಬವಾಯ್ತು ಎಂದಿರುವ ಆಲಿಯಾ ಭಟ್ ವಿರುದ್ಧ ಹಾಗೂ ನಿರ್ಮಾಪಕ ಕರಣ್ ಜೋಹರ್ ವಿರುದ್ಧ ಕಂಗನಾ ಹರಿಹಾಯ್ದಿದ್ದಾರೆ. ಹೆಸರು ಬಳಸದೇ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ ನಟಿ ಕಂಗನಾ, ಆದರೆ ಕಂಗನಾರ ಗುರಿ ಆಲಿಯಾ ಮತ್ತು ಕರಣ್ ಜೋಹರ್ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕಂಗನಾ ಸಾಮಾನ್ಯವಾಗಿ ಮಹಿಳಾ ಪ್ರಧಾನ ಸಿನಿಮಾಗಳಲ್ಲಿ ಮಾತ್ರವೇ ನಟಿಸುತ್ತಾರೆ. ಇತ್ತೀಚೆಗಿನ ವರ್ಷಗಳಲ್ಲಿ ಅವರು ನಟಿಸಿದ ಸಾಲು-ಸಾಲು ಸಿನಿಮಾಗಳು ಸೋತಿವೆ. ಅದರಲ್ಲೂ ಕಂಗನಾ ನಟಿಸಿದ್ದ ಮಹಿಳಾ ಪ್ರಧಾನ ಆಕ್ಷನ್ ಸಿನಿಮಾಗಳಾದ 'ಧಾಕಡ್', 'ತೇಜಸ್' ಸಿನಿಮಾಗಳು ಅಟ್ಟರ್ ಫ್ಲಾಪ್ ಆಗಿದ್ದವು. ಈ ಸಿನಿಮಾಗಳು ಫ್ಲಾಪ್ ಆಗಲು ಕರಣ್, ಆಲಿಯಾ ಎಂಬ ಆರೋಪವನ್ನು ನಟಿ ಮಾಡಿದ್ದಾರೆ.

ಇತ್ತೀಚೆಗಷ್ಟೆ ಆಲಿಯಾ ಭಟ್ ನಟನೆಯ 'ಜಿಗ್ರಾ' ಸಿನಿಮಾ ಬಿಡುಗಡೆ ಆಗಿದೆ. ಸಿನಿಮಾವನ್ನು ಕರಣ್ ಜೋಹರ್ ನಿರ್ಮಾಣ ಮಾಡಿದ್ದಾರೆ. ಇದೊಂದು ಮಹಿಳಾ ಪ್ರಧಾನ ಸಿನಿಮಾ ಆಗಿದ್ದು, ಆಲಿಯಾ ಭಟ್ ಸಖತ್ ಆಕ್ಷನ್ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದಾರೆ. ತಮ್ಮ ಸಹೋದರನನ್ನು ಕಾಪಾಡಲು ಹೋರಾಡುವ ಅಕ್ಕನ ಪಾತ್ರದಲ್ಲಿ ಆಲಿಯಾ ನಟಿಸಿದ್ದಾರೆ.

# ಸಿಂಗಂ ಅಗೇನ್ ರಿಲೀಸ್‌ಗೂ ಮೊದಲು ಬಿಡುಗಡೆ ಕಾಣ್ತಿದೆ ಸಿಂಘಂ

ಭಾರಿ ತಾರಾಗಣ ಹೊಂದಿರುವ 'ಸಿಂಘಂ ಅಗೇನ್' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಈ ಸಿನಿಮಾದ ಬಿಡುಗಡೆಗೆ ಮುಂಚೆ 'ಸಿಂಘಂ' ಸಿನಿಮಾ ಮರು ಬಿಡುಗಡೆ ಆಗಲಿದೆ. ರೋಹಿತ್ ಶೆಟ್ಟಿ ಅವರು ಬಾಲಿವುಡ್‌ನಲ್ಲಿ ಹಲವು ಸಿನಿಮಾಗಳನ್ನು ಮಾಡಿದ್ದಾರೆ. ಅದರಲ್ಲೂ ಅವರ ಕಾಪ್ ಯೂನಿವರ್ಸ್ ಹೆಚ್ಚು ಗಮನ ಸೆಳೆದಿದೆ. ಅವರ ನಿರ್ದೇಶನದ 'ಸಿಂಗಂ' ಚಿತ್ರವು ಸೂಪರ್ ಹಿಟ್ ಆಗಿತ್ತು. ಈ ಕಾಪ್ ಯೂನಿವರ್ಸ್ ಅಡಿಯಲ್ಲಿ 'ಸಿಂಬಾ',



'ಸೂರ್ಯವಂಶಿ' ಸಿನಿಮಾಗಳು ಬರುತ್ತವೆ. ಈಗ ಈ ಪಾತ್ರಗಳನ್ನು ಇಟ್ಟುಕೊಂಡು ರೋಹಿತ್ ಶೆಟ್ಟಿ 'ಸಿಂಗಂ ಅಗೇನ್' ಸಿನಿಮಾ ಮಾಡಿದ್ದು, ದೀಪಾವಳಿಗೆ ಬಿಡುಗಡೆ ಕಾಣುತ್ತಿದೆ. ಅದಕ್ಕೂ ಮೊದಲು ಒಂದು ಸಿಹಿ ಸುದ್ದಿ ಇದೆ. 'ಸಿಂಗಂ ಅಗೇನ್' ಅಥವಾ 'ಸಿಂಗಂ 3' ಅನ್ನೋದು 'ಸಿಂಗಂ' ಚಿತ್ರದ ಮುಂದುವರಿದ ಭಾಗವೇ ಆಗಿದೆ. ಈ ಚಿತ್ರವನ್ನು ನೋಡಬೇಕು ಎಂದರೆ ಅದರ ಹಿಂದಿನ ಸಿನಿಮಾ ನೋಡಿರಬೇಕು. ಈ ಕಾರಣದಿಂದಲೇ ಸಿಂಗಂನ ಮೂಲ ಕಥೆ ನೆನಪು ಮಾಡಿಸಲು 'ಸಿಂಗಂ' ಚಿತ್ರವನ್ನು ರೀ ರಿಲೀಸ್ ಮಾಡಲಾಗುತ್ತಿದೆ. ಅಕ್ಟೋಬರ್ 18 ಅಂದರೆ ಮುಂದಿನ ಶುಕ್ರವಾರ 'ಸಿಂಗಂ' ಸಿನಿಮಾ ರಿಲೀಸ್ ಆಗುತ್ತಿದೆ.

# ಜಾಮ್ ನಗರ ಸಿಂಹಾಸನದ ಉತ್ತರಾಧಿಕಾರಿ ಜಡೇಜಾ

ಅಜಯ್ ಜಡೇಜಾ 1992-2000 ರ ನಡುವೆ ಟೀಮ್ ಇಂಡಿಯಾ ಪರ 15 ಟೆಸ್ಟ್ ಪಂದ್ಯಗಳು ಮತ್ತು 196 ಏಕದಿನ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ ಒಟ್ಟು 5935 ರನ್ ಕಲೆಹಾಕಿದ್ದಾರೆ. ಅಷ್ಟೇ ಅಲ್ಲದೆ 2023ರ ಏಕದಿನ ವಿಶ್ವಕಪ್ ವೇಳೆ ಅಫ್ಘಾನಿಸ್ತಾನ್ ತಂಡದ ಮೆಂಟರ್ ಆಗಿಯೂ ಜಡೇಜಾ ಕಾರ್ಯ ನಿರ್ವಹಿಸಿದ್ದರು. ಟೀಮ್ ಇಂಡಿಯಾದ ಮಾಜಿ ಕ್ರಿಕೆಟಿಗ ಅಜಯ್ ಜಡೇಜಾ ಅವರನ್ನು ಜಾಮ್ ನಗರದ ಸಿಂಹಾಸನದ ಉತ್ತರಾಧಿಕಾರಿ ಎಂದು ಘೋಷಿಸಲಾಗಿದೆ. ಅದರಂತೆ ಮುಂಬರುವ ದಿನಗಳಲ್ಲಿ ಜಡೇಜಾ, ಜಾಮ್ ನಗರ (ನವನಗರ) ರಾಜಮನೆತನದ ಜಾಮ್ ಸಾಹೇಬ್ ಆಗಿ ಕಾಣಿಸಿಕೊಳ್ಳಲಿದ್ದಾರೆ.

ಗುಜರಾತ್‌ನ ಜಾಮ್ ನಗರದ ಜಾಮ್ ಸಾಹೇಬ್ ಶತ್ರುಸಲ್ಯಸಿನ್‌ಜಿ ಅವರು ದಸರಾ ದಿನದಂದು ಅಜಯ್ ಜಡೇಜಾ ಅವರನ್ನು ಮುಂದಿನ ಉತ್ತರಾಧಿಕಾರಿ ಎಂದು ಘೋಷಿಸಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿ ಜಾಮ್ ಸಾಹೇಬ್ ಪತ್ರ ಬರೆದಿದ್ದು, ದಸರಾ ದಿನದಂದು ಪಾಂಡವರು ವನವಾಸದಿಂದ ವಿಜಯಶಾಲಿಯಾಗಿ ಮರಳಿದರು. ಈ ಶುಭ ಸಂದರ್ಭದಲ್ಲಿ, ನನ್ನ ಸಂದಿಗ್ಧತೆ ಕೊನೆಗೊಂಡಿದೆ. ಅಜಯ್ ಜಡೇಜಾ ಅವರನ್ನು ನನ್ನ ಉತ್ತರಾಧಿಕಾರಿಯನ್ನಾಗಿ ಮಾಡಲು ನಿರ್ಧರಿಸಿದ್ದೇನೆ. ಅವರು ಜಾಮ್ ನಗರದ ಜನರ ಆಶೀರ್ವಾದವನ್ನು ಪಡೆಯಲಿದ್ದಾರೆ. ಅಲ್ಲದೆ ಜನರಿಗಾಗಿ ಅವರು ಸಂಪೂರ್ಣ ಭಕ್ತಿಯಿಂದ ಸೇವೆ ಸಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಜಾಮ್ ಸಾಹೇಬ್ ತಿಳಿಸಿದ್ದಾರೆ.

ಅಜಯ್ ಜಡೇಜಾ ಅವರಿಗೆ ಪ್ರಸ್ತುತ ಜಾಮ್ ನಗರದ ಜಾಮ್ ಸಾಹೇಬ್ ಶತ್ರುಸಲ್ಯಸಿನ್‌ಜಿ ಅವರು ತುಂಬಾ ಆಪ್ತರು.

## ಅಜಯ್ ಜಡೇಜಾ ಅವರ ಆಯ್ಕೆ ಯಾಕೆ

**ಮಾಜಿ ಕ್ರಿಕೆಟಿಗ ಅಜಯ್ ಜಡೇಜಾ ಜಾಮ್ ನಗರದ ರಾಜಮನೆತನಕ್ಕೆ ಸೇರಿದವರು. ಇದಲ್ಲದೆ, ಅವರು ರಣಜಿತ್ ಸಿನ್‌ಜಿ ಜಡೇಜಾ ಮತ್ತು ದುಲೀಪ್‌ಸಿನ್‌ಜಿ ಜಡೇಜಾ ಅವರ ಕುಟುಂಬದವರು. ರಣಜಿತ್‌ಸಿನ್‌ಜಿ ಅವರ ಹೆಸರಿನಲ್ಲಿಯೇ ಭಾರತದಲ್ಲಿ ರಣಜಿ ಟ್ರೋಫಿ ಪಂದ್ಯಗಳನ್ನು ಆಯೋಜಿಸಲಾಗುತ್ತದೆ. ಹಾಗೆಯೇ ದುಲೀಪ್‌ಸಿನ್‌ಜಿ ಹೆಸರಿನಲ್ಲಿ ದುಲೀಪ್ ಟ್ರೋಫಿಗಳನ್ನು ಆಡಲಾಗುತ್ತದೆ. ನವನಗರದ ರಾಜಪ್ರಭುತ್ವದ ರಾಜ್ಯಾಡಳಿ ಮಾಡಿದ್ದ ರಣಜಿತ್ ಸಿನ್‌ಜಿ ಜಡೇಜಾ ಮತ್ತು ದುಲೀಪ್‌ಸಿನ್‌ಜಿ ಜಡೇಜಾ ಕ್ರಿಕೆಟಿಗರಾಗಿಯೂ ಮಿಂಚಿದ್ದರು. ಭಾರತೀಯ ಕ್ರಿಕೆಟ್‌ಗೆ ಇವರು ನೀಡಿದ ಕೊಡುಗೆಗಳಿಗಾಗಿ ಅವರ ಹೆಸರಿನಲ್ಲಿ ದೇಶೀಯ ಟೂರ್ನಿಯನ್ನು ಆಯೋಜಿಸಲಾಗುತ್ತಿದೆ. ಇದೀಗ 85 ವರ್ಷದ ಶತ್ರುಸಲ್ಯಸಿನ್‌ಜಿ ತಮಗೆ ಮಕ್ಕಳಿಲ್ಲದ ಕಾರಣ ಉತ್ತರಾಧಿಕಾರಿಯನ್ನು ಹೆಸರಿಬೇಕಾದ ಅನಿವಾರ್ಯತೆ ಎದುರಾಗಿದೆ. ಇದೇ ಕಾರಣಕ್ಕೆ ಅವರು ಈಗಾಗಲೇ ಖ್ಯಾತಿಗಳಿಸಿರುವ ಅಜಯ್ ಜಡೇಜಾ ಅವರನ್ನು ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದ್ದಾರೆ.**



# ಟೀಮ್ ಇಂಡಿಯಾ ಮೀಸಲು ಆಟಗಾರರಾಗಿ ನಾಲ್ವರು ಆಯ್ಕೆ

## ಯಾವುದಾದರೂ ಆಟಗಾರರು ಗಾಯಗೊಂಡರೆ, ಮೀಸಲು ಆಟಗಾರರ ಪಟ್ಟಿಯಿಂದ ಬದಲಿಯಾಗಿ ಆಯ್ಕೆ

ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಟೆಸ್ಟ್ ಸರಣಿಯು ಅಕ್ಟೋಬರ್ 15 ರಿಂದ ಶುರುವಾಗಲಿದೆ. ಈ ಸರಣಿಯ ಮೊದಲ ಪಂದ್ಯವು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಅಕ್ಟೋಬರ್ 24 ರಿಂದ ಶುರುವಾಗಲಿರುವ 2ನೇ ಪಂದ್ಯಕ್ಕೆ ಪುಣೆ ಎಂಸಿಎ ಸ್ಟೇಡಿಯಂ ಆತಿಥ್ಯ ವಹಿಸಲಿದೆ. ನ್ಯೂಝಿಲೆಂಡ್ ವಿರುದ್ಧದ ಟೆಸ್ಟ್ ಸರಣಿಗಾಗಿ 15 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಈ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸಲಿದ್ದು, ಉಪನಾಯಕರಾಗಿ ಜಸ್‌ಪ್ರೀತ್ ಬುಮ್ರಾ ಕಾಣಿಸಿಕೊಳ್ಳಲಿದ್ದಾರೆ. ಹಾಗೆಯೇ ಸರಣಿಗಾಗಿ ನಾಲ್ವರು ಆಟಗಾರರನ್ನು ಮೀಸಲು ಪಟ್ಟಿಯಲ್ಲಿರಿಸಲಾಗಿದೆ. ಅಂದರೆ ಟೀಮ್ ಇಂಡಿಯಾದ ಯಾವುದಾದರು ಆಟಗಾರರು ಗಾಯಗೊಂಡರೆ, ಮೀಸಲು ಆಟಗಾರರ ಪಟ್ಟಿಯಿಂದ ಬದಲಿಯಾಗಿ ಆಯ್ಕೆ ಮಾಡಲಾಗುತ್ತದೆ. ಇಲ್ಲಿ ಮೂವರು ವೇಗಿಗಳು ಹಾಗೂ ಓರ್ವ ಆಲ್‌ರೌಂಡರ್‌ನನ್ನು ಮೀಸಲು ಆಟಗಾರರಾಗಿ ಹೆಸರಿಸಲಾಗಿದೆ. ಅವರೆಂದರೆ ಮಯಾಂಕ್ ಯಾದವ್, ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ ಹಾಗೂ ನಿತೀಶ್ ಕುಮಾರ್ ರೆಡ್ಡಿ. ಇಲ್ಲಿ ಮಯಾಂಕ್, ಹರ್ಷಿತ್, ಪ್ರಸಿದ್ಧ್ ಕೃಷ್ಣ ವೇಗಿಗಳಾಗಿ ಆಯ್ಕೆಯಾದರೆ, ನಿತೀಶ್ ರೆಡ್ಡಿ ಹೆಚ್ಚುವರಿ ಆಲ್‌ರೌಂಡರ್ ಆಗಿ ಸ್ಥಾನ ಪಡೆದಿದ್ದಾರೆ. ಈ ಆಟಗಾರರು ನ್ಯೂಝಿಲೆಂಡ್ ವಿರುದ್ಧದ ಸರಣಿಯ ವೇಳೆ ಟೀಮ್ ಇಂಡಿಯಾ ಜೊತೆ ಕಾಣಿಸಿಕೊಳ್ಳಲಿದ್ದಾರೆ. ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯನ್ನು ಮುಂದಿಟ್ಟುಕೊಂಡು ಈ ಬಾರಿ ಮೀಸಲು ಆಟಗಾರರ ಪಟ್ಟಿಯಲ್ಲಿ ವೇಗಿಗಳಿಗೆ ಮಣೆ ಹಾಕಲಾಗಿದೆ. ಪ್ರಸ್ತುತ ಭಾರತ ತಂಡದಲ್ಲಿ ವೇಗದ ಬೌಲರ್‌ಗಳಾಗಿ ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬುಮ್ರಾ ಹಾಗೂ ಆಕಾಶ್ ದೀಪ್ ಕಾಣಿಸಿಕೊಂಡಿದ್ದಾರೆ. ಇದೀಗ ಮೀಸಲು ವೇಗದ ಬೌಲರ್‌ಗಳಾಗಿ ಹರ್ಷಿತ್ ರಾಣಾ, ಮಯಾಂಕ್ ಯಾದವ್, ಪ್ರಸಿದ್ಧ್ ಕೃಷ್ಣಗೆ ಚಾನ್ಸ್ ನೀಡಲಾಗಿದೆ. ಹಾಗೆಯೇ ಆಲ್‌ರೌಂಡರ್ ಆಗಿ ರಿಸರ್ವ್ ಪಟ್ಟಿಯಲ್ಲಿ ಆಯ್ಕೆಯಾಗಿರುವ ನಿತೀಶ್ ರೆಡ್ಡಿ ಕೂಡ ವೇಗದ ಬೌಲಿಂಗ್ ಆಲ್‌ರೌಂಡರ್ ಎಂಬುದು ವಿಶೇಷ. ಅಂದರೆ ಇಲ್ಲಿ ವೇಗಿಗಳಿಗೆ ಬಿಸಿಸಿಐ ಆಯ್ಕೆ ಸಮಿತಿ ಒತ್ತು ನೀಡಿರುವುದು ಸ್ಪಷ್ಟ.



**ಭಾರತ ಟೆಸ್ಟ್ ತಂಡ:** ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬುಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭ್ ಮನ್ ಗಿಲ್, ವಿರಾಟ್ ಕೊಹ್ಲಿ, ಕೆಎಲ್ ರಾಹುಲ್, ಸರ್ಫರಾಝ್ ಖಾನ್, ರಿಷಭ್ ಪಂತ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ಅಶ್ವಿನ್, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್.

### ಭಾರತ ಮತ್ತು ನ್ಯೂಝಿಲೆಂಡ್ ಸರಣಿ ಯಾವಾಗ ಶುರು

**ಭಾರತ ಮತ್ತು ನ್ಯೂಝಿಲೆಂಡ್ ನಡುವಣ ಟೆಸ್ಟ್ ಸರಣಿಯು ಅಕ್ಟೋಬರ್ 15 ರಿಂದ ಶುರುವಾಗಲಿದೆ. ಈ ಸರಣಿಯ ಮೊದಲ ಪಂದ್ಯವು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಅಕ್ಟೋಬರ್ 24 ರಿಂದ ಶುರುವಾಗಲಿರುವ 2ನೇ ಪಂದ್ಯಕ್ಕೆ ಪುಣೆ ಎಂಸಿಎ ಸ್ಟೇಡಿಯಂ ಆತಿಥ್ಯವಹಿಸಲಿದ್ದು, ಹಾಗೆಯೇ ನವೆಂಬರ್ 1 ರಿಂದ ಆರಂಭವಾಗಲಿರುವ ಮೂರನೇ ಪಂದ್ಯವು ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆಯಲಿದೆ.**

# 1343 ದಿನಗಳಿಂದ ಟೆಸ್ಟ್ ಪಂದ್ಯ ಗೆಲ್ಲದ ಪಾಕಿಸ್ತಾನ್..!

ಬರೋಬ್ಬರಿ 3 ವರ್ಷ, 8 ತಿಂಗಳು, 9 ದಿನಗಳು... ಪಾಕಿಸ್ತಾನ್ ತಂಡ ತವರಿನಲ್ಲಿ ಟೆಸ್ಟ್ ಪಂದ್ಯ ಗೆದ್ದು ಮೂರುವರೆ ವರ್ಷಗಳೇ ಕಳೆದಿವೆ. 2021 ರಲ್ಲಿ ಕೊನೆಯ ಬಾರಿಗೆ ತವರಿನಲ್ಲಿ ಟೆಸ್ಟ್ ಪಂದ್ಯ ಗೆದ್ದಿದ್ದ ಪಾಕ್ ತಂಡವು ಕಳೆದ ಮೂರು ವರ್ಷಗಳಿಂದ ಗೆಲುವಿಗಾಗಿ ಪರದಾಡುತ್ತಿದೆ.



ಈ ಪರದಾಟವು ಇದೀಗ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲೂ ಮುಂದುವರೆದಿದೆ. ಮುಲ್ತಾನ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪಾಕಿಸ್ತಾನ್ ತಂಡವು 556 ರನ್ ಕಲೆಹಾಕಿತು. ಇದಕ್ಕುತ್ತರವಾಗಿ 823/7 ರನ್ ಪೇರಿಸಿ ಇಂಗ್ಲೆಂಡ್ ಡಿಕ್ಲೇರ್ ಘೋಷಿಸಿತು. 267 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಪಾಕ್ ತಂಡವು ಕೇವಲ 220 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಭಾರೀ ಮುಖಭಂಗಕ್ಕೆ ಒಳಗಾಗಿದೆ.

ಕಳೆದ 3 ವರ್ಷಗಳಲ್ಲಿ ಪಾಕಿಸ್ತಾನ್ ತಂಡವು ತವರಿನಲ್ಲಿ ಒಟ್ಟು 11 ಟೆಸ್ಟ್ ಪಂದ್ಯಗಳನ್ನಾಡಿದೆ. ಈ ವೇಳೆ 4 ಮ್ಯಾಚ್‌ಗಳಲ್ಲಿ ಡ್ರಾ ಸಾಧಿಸಿದ್ದು ಶ್ರೇಷ್ಠ ಸಾಧನೆ. ಇನ್ನುಳಿದ 7 ಪಂದ್ಯಗಳಲ್ಲೂ ಸೋಲನುಭವಿಸಿದೆ. ಅಂದರೆ ಪಾಕಿಸ್ತಾನ್ ತಂಡವು ತವರಿನಲ್ಲಿ ಟೆಸ್ಟ್ ಪಂದ್ಯ ಗೆದ್ದು ಬರೋಬ್ಬರಿ 1,343 ದಿನಗಳೇ ಕಳೆದಿವೆ.

ಇಂತಹದೊಂದು ಸೋಲಿನ ಸರಪಳಿಗೆ ಸಿಲುಕಿದ್ದ ಪಾಕಿಸ್ತಾನ್ ತಂಡದ ನಾಯಕತ್ವದಿಂದ ಬಾಬರ್ ಆಝಂ ಅವರನ್ನು ಕೆಳಗಿಳಿಸಲಾಗಿತ್ತು. ಇದೀಗ ಶಾನ್ ಮಸೂದ್ ಮುಂದಾಳತ್ವದಲ್ಲಿ ಕಣಕ್ಕಿಳಿಯುತ್ತಿರುವ ಪಾಕ್ ಪಡೆಯು ಸತತ ಸೋಲುಗಳಿಂದ ಕಂಗೆಟ್ಟಿದೆ. ಈ ಸೋಲಿನೊಂದಿಗೆ ಪಾಕಿಸ್ತಾನ್ ತಂಡವು ಭಾರೀ ಮುಖಭಂಗಕ್ಕೆ ಒಳಗಾಗಿದ್ದು, ತಂಡದ ಪ್ರದರ್ಶನದ ಬಗ್ಗೆ ಮಾಜಿ ಕ್ರಿಕೆಟಿಗರು ಆಕ್ರೋಶ ಹೊರಹಾಕುತ್ತಿದ್ದಾರೆ.

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ತವರಿನಲ್ಲಿ ಸತತ ಸೋಲುಗಳನ್ನು ಕಂಡ ಅತ್ಯಂತ ಕೆಟ್ಟ ದಾಖಲೆ ಝಿಂಬಾಬ್ವೆ ತಂಡದ ಹೆಸರಿನಲ್ಲಿದೆ. ಝಿಂಬಾಬ್ವೆ ತಂಡವು ತವರಿನಲ್ಲಿ ಗೆದ್ದು 4030 ದಿನಗಳೇ ಕಳೆದಿವೆ. ಇದೀಗ 1,343 ದಿನಗಳ ನಡುವೆ ತವರಿನಲ್ಲಿ 11 ಟೆಸ್ಟ್ ಪಂದ್ಯಗಳನ್ನಾಡಿರುವ ಪಾಕಿಸ್ತಾನ್ ತಂಡವು ಗೆಲುವಿಗಾಗಿ ಪರಿತಪಿಸುತ್ತಿದೆ. ಈ ಪರಿತಪಿಸುವಿಕೆ ಹೀಗೆ ಮುಂದುವರೆದರೆ ತವರಿನಲ್ಲಿ ಟೆಸ್ಟ್ ಪಂದ್ಯ ಗೆಲ್ಲಲಾಗದ ಸುದೀರ್ಘಾವಧಿಯ ಕೆಟ್ಟ ದಾಖಲೆಯೊಂದು ಪಾಕ್ ಪಾಲಾಗಲಿದೆ.

# 3 ಬಾರಿ ಶೂನ್ಯಕ್ಕೆ ಔಟ್!



ಇದುವರೆಗೆ ಆಡಿರುವ ಯಾವ ದೇಶೀ ಪಂದ್ಯದಲ್ಲೂ ಶ್ರೇಯಸ್ ಬ್ಯಾಟ್ ಬಿಗ್ ಇನ್ನಿಂಗ್ಸ್ ಆಡಿಲ್ಲ. ಇದೀಗ ಆರಂಭವಾಗಿರುವ ರಣಜಿ ಟ್ರೋಫಿಯಲ್ಲೂ ಅಯ್ಯರ್ ಅವರ ಕಳಪೆ ಫಾರ್ಮ್ ಮುಂದುವರೆದಿದೆ. ರಣಜಿ ಟ್ರೋಫಿಯಲ್ಲಿ ಮುಂಬೈ ಪರ ಆಡುತ್ತಿರುವ ಅಯ್ಯರ್, ಬರೋಡಾ ವಿರುದ್ಧದ ಪಂದ್ಯದಲ್ಲಿ ಎಂಟು ಎಸೆತಗಳನ್ನು ಎದುರಿಸಿ ಖಾತೆ ತೆರೆಯದೆ ಔಟಾಗಿದ್ದಾರೆ. ಟೀಂ ಇಂಡಿಯಾದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಕೆಲವು ದಿನಗಳಿಂದ ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದಾರೆ. ಹೀಗಾಗಿಯೇ ಅವರನ್ನು ಟೀಂ ಇಂಡಿಯಾದಿಂದ ಹೊರಗಿಡಲಾಗಿದೆ. ಭಾರತ ತಂಡದಲ್ಲಿ ಸ್ಥಾನ ಪಡೆಯುವ ಸಲುವಾಗಿ ಇನ್ನಿಲ್ಲದ ಕಸರತ್ತು ಮಾಡುತ್ತಿರುವ ಶ್ರೇಯಸ್ ಅಯ್ಯರ್, ದೇಶೀ ಟೂರ್ನಿಯಲ್ಲಿ ನಿರತರಾಗಿದ್ದಾರೆ. ಆದರೆ ಇದುವರೆಗೆ ಆಡಿರುವ ಯಾವ ದೇಶೀ ಪಂದ್ಯದಲ್ಲೂ ಶ್ರೇಯಸ್ ಬ್ಯಾಟ್ ಬಿಗ್ ಇನ್ನಿಂಗ್ಸ್ ಆಡಿಲ್ಲ. ಇದೀಗ ಆರಂಭವಾಗಿರುವ ರಣಜಿ ಟ್ರೋಫಿಯಲ್ಲೂ ಅಯ್ಯರ್ ಅವರ ಕಳಪೆ ಫಾರ್ಮ್ ಮುಂದುವರೆದಿದೆ. ರಣಜಿ ಟ್ರೋಫಿಯಲ್ಲಿ ಮುಂಬೈ ಪರ ಆಡುತ್ತಿರುವ ಅಯ್ಯರ್, ಬರೋಡಾ ವಿರುದ್ಧದ ಪಂದ್ಯದಲ್ಲಿ ಎಂಟು ಎಸೆತಗಳನ್ನು ಎದುರಿಸಿ ಖಾತೆ ತೆರೆಯದೆ ಔಟಾಗಿದ್ದಾರೆ. ಈ ಮೂಲಕ ಅಯ್ಯರ್ ಈ ಬಾರಿಯ ದೇಶೀ ಆವೃತ್ತಿಯಲ್ಲಿ ಮೂರನೇ ಬಾರಿಗೆ ಶೂನ್ಯಕ್ಕೆ ಔಟಾದ ಬೇಡದ ದಾಖಲೆ ಬರೆದಿದ್ದಾರೆ. ಈ ಪಂದ್ಯದಲ್ಲಿ ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಅಯ್ಯರ್ ಅವರನ್ನು ಅನುಭವಿ ಎಡಗೈ ಸ್ಪಿನ್ನರ್ ಭಾರ್ಗವ್ ಭಟ್ ಪೆವಿಲಿಯನ್‌ಗೆ ಕಳುಹಿಸಿದರು. ರಣಜಿ ಟ್ರೋಫಿಗೂ ಮುನ್ನ ನಡೆದ ದುಲೀಪ್ ಟ್ರೋಫಿಯಲ್ಲೂ ಅಯ್ಯರ್ ಬ್ಯಾಟ್ ಮೌನಕ್ಕೆ ಶರಣಾಗಿತ್ತು. ಪಂದ್ಯಾವಳಿಯಲ್ಲಿ ಭಾರತ 'ಡಿ' ತಂಡದ ನಾಯಕತ್ವವಹಿಸಿಕೊಂಡಿದ್ದ ಅಯ್ಯರ್ ಎರಡು ಬಾರಿ ಶೂನ್ಯಕ್ಕೆ ಔಟಾಗಿದ್ದರು. ಇದೀಗ ರಣಜಿಯಲ್ಲೂ ಶೂನ್ಯ ಸಾಧನೆ ಮಾಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966